ಶ್ರೀ ಡಿ. ಕೆ. ನಾಯ್ಕರ್.—ನನಗೆ ಜಿಲ್ಲಾಧಿಕಾರಿಗಳಿಂದ ಉತ್ತರ ಬಂದ ಕೂಡಲೇ ಈ ವಿಚಾರದಲ್ಲಿ ನಾನು ಯೋಗ್ಯ ತನಿಖೆಗೆ ಕ್ರಮ ಕೈಗೊಳ್ಳುತ್ತೇನೆಂದು ಆಗಲೇ ಹೇಳಿದ್ದೇನೆ. ಇದಕ್ಕೂ ಹೆಚ್ಚು ನಾನು ಏನು ಹೇಳಲಿ !

ಅಧ್ಯಕ್ಷರು.—ಮಾನ್ಯ ಸದಸ್ಯರ ಜೊತೆಯಲ್ಲಿ ಮಾನ್ಯ ಸಚಿವರೂ ಹೋಗ ಬೇಕೇನೋ ? ಆಗ ಅವರಿಗೆ ಸಮಾಧಾನವಾಗುತ್ತದೆ. ಅದಕ್ಕೇನು ಮಾಡುವುದು.

BUDGET ESTIMATES FOR 1975—76

(General Discussion)

(Debate Continued)

2-30 P. M.

‡ ಶ್ರೀ ಎ. ಶಂಕರ ಆಳ್ವ (ಪುತ್ತೂರು) :—ಮಾನ್ಯ ಆರ್ಥಿಕ ಸಚಿವರ ಆಯವ್ಯಯ ಪಟ್ಟಿಯನ್ನು ಸಭೆಯ ಮುಂದಿಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಕೆಲವು ಮಾತುಗಳನ್ನಾಡುವುದು ಮತ್ತು ಅವರನ್ನು ಅಭಿನಂದಿಸುವುದು ಸಹಜ. ಏಕೆಂದರೆ ಎಲ್ಲರಿಗೂ ಸಮರ್ಪಕವಾಗುವ ರೀತಿಯಲ್ಲಿ ಬಡ್ಜೆಟ್ಟನ್ನು ಮಂಡಿಸು ವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದರೆ ಬಹಳ ಜಾಗರೂಕತೆಯಿಂದ ಒಳ್ಳೆಯ ರೀತಿ ಯಲ್ಲಿ ಕೆಲವು ನಿದರ್ಶನಗಳನ್ನು ಕೊಟ್ಟು ಸಮಗ್ರವಾದ ಒಂದು ಪತ್ರ ವನ್ನಿಟ್ಟಿದ್ದಾರೆಂದು ಹೇಳಲು ಬಯಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ಸೂಚನೆ ಗಳನ್ನು ಸಹ ಕೊಡಬೇಕೆಂದಿದ್ದೇನೆ.

ನಿನ್ನೆ ವಿರೋಧ ಪಕ್ಷದ ನಾಯಕರು ಬಡ್ಜೆಟ್ಟಿನ ವಿಷಯದಲ್ಲಿ ಕೆಲವು ಮಾತು ಗಳನ್ನಾಡಿದ್ದಾರೆ, ಅವರು ಮಾತನಾಡುವಾಗ ಸ್ವಲ್ಪ ಸಮಯ ಇರಲಿಲ್ಲ, ನಾನಿದ್ದಾಗ ಕೆಲವು ವಿಷಯಗಳನ್ನು ಹೇಳಿದ್ದಾರೆ, ಉಳಿದ ವಿಚಾರಗಳನ್ನು ಪತ್ರಿಕೆ ಯಲ್ಲಿ ನೋಡಿದೆ. ಅದನ್ನು ನೋಡಿ ಬಹಳ ಮಟ್ಟಿಗೆ ನನಗೆ ಸಮಾಧಾನವಾಗಿದೆ. ಆದರೆ ಮುಖ್ಯವಾಗಿ ಕೇಂದ್ರ ಸರ್ಕಾರದವರು ನಮಗೆ ವಿರೋಧವಾಗಿದ್ದಾರೆ ಮತ್ತು ಸಾಕಷ್ಟು ನಮ್ಮ ನೆರವಿಗೆ ಬರುವುದಿಲ್ಲ ಎಂದು ಹೇಳುವುದು ಸರಿಯಲ್ಲ, ಏಕೆಂದರೆ ಕೇಂದ್ರಕ್ಕೆ ನಮ್ಮ ರಾಜ್ಯವೊಂದೇ ಇಲ್ಲ, ಅನೇಕ ರಾಜ್ಯಗಳು ಸೇರಿವೆ. ಮತ್ತು ಯಾರು ಒಳ್ಳೆಯ ರೀತಿಯಿಂದ ಹಣವನ್ನುಪಯೋಗಿಸುವರೋ ಅಂಥವರಿಗೆ ಹೆಚ್ಚು ಪ್ರಮಾಣದಲ್ಲಿ ಸಹಾಯ ನೀಡುವರು ಮತ್ತು ಬಹಳ ಅಗತ್ಯವಿದ್ದ ಕೆಲವು ಸಂದರ್ಭಗಳಲ್ಲಿ ವಿಶೇಷ ರೀತಿಯಲ್ಲಿ ಅವರು ಹಣ ಸಹಾಯ ಮಾಡುವರು. ನಾವೂ ಸಹ ಜಾಗರೂಕರಾಗಿರಬೇಕು. ಏಕೆಂದರೆ ಕಾಳಿನದಿ ವಿಚಾರದಲ್ಲಿ ನಾವು

ಕೇಂದ್ರದವರನ್ನು ಬಹಳವಾಗಿ ನಂಬಿದ್ದೆವು. ಸ್ಪೆಷಲ್ ಗ್ರಾಂಟನ್ನು ಅದಕ್ಕೆ ಕೊಡಬಹುದೆಂದು ನಿರೀಕ್ಷೆ ಮಾಡಿದ್ದೆವು. ಮಂತ್ರಿಗಳು ಇದಕ್ಕೆ ಬೇಕಾದ ಹಣವನ್ನು ಬೇರೆ ರೀತಿಯಲ್ಲಿ ಸಂಗ್ರಹಿಸಲು ಪ್ರಯತ್ನಿಸುತ್ತಿರುವಂತೆ ಕಂಡು ಬರುವುದು. 21 ಕೋಟಿ ಬೇಕಾಗಬಹುದು ಎಂದಿದ್ದೆವು, ಪ್ಲಾನಿಂಗ್ ಕಮಿಷನ್ ಪ್ರಕಾರ 31 ಕೋಟಿ ಈಗ ಬೇಕು, ಆ ಹಣವನ್ನು ನಿರೀಕ್ಷೆ ಮಾಡುತ್ತಿದ್ದೇವೆ ಎಂದು ಹೇಳುವರು. ಈ ವಿಷಯದಲ್ಲಿ ವರ್ಲ್ಡ್ ಬ್ಯಾಂಕಿನಿಂದಾಗಲೀ ಅಥವಾ ಅಯಿಲ್‌ಗೆ ಸಂಬಂಧಪಟ್ಟ ದೇಶಗಳಿಂದಾಗಲಿ ಸಹಾಯ ಪಡೆಯಲು ಸಾಧ್ಯ ವಾದೀತು ಎಂಬ ಆಶೆಯನ್ನು ವ್ಯಕ್ತ ಮಾಡಿದ್ದಾರೆ. ಈ ವಿಷಯದಲ್ಲೇನು ಮಾಡಿದ್ದಾರೆಂಬುದನ್ನು ತಿಳಿಸುವುದು ಅತ್ಯಗತ್ಯ. ಮೊನ್ನೆ ತಾನೇ ಪತ್ರಿಕೆಯಲ್ಲಿ ಓದಿದೆವು, ಮುಖ್ಯಮಂತ್ರಿಗಳು ಸುಬ್ರಹ್ಮಣ್ಯಂರವರನ್ನು ನೋಡಿದರು ಎಂದು ಪ್ರಕಟವಾಗಿತ್ತು. ಆದರೆ ವರ್ಲ್ಡ್ ಬ್ಯಾಂಕ್ ವಿಷಯವಾಗಲಿ ಯಾವುದೇ ಆಗಲಿ ಪ್ರಸ್ತಾಪಿಸಿಲ್ಲ ಎಂದು ತಿಳಿಸಿದ್ದಾರೆ. ಅಧ್ಯಕ್ಷರೇ, ತಮಗೆ ಗೊತ್ತಿರಬೇಕು, ಈಗ ದೆಹಲಿಯಲ್ಲಿ ನಮ್ಮ ಒಬ್ಬ ಸ್ಪೆಷಲ್ ಡಿ. ಸಿ. ಇದ್ದಾರೆ, ಅವರು ಲೈಸಾನ್ ಆಫೀಸರ್. ನಾನು ಪಾರ್ಲಿಮೆಂಟಿನಲ್ಲಿದ್ದಾಗ ಒಬ್ಬ ಕೇಂದ್ರದ ಮಂತ್ರಿಗಳು ಹೇಳುತ್ತಿದ್ದರು, ಕೆಲವು ಯೋಜನೆಗಳಿರುತ್ತವೆ, ವರ್ಲ್ಡ್ ಬ್ಯಾಂಕ್ ಅಥವ ಕಾಮನ್‌ವೆಲ್ತ್ ಇಂಥ ಸಂಸ್ಥೆಗಳಿಂದ ಹಣ ಬರುತ್ತದೆ, ಆದರೆ ಅದಕ್ಕೆ ಸರಿಯಾದ ಯೋಜನೆ ತಯಾರಿಸಿ ಕೇಂದ್ರಕ್ಕೆ ಕೊಡದೇ ಹೋದರೆ ಅದನ್ನು ಮಂಜೂರು ಮಾಡುವುದಿಲ್ಲ, ಬೇರೆ ರಾಜ್ಯದವರು ಶೀಘ್ರದಲ್ಲಿ ಯೋಜನೆ ಮಾಡಿ ಅದನ್ನು ಪಡೆಯುವರು ಎಂದು. ಇಂಥ ಸಂದರ್ಭದಲ್ಲಿ ದೆಹಲಿಗೆ ಬಂದು ಹಣ ಸಹಾಯ ವನ್ನು ಪಡೆದುಕೊಂಡು ಹೋಗುವರು ಎಂದು ಹೇಳುತ್ತಿದ್ದರು. ನಾನು ಪಾರ್ಲಿ ಮೆಂಟಿನಲ್ಲಿದ್ದಾಗ ನಾಲ್ಕೈದು ವರ್ಷ ಕನ್‌ವೀನರ್ ಆಗಿದ್ದೆ.

ಆಗ ಮುಖ್ಯಮಂತ್ರಿಗಳಿಗೆ ಸ್ಪೆಷಲ್ ಆಫೀಸರನ್ನು ನೇಮಕ ಮಾಡಬೇಕು, ಅವರು ಹೆಚ್ಚಿನ ವಿಷಯಗಳನ್ನು ತಿಳಿದು ತಿಳಿಸಬೇಕು, ಎಲ್ಲಾ ಆಫೀಸುಗಳಿಗೂ ಹೋಗಬೇಕು, ಯಾವುದಕ್ಕೆ ಹಣ ಸಿಕ್ಕುವುದು ಎಂದು ತಿಳಿದು ವಿಚಾರ ತಿಳಿಸ ಬೇಕು ಎಂದು ನಮ್ಮ ಪಕ್ಷದ ಸದಸ್ಯರು ತಿಳಿಸಿದೆವು. ಆದಕ್ಕಾಗಿ ಒಬ್ಬ ಹೈ-ಗ್ರೇಡ್ ಆಫೀಸರನ್ನು ಸ್ಪೆಷಲ್ಲಾಗಿ ನೇಮಕ ಮಾಡಬೇಕೆಂದು ಹೇಳಿದಾಗ ನೇಮಿಸಿದರು. ಅವರು ಎಲ್ಲವನ್ನೂ ತಿಳಿಯುವುದಕ್ಕಾಗುವುದಿಲ್ಲ. ಅವರು ಮೈಸೂರು ಹೌಸಿನಲ್ಲಿರು ವರು. ವರ್ಲ್ಡ್ ಬ್ಯಾಂಕಿನ ಮೂಲಕ ನೆರವು ಸಿಕ್ಕುವುದೆಂದು ಮಂತ್ರಿಗಳಿಗೆ ತಿಳಿಸ ಲಾಗಿತ್ತು. ಕೆಲವು ಸಂದರ್ಭಗಳಲ್ಲಿ ವರ್ಲ್ಡ್ ಬ್ಯಾಂಕು ನಮಗೇ ಪ್ರತ್ಯೇಕ ಸಹಾಯ ನೀಡುವುದಿಲ್ಲ, ಇಂಡಿಯಾ ಸರಕಾರಕ್ಕೆ ನೀರಾವರಿ, ವಿದ್ಯುಚ್ಛಕ್ತಿ ಮಾರ್ಕೆಟಿಂಗ್ ಡೈರಿ ಮುಂತಾದ ಬಾಬುಗಳಿಗಾಗಿ ಇಷ್ಟು ಕೊಡುತ್ತೇವೆ ಎಂದು ಮಂಜೂರು ಮಾಡುವರು. ಆಗ ಯಾವ ಯೋಜನೆ ಕಾರ್ಯಗತವಾಗುವುದಕ್ಕೆ ಸಾಧ್ಯ ಎಂದು ವಿಚಾರ ಮಾಡಿ ವರದಿಯನ್ನು ವರ್ಲ್ಡ್ ಬ್ಯಾಂಕಿಗೆ ಕಳಿಸುವರು. ನಂತರ ತಜ್ಞರು

(ಶ್ರೀ ಎ. ಶಂಕರ ಆಳ್ವ)

ಬರುವರು. ಅವರು ಹಣ ಕೊಟ್ಟರೆ ವಾಪಸ್ಸು ಕೊಡಲು ಅನುಕೂಲವಿದೆಯೋ, ಯಾವ ರೀತಿ ವಿನಿಯೋಗ ಮಾಡುವರು, ಸರಿಯಾಗಿ ಕೆಲಸಮಾಡುವರೇ ಎಂಬ ವಿವರವನ್ನು ಪಡೆಯುವರು. ಎರಡು ಮೂರು ಸಂದರ್ಭಗಳಲ್ಲಿ ಇಂಥ ತಂಡದವರೊಡನೆ ನಾವು ಆಗಾಗ್ಗ ಆಲೋಚಿಸಿದುಂಟು. ಬಹಳ ತಜ್ಞರು ಅವರು. ಪ್ರತಿಯೊಬ್ಬರೂ ಬಹಳ ಜಾಗರೂಕತೆಯಿಂದ ಪರಿಶೀಲಿಸುವರು. ಅಂಥ ಸಂದರ್ಭದಲ್ಲಿ ಕೇಂದ್ರ ಸರಕಾರಕ್ಕೆ ಸರಿಯಾಗಿ ಕಾರ್ಯಗತವಾಗುವಂಥ ಯೋಜನೆ ಕಳಿಸಿದರೆ ಸಕಾಲದಲ್ಲಿ ಸಹಾಯ ಕೇಳಿದರೆ ದೊರೆಯಲು ಅವಕಾಶವಿದೆ. ಮೊನ್ನೆ ತಾನೇ ಪ್ರಧಾನಿ ಯವರು ಮದ್ರಾಸಿಗೆ ಬಂದಿದ್ದರು, ಅಲ್ಲಿ ಅಭಾವ ಬಹಳವಾಗಿದೆ. ಆಗ ಒಂದು ಮಾತು ಹೇಳಿದರು, ನಾವು ಅಭಾವ ನೀಗಲು ಹಣ ಸಹಾಯ ಕೊಡುವುದು ನಿಜ. ಅದನ್ನು ಆ ಕಾರ್ಯಕ್ಕೇ ಉಪಯೋಗಿಸಬೇಕು ಎಂದು ಹೇಳಿದರು. ಆ ವಿಷಯ ವನ್ನು ಪತ್ರಿಕೆಯಲ್ಲಿ ನೋಡಿದ್ದೇವೆ. ಈ ವರ್ಷ ನಾವು ಒಳ್ಳೆಯ ಸ್ಥಿತಿಯಲ್ಲಿ ದ್ದೇವೆ, ಎರಡು ವರ್ಷಗಳಿಗೆ ಮುಂಚೆ ನಮ್ಮಲ್ಲಿ ಬಹಳ ಅಭಾವವಿತ್ತು, ಕುಡಿಯಲು ನೀರಿರಲಿಲ್ಲ, ದನಗಳು ಸಾಯುತ್ತಿದ್ದುವು, ಬಿಜಾಪುರ, ಗುಲ್ಬರ್ಗ, ರಾಯಚೂರು ಮುಂತಾದ ಕಡೆಗಳಲ್ಲಿ ಬಹಳ ಅಭಾವವಿತ್ತು. ಅಂಥ ಸಂದರ್ಭದಲ್ಲಿ ಬಹಳವಾಗಿ ಕೇಂದ್ರದವರು ನಮ್ಮ ನೆರವಿಗೆ ಬಂದರು. ಪತ್ರಿಕೆಯ ಪ್ರಕಾರ ನಂತರ ಪ್ಲಾನಿಂಗ್ ಕಮಿಷನ್ನಿನ ಒಂದು ತಂಡ ನಮ್ಮಲ್ಲಿಗೆ ಬಂತು. ಎಷ್ಟು ಖರ್ಚಾಗಿದೆ ಎಂದು ವ್ಯಾಲ್ಯುಯೇಷನ್ ಮಾಡಿತು. ಈ ಸದನದಲ್ಲಿ ಎಲ್ಲಾ ಸದಸ್ಯರೂ ಅಭಾವಕ್ಕಾಗಿ ಕೊಟ್ಟ ಹಣ ಸರಿಯಾಗಿ ಖರ್ಚಾಗಿಲ್ಲ, ಕೆಲವು ಸಂದರ್ಭಗಳಲ್ಲಿ ಕೂಲಿ ಮಾಡಿದವರಿಗೆಂದು ಎಷ್ಟು ಜನರಿಗೆ ಹಣ ಕೊಟ್ಟೇವೆಂದು ಹೇಳಿದರೋ ಅಷ್ಟು ಜನ ರಿರಲಿಲ್ಲ, ಬಹಳ ದುರುಪಯೋಗವಾಗಿದೆ ಎಂದು ಟೀಕೆ ಮಾಡಿದ್ದುಂಟು. ಈ ವಿಷಯದಲ್ಲಿ ವಿವರಣೆ ಕೊಡಬೇಕು. ವ್ಯಾಲ್ಯುಯೇಷನ್ ಮಾಡಿದವರೇನು ಹೇಳಿ ದ್ದಾರೆ, ಎಲ್ಲಾ ಹಣ ಸರಿಯಾಗಿ ಖರ್ಚಾಗಿದೆಯೇ ಎಂಬ ವಿವರಬೇಕು.

ಇನ್ನೊಂದು, ಫುಡ್ ಷಾರ್ಟೇಜ್ ಮತ್ತು ಇನ್‌ಫ್ಲೇಷನ್ ಎಲ್ಲಾ ಕಡೆ ಇದೆ, ನಮ್ಮ ರಾಜ್ಯದಲ್ಲಿ ಮಾತ್ರವಲ್ಲ.

ಇದಕ್ಕೆ ಸರ್ಕಾರದವರನ್ನು ಹೊಣೆ ಮಾಡುವುದು ಸರಿಯಲ್ಲ. ಇಡೀ ಪ್ರಪಂಚ ದಲ್ಲಿ ಇನ್‌ಫ್ಲೇಷನ್ ಇರುವಾಗ ನಮ್ಮಲ್ಲಿ ಮಾತ್ರ ಅದನ್ನು ತಡೆಗಟ್ಟಲಿಲ್ಲ. ಎಂದು ಹೇಳಿದರೆ, ಅದು ಕಷ್ಟವಾಗುತ್ತದೆ. ಆದರೆ ನಾವೂ ಸಹ ಅದಷ್ಟು ಮಟ್ಟಿಗೆ ಪ್ರಯತ್ನ ಮಾಡಿ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಇಂಥ ಸಂದರ್ಭ ದಲ್ಲಿ ನಮ್ಮ ಖರ್ಚನ್ನೂ ಆದಷ್ಟುಮಟ್ಟಿಗೆ ಸೂಕ್ಷ್ಮವಾಗಿ ಕಡಿಮೆ ಮಾಡುವುದು ಅತ್ಯ ಅಗತ್ಯ. ಏಕೆಂದರೆ, ಒಂದು ವಿಷಯವನ್ನು ಇಲ್ಲಿ ಉದಾಹರಿಸುವುದಾದರೆ, ಫಿಲಂ

ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಹೋದವರ್ಷ 50 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿದ್ದರು, ಈ ವರ್ಷ ಅದನ್ನು ಒಂದು ಲಕ್ಷಕ್ಕೆ ಏರಿಸಿದ್ದಾರೆ. ಇಂಥ ಸಂದರ್ಭದಲ್ಲಿ ಇದು ಸರಿಯಲ್ಲ ನಾವು ಯಾವುದಕ್ಕೆ ಪ್ರಯಾರಿಟಿ ಕೊಡಬೇಕು, ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಫಿಲಂ ಡೆವಲಪ್‌ಮೆಂಟ್ ಆಗಬೇಕು, ಟೂರಿಸಂ ಡೆವಲಪ್‌ಮೆಂಟ್ ಆಗಬೇಕು, ಆದರೆ ಇಂಥ ಒಂದು ಸಂದರ್ಭದಲ್ಲಿ ನಾವು ಯಾವುದಕ್ಕೆ ಪ್ರಯಾರಿಟಿ ಕೊಡಬೇಕು ಎಂಬುದನ್ನು ನೋಡಿ ಕೊಡಬೇಕು. ಇರಿಗೇಷನ್, ಎಲೆಕ್ಟ್ರಿಸಿಟಿ ಮತ್ತು ಫರ್ಟಿಲೈಸರ್ಸ್ ಇವೆಲ್ಲಾ ವ್ಯವಸಾಯಕ್ಕೆ ಅಗತ್ಯವಾಗಿ ಬೇಕು, ಇದರ ಮಟ್ಟಿಗೆ ಆದ್ಯತೆಯನ್ನು ನೀಡುವುದು ಅತ್ಯಗತ್ಯ. ನಮ್ಮ ದೇಶದಲ್ಲಿ ಆಹಾರದ ಕೊರತೆ ಎಷ್ಟಿದೆ ಯೆಂಬುದು ಎಲ್ಲರಿಗೂ ಗೊತ್ತಿದೆ. ಮಳೆ ಬಂದರೆ ಬೆಳೆಯೂ ಚೆನ್ನಾಗಿ ಆಗುತ್ತದೆ. ಆದರೆ ನಾವು ಎಂಥ ಕಷ್ಟ ಸನ್ನಿವೇಶಗಳಿಗೂ ತಯಾರಾಗಿರಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ನಾವು ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಎಲ್ಲಾ ಕಡೆಯಲ್ಲಿಯೂ ನಾವು ಖರ್ಚು ಕಡಿಮೆ ಮಾಡುವುದು ಬೇಕಾಗಿಲ್ಲ. ಯಾವುದರಲ್ಲಿ ನಾವು ಉಳಿತಾಯ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುವುದು ಅಗತ್ಯ. ನಾನು ಕಳೆದ ವರ್ಷ ತಮಗೊಂದು ಸ್ಟಾರ್ಡ್ ಕೊಶ್ಚನ್ ಕಳುಹಿಸಿಕೊಟ್ಟಿದ್ದೆನು. ನಾನು ಸವಾಲು ಕಳುಹಿಸಿಕೊಟ್ಟರೆ ಅದರ ಪ್ರಕಾರ ತಾವು ಸರ್ಕಾರದವರಿಗೆ ಕಳುಹಿಸಿಕೊಟ್ಟಿದ್ದೀರಿ. ರೂಲ್ ಪ್ರಕಾರ 15 ದಿವಸಗಳೊಳಗಾಗಿ ಸರ್ಕಾರದವರು ಜವಾಬು ಬರಬೇಕು ಬಾರದಿದ್ದರೆ, ಅವರು ತಮಗೆ ತಿಳಿಸಬೇಕು, ಇಂಥ ಸಂದರ್ಭದಲ್ಲಿ ನಾವು ಉತ್ತರವನ್ನು ಕಳುಹಿಸಲಿಕ್ಕೆ ಆಗಲಿಲ್ಲ ಎಂದು. ಸುಮಾರು ಸಮಯದ ನಂತರ ತಮ್ಮಿಂದ ನನಗೆ ಒಂದು ಪತ್ರ ಬಂತು, ಏನೆಂದರೆ ನನ್ನ ಕೊಶ್ಚನ್‌ಅನ್ನು ಅನ್‌ಸ್ಟಾರ್ಡ್ ಮಾಡಿದ್ದೇವೆಂದು. ಇದರ ಬಗ್ಗೆ ನನ್ನದು ಒಂದು ಅಭಿಪ್ರಾಯ ಏನೆಂದರೆ, ಅನೇಕ ಸಮಿತಿಗಳನ್ನು ನಾವು ಮಾಡುತ್ತೇವೆ, ಸ್ಟೇಟ್ ಕಾರ್ಪೊರೇಷನ್ಸ್, ಸ್ಟೇಟ್ ಬೋರ್ಡ್ಸ್ ಇತ್ಯಾದಿಗಳನ್ನು. ಇವುಗಳ ಬಗ್ಗೆ ಮಾನ್ಯ ದೇವೇಗೌಡರು ಆಗಲೇ ಪ್ರಸ್ತಾಪ ಮಾಡಿದ್ದಾರೆ. ಇಂಥ ಕೆಲವು ಸಮಿತಿಗಳಲ್ಲಿ ಮಂತ್ರಿಗಳಾಗಲೀ ಆಫೀಸರ್ಸ್ ಆಗಲೀ ಇರುತ್ತಾರೆ. ಇಂಥ ಸಮಿತಿಗಳಲ್ಲಿ ನಾವು ನಾನ್ ಆಫಿಷಿಯಲ್ ಅನ್ನು ಚೇರ್ಮನ್ ಆಗಿ ಮಾಡಿಕೊಂಡು ಹೆಚ್ಚು ಹಣವನ್ನು ಅಲ್ಲಿ ನಾವು ಖರ್ಚು ಮಾಡುತ್ತೇವೆ. ಇದರಲ್ಲಿ ಎರಡು ವಿಷಯಗಳನ್ನು ನಾವು ಆಲೋಚನೆ ಮಾಡಬೇಕು. ಒಂದನೆಯದಾಗಿ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದರಲ್ಲಿ ಚೇರ್ಮನ್ ಆಗಿದ್ದರೆ, ಅದಕ್ಕೆ ಬೇರೆ ಖರ್ಚು ಏನೂ ಇಲ್ಲ, ಅದಕ್ಕೆ ಬದಲಾಗಿ ಅಲ್ಲಿಗೆ ಬೇರೊಬ್ಬರನ್ನು ಚೇರ್ಮನ್ ಮಾಡಿಕೊಂಡು, ಅಥವಾ ಪ್ರೆಸಿಡೆಂಟ್ ಮಾಡಿಕೊಂಡು ಹಣ ಖರ್ಚು ಮಾಡುವ ಬದಲು ಅದನ್ನು ಸಂಬಂಧಪಟ್ಟ ಮಂತ್ರಿಯವರೇ ವಹಿಸುವುದರಿಂದ ಹಣವನ್ನು ಉಳಿತಾಯ ಮಾಡುವುದಕ್ಕೆ ಸಾಧ್ಯವಿದೆ. ನನ್ನ

(ಶ್ರೀ ಎ. ಶಂಕರ್ ಆಳ್ವ)

ಸವಾಲಿನಲ್ಲಿ ನಾನು ಕೇಳಿದೆ, ಇಂಥ ಸ್ಟೇಟ್ ಬೋರ್ಡುಗಳು, ಕಾರ್ಪೊರೇಷನ್‌ಗಳು ಎಷ್ಟು ಇವೆ, ಅದರಲ್ಲಿರತಕ್ಕ ನಾನ್ ಅಫೀಷಿಯಲ್ ಚೇರ್ಮನ್ನರು ಎಷ್ಟು ಜನ ಇದ್ದಾರೆ, ಅವರ ಸಂಬಳ ಮತ್ತು ಭತ್ಯ, ಮನೆಯ ಬಾಡಿಗೆ ಕಾರು ವಗೈರೆ ಎಲ್ಲಾ ಲೆಕ್ಕ ಮಾಡಿದರೆ ಎಷ್ಟು ಖರ್ಚು ಮಾಡುತ್ತಿದ್ದೇವೆ, ಅದನ್ನೆಲ್ಲಾ ಉಳಿಸಬಹುದಲ್ಲವೇ ಎಂದು ನೇರವಾಗಿ ಪ್ರಶ್ನೆಯನ್ನು ನಾನು ಕೇಳಿದೆ. ಅದಕ್ಕೆ ಸರ್ಕಾರದವರಿಂದ ಉತ್ತರ ಬರಲಿಲ್ಲ. ಮಾನ್ಯ ಅರ್ಥಸಚಿವರು ಈ ವಿಷಯದಲ್ಲಿ ಸ್ವಲ್ಪ ನಿಗ ತೆಗೆದುಕೊಂಡು ಇದನ್ನು ಲೆಕ್ಕ ಮಾಡಿ ನೋಡಿದರೆ ವರ್ಷ ಒಂದಕ್ಕೆ ಎಷ್ಟು ಖರ್ಚಾಗುತ್ತದೆ. ಎನ್ನುವುದನ್ನು ನೋಡಿ, ಅದು ದೊಡ್ಡ ಪ್ರಮಾಣದಲ್ಲಿದ್ದರೆ ಅದೇ ಹಣವನ್ನು ಅಗತ್ಯ ಕೆಲಸಗಳಿಗೆ ಉಪಯೋಗಿಸಬಹುದು. ಕೆಲವು ಸಂದರ್ಭಗಳಲ್ಲಿ ಇದರಲ್ಲಿ ಅಸೆಂಬ್ಲಿ ಸದಸ್ಯರಾಗಲೀ, ಕೌನ್ಸಿಲ್ ಸದಸ್ಯರಾಗಲೀ ಯಾರೇ ಇರಲಿ, ಅವುಗಳಲ್ಲಿ ಅಧ್ಯಕ್ಷರಾಗಿದ್ದರೆ, ಅಲ್ಲಿಯ ಆಫೀಸರ್ಸ್, ನಾನ್ ಆಫಿಷಿಯಲ್ ಮೆಂಬರ್ ಇರುವುದು ಒಳ್ಳೆಯದು, ಆಫೀಸರ್ಸ್ ಚೇರ್ಮನ್ ಆಗಿರುವುದು ಸರಿಯಲ್ಲ. ಕಾನೂನಿಗೆ ವಿರೋಧವಾಗುತ್ತದೆ, ಸರ್ಕಾರದವರೇ ಎಲ್ಲಾ ಮಾಡುವುದು ಸರಿಯಲ್ಲ ಎಂದು ಹೇಳಿಬಿಟ್ಟು ಅವರಿಗೂ ಮತ್ತು ಮಂತ್ರಿಗಳಿಗೂ ತಿಕ್ಕಾಟವಾಗಲಿಕ್ಕೆ ಸಂದರ್ಭವನ್ನು ಕಲ್ಪಿಸುತ್ತಾರೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುವುದಾದರೆ, ನಾನು ಪಾರ್ಲಿಮೆಂಟ್ ಮೆಂಬರ್ ಆಗಿದ್ದಾಗ, ಒಂದು ಸೊಸೈಟಿಯನ್ನು ಮಾಡಿದ್ದೆವು, ಅದರಲ್ಲಿ ಮಾನ್ಯ ಹುಕುಂಸಿಂಗ್ ಅವರು ಅಧ್ಯಕ್ಷರಾಗಿದ್ದರು. ಆ ಸೊಸೈಟಿಯು ಒಂದೆರಡು ಮೂರು ತಿಂಗಳುಗಳ ವರೆಗೆ 20-30 ಸಾವಿರ ರೂಪಾಯಿ ನಷ್ಟವಾಯಿತು. ಏನು ಇದು ಎಂದು ಕೇಳಿದರೆ, ಅದನ್ನು ತಂದಿದ್ದೇವೆ, ಇದನ್ನು ತಂದಿದ್ದೇವೆ, ಇದಕ್ಕೆಲ್ಲಾ ಹಣ ಕೊಟ್ಟಿದ್ದೇವೆ ಎಂದು ಹೇಳಿದರು. ರಿಜಿಸ್ಟ್ರಾರ್ ಅವರು ಇದರ ಬಗ್ಗೆ ಸಂಬಂಧಪಟ್ಟವರಿಗೆ ಒಂದು ನೋಟೀಸನ್ನು ಕೊಟ್ಟರು; ಮತ್ತು ಈ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಬೇಕು ಎಂದು ಹೇಳಿದರು. ಆ ಸಂದರ್ಭದಲ್ಲಿ ನಾವೆಲ್ಲ ಸಭೆ ಸೇರಿದಾಗ ಮಾನ್ಯ ಸದಸ್ಯರೊಬ್ಬರು ಹೇಳಿದರು, ನಮ್ಮದು ಪಾರ್ಲಿಮೆಂಟ್, ನಮ್ಮ ಮೇಲೆ ನೋಟೀಸ್ ಕೊಡಲು ರಿಜಿಸ್ಟ್ರಾರ್ ಅವರಿಗೆ ಯಾವ ಅಧಿಕಾರ ಇದೆ ಎಂದು, ಇದಕ್ಕೆ ನಾನು ಹೇಳಿದೆ, ಯಾರು ತಪ್ಪು ಮಾಡಿದರೂ ಅದನ್ನು ಕೇಳುವ ಅಧಿಕಾರ ಇನ್ನೊಬ್ಬರಿಗೆ ಇರಬೇಕು, ನಾವು ಸಹ ತಪ್ಪು ಮಾಡಲಿಕ್ಕೆ ಕಾನೂನು ಇಲ್ಲ. ಆಫೀಸರ್ಸ್‌ಗೆ ಪೂರ್ಣವಾದ ಅಧಿಕಾರ ಇದೆ, ನಮ್ಮನ್ನು ಕೇಳುವುದಕ್ಕೆ ಕೆಲವು ಆಫೀಸರ್ಸ್ ಏನಾದರೂ ಇವರಿಗೆ ಹೀಗೆ ಮಾಡಲಿಕ್ಕೆ ಕೂಡದು, ಕಾನೂನಿಗೆ ಅದು ವಿರೋಧವಾಗುತ್ತದೆ ಏನಾದರೂ ಸಹ ಜಾಸ್ತಿ ಹಣವನ್ನು ಖರ್ಚು ಮಾಡಕೂಡದು, ಬಡ್ಜೆಟ್ಟಿನಲ್ಲಿ ಅದಕ್ಕೆ ಅವಕಾಶವಿಲ್ಲ ಎಂದರೆ ಆಗ ಸ್ವಲ್ಪ ತಿಕ್ಕಾಟ ಬರುತ್ತದೆ. ಕೆಲಸಗಳು ಸರಿಯಾಗಿ ಆಗುವುದಿಲ್ಲ. ಈ ವಿಷಯವನ್ನು ಸರ್ಕಾರದವರು ನಿಜವಾಗಿಯೂ ಆಲೋಚನೆ ಮಾಡಬೇಕು.

ಇಂಥ ಖರ್ಚು ಮಾಡುವುದು ಅತಿ ಅಗತ್ಯವೇ ಅಥವಾ ಅದಕ್ಕೆ ಬದಲಾಗಿ ಉಳಿತಾಯ ಮಾಡುವುದು ಅಗತ್ಯವೇ, ಉಳಿತಾಯವಾದದ್ದನ್ನು ಬೇರೆ ವಿಷಯಗಳಲ್ಲಿ ಉಪಯೋಗಿಸಲಿಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಇದನ್ನೆಲ್ಲಾ ಮುಖ್ಯ ಮಂತ್ರಿಗಳು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಒತ್ತಾಯ ಮಾಡಿ ಹೇಳಬೇಕಾಗುತ್ತದೆ. ಏಕೆಂದರೆ ಎಲ್ಲದ್ದಕ್ಕೂ ನಾವು ಪ್ಲಾನಿಂಗ್ ಕಮಿಷನ್‌ಗೆ ಹೋಗಬೇಕಾಗುತ್ತದೆ. ಒಂದು ಸಂದರ್ಭದಲ್ಲಿ ನಾವು ಒಂದು ಅರ್ಜಿಯನ್ನು ಕೊಡುತ್ತೇವೆ, ಅದು ಸರಿಯಾಗಿಲ್ಲ, ಅಷ್ಟು ಹಣವನ್ನು ಕೊಡುವುದಕ್ಕಾಗುವುದಿಲ್ಲ, ಎಂದು ಏನಾದರೂ ಒಂದು ಅಡಚಣೆ ಹೇಳುತ್ತಾರೆ. ಏಕೆಂದರೆ, ಒಂದೇ ರೀತಿಯಲ್ಲಿ ಅವರ ಅಭಿಪ್ರಾಯ ಇರಬಹುದು. ಅದೊಂದೇ ಕಾರಣದಿಂದ ಅವರು ಯಾವುದಕ್ಕೂ ಜಾಸ್ತಿ ಹಣವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆಗ ನಾವು ಬೇರೆ ರಾಜ್ಯಗಳ ನಿದರ್ಶನಗಳನ್ನು ಎತ್ತಿ ತೋರಿಸಿ ಹೇಳಿದರೆ ಅವರಿಗೆ ಸಮಾಧಾನವಾಗುತ್ತದೆ. ನಮಗೆ ಅಭಾವ ಬಂದಂಥ ಸಂದರ್ಭದಲ್ಲಿ ಅದನ್ನು ಪರಿಶೀಲಿಸಿಕೊಂಡು ಕಡೆಗೆ ಮುಖ್ಯಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳವರಲ್ಲಿ ಆಲೋಚನೆ ಮಾಡಿ ಅವರಲ್ಲಿ ಒತ್ತಾಯ ಬರುವಂತೆ ಮಾಡುವುದು ಅತ್ಯಅಗತ್ಯ ಎಂಬುದನ್ನು ನಾನು ಹೇಳುತ್ತೇನೆ.

ಇನ್ನೊಂದು ವಿಷಯವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ, ಕೃಷ್ಣ ವಾಟರ್ ಡಿಸ್ಪ್ಯೂಟ್ ವಿಷಯ ತಮಗೆ ಗೊತ್ತಿರಬಹುದು. ಸರ್ಕಾರದವರು ಇದರ ಬಗ್ಗೆ ಒಂದು ನಿಲುಮೆಯನ್ನು ತೆಗೆದುಕೊಂಡಿದ್ದಾರೆ. ಟ್ರಿಬ್ಯುನಲ್‌ನಿಂದ ವಾಪಸ್ ತೆಗೆದುಕೊಳ್ಳುವುದು. ಅಲ್ಲಿ ನಮಗೆ ನ್ಯಾಯ ದೊರಕಲಿಕ್ಕೆ ಸಾಧ್ಯವಿಲ್ಲ ಎನ್ನುವ ಭಾವನೆಯಿಂದ ತಮ್ಮ ಅಹ್ವಾಲನ್ನು ವಾಪಸ್ ತೆಗೆದುಕೊಂಡರು.

ಮತ್ತೆ ಈ ಸಂದರ್ಭದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಒಂದು ಠರಾವನ್ನು ಮಂಡಿಸುತ್ತಾ ಸರ್ಕಾರದವರು ಮಾಡಿದ್ದು ಸರಿಯಾಗಿದೆಂದು ಶಿಫಾರಸ್ಸು ಕೊಟ್ಟರು. ಆದರೆ ಅದನ್ನು ನಾವು ಇಲ್ಲಿ ಆಲೋಚನೆ ಮಾಡಬೇಕು ಏತಕ್ಕೆಂದರೆ ಒಂದು ಸಾರಿ ಟ್ರಿಬ್ಯೂನಲ್ ಮುಂದೆ ಹೋದ ನಂತರ ಬೇರೆ ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. Unless by an act of Parliament nothing could be done. ಇಂಟರ್ ಸ್ಟೇಟ್ ವಾಟರ್ಸ್ ಡಿಸ್‌ಪ್ಯೂಟ್ ಆಕ್ಟ್. ಇದು ಸೆಲ್ಫ್ ಕನ್‌ಟೇನ್ಡ್ ಆ್ಯಕ್ಟ್. ಇದು ಸುಪ್ರೀಂ ಕೋರ್ಟಿನ ಜ್ಯೂರಿಸ್‌ಡಿಕ್ಷನ್‌ಗೆ ಹೋಗುತ್ತದೆ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಇಲ್ಲವೇ ರಿಟೈರ್ಡ್ ಆದ ನ್ಯಾಯಾಧೀಶರು ಇಲ್ಲದಿದ್ದರೆ ಸರ್ವಿಂಗ್ ಹೈಕೋರ್ಟು ಜಡ್ಜ್ ಅವರು ಇರುತ್ತಾರೆ. ಇಬ್ಬರು ಅಥವಾ ಅದಕ್ಕಿಂಥ ಹೆಚ್ಚಿನ ಜನರನ್ನು ನೇಮಿಸಿಕೊಳ್ಳಬೇಕು. ಮತ್ತೆ ಆ ತೀರ್ಪು ಕಾಯಂ ಅಲ್ಲ. ಅವರು ಒಂದು ತೀರ್ಮಾನ

(ಶ್ರೀ ಎ. ಶಂಕರ್ ಅಳ್ವ)

ಕೊಡುತ್ತಾರೆ, ತೀರ್ಮಾನ ಕೊಟ್ಟ ನಂತರ ನಾವು ಅದರಲ್ಲಿ ಏನಾದರೂ ಆಕ್ಷೇಪ ಎತ್ತುವಂಥದ್ದು ಇದ್ದರೆ ಅವರ ಮುಂದೆ ಹೇಳಿಕೊಳ್ಳಬಹುದು. ಆದುದರಿಂದ ಈಗ ಅವರೇನು ಅಭಿಪ್ರಾಯಕ್ಕೆ ಬಂದಿದ್ದಾರೆ ಅದು ಸರಿಯಲ್ಲ ಬೇರೆ ನಮ್ಮ ಹತ್ತಿರ ರುಜುವಾತು ಉಂಟೋ ಅಥವಾ ಮತ್ತೆ ಬೇರೆ ಇನ್ನು ಯಾವುದೇ ವಾದ ಉಂಟೋ ಆ ವಾದವನ್ನು ನಾವು ಬೆಳೆಸಬಹುದು. ಆ ರೀತಿ ಒಂದು ಸೆಕ್ಷನ್(5) ರಲ್ಲಿ ಉಂಟು. ಇದೆಲ್ಲಾ ಆದ ಮೇಲೆ ಫೈನಲ್ ಜಡ್ಜ್‌ಮೆಂಟನ್ನು ಕೊಡುತ್ತಾರೆ. ಕೊಟ್ಟ ನಂತರ ಅದು ಬೇರೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಆದನ್ನು ಮುಂದೆ ಹೇಗೆ ಜಾರಿಗೆ ತರಬೇಕೆಂದು ಉಂಟು. ಟ್ರಿಬ್ಯೂನಲ್‌ನಲ್ಲಿ ತೀರ್ಮಾನವನ್ನು ಕೊಟ್ಟ ನಂತರ ಅದು ಗಜೆಟ್ಟಿನಲ್ಲಿ ಪಬ್ಲಿಶ್ ಆಗಬೇಕು. ಪಬ್ಲಿಶ್ ಅದನಂತರ ಅದನ್ನು ಎಗ್ಜಿಬಿಟ್ ಮಾಡಬೇಕೆಂದು ಅದರಲ್ಲಿ ಉಂಟು. ಕಂಪ್ಲೀಟ್ ಆಗುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಅದನ್ನು ವಾಪಸ್ಸು ತೆಗೆದುಕೊಳ್ಳ ತಕ್ಕಂಥದ್ದು ಸರಿಯಲ್ಲ. ಅದರಲ್ಲಿ ನೀವು ತಿರುಗಿ ಏನಾದರೂ ಹೇಳುವುದಿದ್ದರೆ ಹೋಗಿ ಹೇಳುವುದಕ್ಕೆ ಅವಕಾಶವಿತ್ತು, ಆದರೆ ಸರಕಾರದವರು ಆ ರೀತಿ ಮಾಡಿಲ್ಲ. ಈಗ ಮಾಡಿರತಕ್ಕಂಥದ್ದು ಸರಿಯಲ್ಲ. ನ್ಯಾಯವಾದುದ್ದಲ್ಲವೆಂದು ಹೇಳುತ್ತೇನೆ.

ಇನ್ನೊಂದು ವಿಷಯದಲ್ಲಿ ಸರ್ಕಾರದವರು ಮಾಡಿರತಕ್ಕಂಥದ್ದು ಸರಿಯಲ್ಲ ವೆಂದು ಹೇಳಬಯಸುತ್ತೇನೆ ಇವತ್ತಿನ ಪತ್ರಿಕೆಯಲ್ಲಿ ನೋಡಿದೆ 25 ಸಾವಿರ ಚಿಲ್ಲರೆ ಫಾರಿನ್ ಎಕ್ಸ್‌ಚೇಂಜ್ ನಮಗೆ ಬೇಕೆಂದು ಅಮೇರಿಕಾದಿಂದ ಒಬ್ಬ ತಜ್ಞರನ್ನು, ಒಬ್ಬ ಖ್ಯಾತ ವಕೀಲರನ್ನು ತರುತ್ತೇವೆಂದು ಹೇಳಿದ್ದಾರೆ. ಇದನ್ನು ಸರಕಾರದವರು ಸಹಜವಾಗಿ ತರಿಸಬೇಕು ಆದರೆ ನಮ್ಮವರೇ ಅನೇಕ ವಕೀಲರು ವರ್ಲ್ಡ್ ಕೋರ್ಟಿಗೆ ಹೋಗಿ ಅಲ್ಲಿ ವಾದಿಸಿಕೊಂಡು ಬರುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಬೇಡ ಇಡೀ ದೇಶದಲ್ಲಿಯೇ ವಾಟರ್ ಡಿಸ್ಪ್ಯೂಟಿಗೆ ಒಳ್ಳೆಯ ತಜ್ಞರು ಇಲ್ಲವೆಂದು ಹೇಳಿದರೆ ಬಹಳ ಆಶ್ಚರ್ಯವಾಗಿ ಕಾಣುತ್ತದೆ. ಬಹಳ ಹಿಂದಿನಿಂದಲೂ ನಮ್ಮ ಭಾರತ ದೇಶದಲ್ಲಿ ಶಾಸ್ತ್ರದಲ್ಲಿ, ನೀತಿಯಲ್ಲಿ ಒಳ್ಳೆಯ ಅನುಭವಸ್ಥರಾಗಿರ ತಕ್ಕಂಥ ಅನೇಕ ಜನರಿದ್ದಾರೆ. ಈಗ ವರದಿ ಪ್ರಕಾರ ಮೊದಲನೆಯ ಅರ್ಥಮಂತ್ರಿ ಗಳಾಗಿದ್ದ ಸಚೇಂದ್ರ ಚೌಧ್ರಿಯವರನ್ನು ನೇಮಕ ಮಾಡಿದ್ದೀರಿ ಇದು ಸರ್ಕಾರ ದವರು ಮಾಡಿರತಕ್ಕ ಮೊದಲನೆಯ ಪ್ರಯತ್ನವೆಂದು ಹೇಳಬಹುದು.

ಇನ್ನು ಕೆಲವು ಇಲಾಖೆಗಳಲ್ಲಿ ಸರಿಯಾಗಿ ಕೆಲಸ ನಡೆಯುತ್ತಾ ಇಲ್ಲ ಅದು ಸರಿಯಾಗಿ ನಡೆಯುವ ಹಾಗೆ ಮಾಡಬೇಕೆಂದು ತಮ್ಮ ಕೂಡ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಬಡ್ಜೆಟ್‌ನಲ್ಲಿ ಇರಿಗೇಷನ್, ಪವರ್‌ಗೆ ಹೆಚ್ಚಾಗಿ ಹಣವನ್ನು ಕೊಟ್ಟಿದ್ದೀರಿ ಇದು ತಪ್ಪು ಎಂದು ಹೇಳುವುದಿಲ್ಲ. ಆದರೆ ಮೀಡಿಯಂ ಮತ್ತು ಮೈನರ್ ಇರಿಗೇಷನ್‌ಗೆ ಹೆಚ್ಚಿನ ಗಮನ ಕೊಡುವುದು ಅತಿಮುಖ್ಯ. ಏತಕ್ಕೆಂದು ಹೇಳಿದರೆ ಪ್ಲಾನಿಂಗ್ ಕಮಿಷನರ್‌ರವರೇ ಇದರ ಬಗ್ಗೆ ಹೇಳಿದ್ದಾರೆ. ಇರಿಗೇಷನ್ ಪ್ರಾಜೆಕ್ಟ್, ಪವರ್ ಎಲ್ಲಾ ಬೇಕು ಆದರೆ ಸಹಜವಾಗಿ ನಮ್ಮ ಮೈನರ್ ಇರಿಗೇಷನ್ ಏನು ಇರುತ್ತದೆ, ಹೆಚ್ಚಾಗಿ ನಾವು ವೆಂಟೆಂಡ್ ಡ್ಯಾಂಮ್ಸ್‌ಗಳನ್ನು ಸಹಜವಾಗಿ ಮಾಡುತ್ತಿದ್ದೇವೆ. ಮಳೆ ಹೋದ ಮೇಲೆ ಸಾಧಾರಣವಾಗಿ ಈ ಡ್ಯಾಮ್‌ಗಳಿಂದ ಬೆಳೆಯನ್ನು ತೆಗೆದುಕೊಳ್ಳುತ್ತೇವೆ. ಎಲ್ಲರೂ ಸೇರಿಕೊಂಡು ಡ್ಯಾಮ್ ಕಟ್ಟಿಕೊಂಡು ಕೆಲವು ಕಡೆ ಮಾಡಿದ್ದೇವೆ. ಆದರೆ ಈಗ ಇದರಲ್ಲಿ ಯಾರಿಗೂ ಪ್ರೋತ್ಸಾಹ ಇರುವುದಿಲ್ಲ. ಎಲ್ಲಾ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಕಡೆಗೆ ಗಮನ ಹೋಗುತ್ತಿದೆ. ಆದುದರಿಂದ ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುವುದೇನಂದರೆ ಅಪ್ಪರ್‌ಕೃಷ್ಣಾ, ಘಟಪ್ರಭಾ ಇಂಥ ದೊಡ್ಡ ದೊಡ್ಡ ಯೋಜನೆಗಳನ್ನು ಎಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದೀರಿ ಅಂಥ ಕಡೆ ಇದರ ಜೊತೆಗೆ ಕ್ಯಾನಾಲ್ಸ್‌ಗಳಲ್ಲೂ ಕೂಡಾ ನೀರು ಹರಿಯುವುದಕ್ಕೆ ರೆಡಿಯಾಗಿರುವಂತೆ ವ್ಯವಸ್ಥೆ ಮಾಡಬೇಕು. ಡ್ಯಾಮ್ (ಪ್ರಾಜೆಕ್ಟ್) ಕಟ್ಟಿಬಿಟ್ಟು ನಂತರ ಚಾನಾಲ್ಸನ್ನು ಮಾಡುವುದರಲ್ಲಿ ವಿಳಂಬವಾಗಿ ಬಿಡುತ್ತದೆ. ಎಲ್ಲಾ ಕಡೆಯೂ ಇದೇ ಪರಿಸ್ಥಿತಿ ಇರುತ್ತದೆಂದು ಹೇಳುವುದಿಲ್ಲ. ಕೆಲವು ಕಡೆ ಈ ರೀತಿ ಆಗಿರುವುದನ್ನು ನೋಡಿದ್ದೇನೆ. ಆದುದರಿಂದ ಡ್ಯಾಮ್ಸ್ ಕಂಪ್ಲೀಟ್ ಆದ ಕೂಡಲೇ ಎಲ್ಲಿಯವರೆಗೆ ನೀರನ್ನು ಒದಗಿಸಲು ಸಾಧ್ಯವೋ ಅಲ್ಲಿಯವರೆಗೂ ನೀರನ್ನು ಒದಗಿಸಿ ಜನಗಳಿಗೆ ಅನುಕೂಲವನ್ನು ಮಾಡಿಕೊಡಬೇಕು. ವರ್ಲ್ಡ್ ಬ್ಯಾಂಕಿನಿಂದ ಕೆಲವೊಂದು ಸಹಾಯ ದೊರೆಯುತ್ತವೆಂದು ಅರ್ಥ ಸಚಿವರು ಹೇಳಿದ್ದಾರೆ.

(1) ಅನಿಮಲ್ ಹಸ್‌ಬಂಡ್ರಿ ಮಾಡುವ ಬಗ್ಗೆ (2) ಮಾರ್ಕೆಟ್ ಯಾರ್ಡ್ ಕಟ್ಟುವ ಬಗ್ಗೆ ಮತ್ತು ಡ್ರಾಫ್ಟ್ ಪ್ರಾನ್ ಏರಿಯಾ ಪ್ರಾಜೆಕ್ಟ್ ಅಂಥ ಹೇಳಿ ಒಂದು ಯೋಜನೆ ತಯಾರಿಸಿದ್ದಾರೆ. ಇದು ಬಹಳ ಉಪಯುಕ್ತವಾದಂಥಾದ್ದು. ವಿಜಾಪುರದಲ್ಲಿ ಏನೊಂದು 12 ಕೋಟಿ ರೂಪಾಯಿಗಳ ಯೋಜನೆಯೊಂದನ್ನು ತಯಾರಿಸಿದ್ದಾರೆ. ಇದರಲ್ಲಿ ವರ್ಲ್ಡ್ ಬ್ಯಾಂಕ್‌ನವರು 4 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ, ಬಾಕಿ ಹಣವನ್ನು ಕೇಂದ್ರ ಸರ್ಕಾರದವರೇ ಹಾಕಿಕೊಂಡು ಮಾಡಬೇಕು. ವಿಜಾಪುರಕ್ಕೆ ಮೊದಲನೆ ಪ್ಲಾನಿಂಗ್ ಕಮಿಷನಿನ ಡಾ. ಮಿನ್ಹಾಸ್ ಅಲ್ಲಿಗೆ ಬಂದಿದ್ದರು. ಸ್ವಲ್ಪ ಸಮಯ ಬೆಳಗಾಂ ಏರ್ಪೋರ್ಟ್‌ನಲ್ಲಿ ಅವರೊಂದಿಗೆ ನಾನು ಮಾತಾಡಿದ್ದೇನೆ. ನಿಜವಾಗಿ ನೋಡಿದರೆ ಅವರು ಒಳ್ಳೆಯ ತಜ್ಞರು ಇದ್ದಾರೆ. ಆ ಒಂದು ಸಂದರ್ಭದಲ್ಲಿ ಅವರೊಂದು ಮಾತನ್ನು ಹೇಳಿದರು, ಆಗ ನಮ್ಮ

(ಶ್ರೀ ಎ. ಶಂಕರ್ ಆಳ್ವ)

ಜೊತೆಯಲ್ಲಿ ಚೀಫ್ ಸೆಕ್ರೆಟರಿ ಸಾಹೇಬರ್‌ರವರೂ ಸಹ ಇದ್ದರು. ಅವರು ಏನು ಹೇಳಿದರು ಎಂದರೆ, ನೀರಿನ ಅಭಾವ ಇದ್ದಂಥ ಕಡೆಗಳಲ್ಲಿ ಒತ್ತಾಯ ಮಾಡಿ ಬೆಳೆಯನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲ ಅದರ ಬದಲು ಅಲ್ಲಿ ಒಂದು ಡೈರಿಯನ್ನು ಮಾಡಿ, ಮುಂದುವರಿಸಿಕೊಂಡು ಬರಬೇಕು ಮತ್ತು ಅಗ್ರಿಕಲ್ಚರಲ್ ಲ್ಯಾಂಡ್ಸ್ ನಲ್ಲಿ ಇಂಟೆನ್ಸಿವ್ ಕ್ರಾಪ್ಸ್‌ನ್ನು ಮಾಡುವುದು ಅಗತ್ಯ ಎಂದು ಹೇಳಿದರು. ಇಂಥ ಕೆಲವು ಯೋಜನೆಗಳನ್ನು ಆದಷ್ಟು ಕಡೆಗಳಲ್ಲಿಯಾದರೂ ಸರ್ಕಾರದವರು ಮಾಡ ಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವರ್ಲ್ಡ್ ಬ್ಯಾಂಕ್‌ನವರಿಂದ ನೆರವು ಯಾವುದಕ್ಕೆ ಸಿಗುತ್ತದೆ ಎಂಬುದನ್ನು ಯೋಚನೆ ಮಾಡಿ ಅಂಥ ಕಾರ್ಯ ಗಳನ್ನು ಕಾರ್ಯಗತ ಮಾಡುವುದು ಅತ್ಯಗತ್ಯ. ಇನ್ನು ಹೆಚ್ಚು ವಿಷಯಗಳ ಮೇಲೆ ಮಾತನಾಡಲು ಸಮಯದ ಅಭಾವವಿರುವುದರಿಂದ ಕೆಲವು ಮುಖ್ಯವಾದಂಥ ವಿಚಾರಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ.

ಕುಡಿಯುವ ನೀರು, ಇದು ನ್ಯಾಷನಲ್ ವಾಟರ್ ರೂರಲ್ ಸಪ್ಲೈಸ್ ಸ್ಕೀಂನೊಳಗೆ ಬರುತ್ತದೆ. ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡುವುದು ಅಗತ್ಯ. ಏತಕ್ಕೆಂದು ಹೇಳಿದರೆ ಕೆಲವು ಕಡೆಗಳಲ್ಲಿ ಕುಡಿಯುವ ನೀರಿನ ಅಭಾವ ವಿರುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರವಾದ ಪುತ್ತೂರು ಇದು ಈಗ ಮುನಿಸಿಪಾಲಿಟಿಯಾಗಿದೆ. ಅಲ್ಲಿ ಕುಡಿಯುವ ನೀರಿಲ್ಲ ಬಹಳ ಕಷ್ಟ ವಾಗಿದೆ. ಅಂಥ ಕಡೆಗಳಲ್ಲೆಲ್ಲಾ ಕುಡಿಯುವ ನೀರನ್ನು ಒದಗಿಸುವುದು ಅತ್ಯಗತ್ಯ ವೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಡೈರಿ ವಿಷಯ ಹೇಳುವು ದಾದರೆ ಮದ್ರಾಸ್ ಸರ್ಕಾರದವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಯ್ಲಾ ಕಾಟಲ್ ಫಾರಂನ್ನು 6-7 ಎಕರೆಗಳನ್ನು ತೆಗೆದುಕೊಂಡು ಮಾಡಿದ್ದರು. ಅಲ್ಲಿ ಬೇಕಾದಷ್ಟು ನೀರು ದೊರಕುವುದರಿಂದ ಬೇಕಾದಷ್ಟು ಹುಲ್ಲು ಬೆಳೆಯುತ್ತದೆ. ಅಲ್ಲಿ ಸಾಕಷ್ಟು ಕೆಲಸ ಯಶಸ್ವಿಯಾಗಿದ್ದರೂ ಏನೂ ಪ್ರೊಗ್ರೆಸ್ ಸರಿಯಾಗಿಲ್ಲವೆಂದು ಈಗ ಅದನ್ನು ಪ್ರೈವೇಟ್ ಪಾರ್ಟಿಗೆ ಕೊಡುವ ಯೋಚನೆ ಮಾಡುತ್ತಿದ್ದಾರೆ. ಆದುದರಿಂದ ಅದು ಪ್ರೈವೇಟ್ ಪಾರ್ಟಿಗೆ ಮಾತ್ರ ಕೊಡಕೂಡದೆಂದು ಹೇಳು ತ್ತೇನೆ. ಇದನ್ನು ಇಡೀ ಜಿಲ್ಲೆಯವರು ಮತ್ತು ನಾವೆಲ್ಲರೂ ಇದನ್ನು ಒಟ್ಟಾಗಿ ವಿರೋಧಿಸಬೇಕು. ಏತಕ್ಕೆಂದರೆ ಇಂಥ ಯೋಜನೆಯನ್ನು ಸರ್ಕಾರದವರು ಬಿಟ್ಟುಕೊಟ್ಟು ಕೈಕಟ್ಟಿಕೊಂಡು ಕೂಡಬಾರದು. ಪ್ರಯತ್ನ ಮಾಡಿ ಆ ಯೋಜನೆ ಒಳ್ಳೆಯ ರೀತಿಯಲ್ಲಿ, ಯಶಸ್ವಿಯಾಗುವಂತೆ ಮಾಡ ಬೇಕೆಂದು ಹೇಳುತ್ತೇನೆ.

ಇನ್ನು ಕೆಲವು ಯೋಜನೆಗಳನ್ನು ನಾವು ಕೈಗೊಂಡಿದ್ದೇವೆ. ಅದರಲ್ಲಿ ಕುದುರೆಮುಖ ಪ್ರಾಜೆಕ್ಟ್ ಒಂದು. ಇದು ಒಂದು ದೊಡ್ಡ ಯೋಜನೆ. ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡುವುದು ಅಗತ್ಯ ಎಂದು ಹೇಳಬಯಸುತ್ತೇನೆ.

3-00 P. M.

ಇನ್ನು ವೆಸ್ಟರ್ನ್ ಘಾಟ್ಸ್ ಡೆವಲಪ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಏನೆಂದರೆ ಈ ಭಾಷಣದ ಕೊನೆಯಲ್ಲಿ ಟೂರಿಸ್ಟ್ ಅನ್ನುವ ಒಂದು ಪದವನ್ನು ಹಾಕಿಕೊಂಡಿದ್ದಾರೆ. ವೆಸ್ಟರ್ನ್ ಘಾಟ್ಸ್ ಅಭಿವೃದ್ಧಿ ಎಂದರೆ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡು ಇದು ಪಶ್ಚಿಮ ಪ್ರದೇಶಗಳ ಅಭಿವೃದ್ಧಿ ಎಂದು ಹೇಳಿಕೊಂಡು ಕೂತುಕೊಳ್ಳುವುದಲ್ಲ. ಈ ಭಾಷಣದಲ್ಲಿ ಏನು ವಿವರಿಸಿದ್ದೀರಿ ಅದರಂತೆ ಕಾರ್ಯಗತ ಮಾಡುವುದು ಅತಿ ಅಗತ್ಯ ಎಂದು ಹೇಳುತ್ತೇನೆ. ಈ ಭಾಷಣದಲ್ಲಿ ತಾವು ಏನು ಹೇಳಿದ್ದೀರಿ ಎಂದರೆ ಅದು ರೀತಿ ಇದೆ :—

> "The programme for the Western Ghats region includes measures to improve the breed of cattle and pasture development, establishment of progency orchards and development of horticultural crops like coconut, cardamom coffee and mango, soil conservation, intensive agricultural development, minor irrigation works, plantation of bamboo matchwood, cashew, medical plants, and spices, construction of industrial estates and assistance for coir handicrafts, bee-keeping and handloom industries and provision of tourist facilities in selected places".

ಈ ಭಾಷಣದಲ್ಲಿರುವಂತೆ ಟೂರಿಸ್ಟ್ ಅನ್ನುವ ಪದ ಕೊನೆಯಲ್ಲೇ ಇರಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ತಮಗೆ ನಿಗದಿ ಮಾಡಿದ್ದು 20 ನಿಮಿಷ, ಈಗಾಗಲೇ 33 ನಿಮಿಷ ತೆಗೆದು ಕೊಂಡಿದ್ದೀರಿ. ನೀವು ಹೆಚ್ಚು ತೆಗೆದುಕೊಂಡಿರುವ ಟೈಂ ಅನ್ನು ಯಾರ ಟೈಂನಲ್ಲಿ ಅಡ್ಜಸ್ಟ್ ಮಾಡಬೇಕೋ ಗೊತ್ತಿಲ್ಲ.

ಶ್ರೀ ಎ. ಶಂಕರ ಅಳ್ವ.—ನನಗೆ ಇನ್ನು 5 ನಿಮಿಷ ಕಾಲಾವಕಾಶ ಕೊಡಿ. ನನ್ನ ಮಾತನ್ನು ಮುಗಿಸುತ್ತೇನೆ.

ಇನ್ನು ಮಾನ್ಯ ಸಚಿವರು ತೆರಿಗೆಗಳ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಆ ಬಗ್ಗೆ ಅವರಿಗೆ ಅಭಿನಂದಿಸುತ್ತೇನೆ. ಏತಕ್ಕೆಂದರೆ ಈ ಸೇಲ್ಸ್ ಟ್ಯಾಕ್ಸನ್ನು ಕೆಲವೊಂದು ಉದ್ಯಮಗಳ ಮೇಲೆ ಜಾಸ್ತಿ ಮಾಡಿದ್ದಾರೆ. ವರ್ಷಕ್ಕೆ 10 ಲಕ್ಷ ರೂಪಾಯಿ ಅಥವಾ ಅದಕ್ಕೂ ಹೆಚ್ಚಿನ ವಹಿವಾಟಿರುವ ವ್ಯಾಪಾರಿಗಳ ಮೇಲೆ ಕರ್ನಾಟಕ ಮಾರಾಟ ತೆರಿಗೆಯ ಶೇಕಡ 10 ರ ದರದಲ್ಲಿ ಹೆಚ್ಚುವರಿ ತೆರಿಗೆ ಹಾಕಿದ್ದಾರೆ. ಈ ತೆರಿಗೆಗೆ ಗುರಿಯಾಗುವ ಸುಮಾರು 66 ಸಾವಿರ ವ್ಯಾಪಾರಿಗಳ ಪೈಕಿ ಈ ಹೊಸ ತೆರಿಗೆ ಸಲ್ಲಿಸ ಬೇಕಾದವರ ಸಂಖ್ಯೆ 5 ಸಾವಿರಕ್ಕೂ ಕಡಿಮೆ ಎಂದಿದ್ದಾರೆ. ಆದುದರಿಂದ ಇದು ದೊಡ್ಡವರ ಮೇಲೆ ಬೀಳುವ ಕರ ವಿನಾ ಬಡವರ ಕರವಲ್ಲ, ಅದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸಬೇಕಾಗಿದೆ.

ಇನ್ನು ಸಿಲ್ಕ್ ಫ್ಯಾಬ್ರಿಕ್ಸ್ ಮೇಲೆ ಏನೂ ತೆರಿಗೆ ಹಾಕಿಲ್ಲ. ಇದರಿಂದ ನಮ್ಮ ರಾಜ್ಯಕ್ಕೆ ಬರುವ ವರಮಾನಕ್ಕೆ ಏನೂ ಹೆಚ್ಚು ತೊಂದರೆಯಾಗುವುದಿಲ್ಲ ಎಂದು ಹೇಳುತ್ತೇನೆ.

ಇನ್ನು ಷುಗರ್ ಕ್ರಾಪ್ಸ್ ಬಗ್ಗೆ ಸ್ವಲ್ಪಮಟ್ಟಿಗೆ ಕರ ಹೆಚ್ಚಿಸಿ ಇದರಿಂದ ಬರುವ ವರಮಾನವನ್ನು ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ವಿನಿಯೋಗಿಸುತ್ತೇವೆ ಎಂದು ಹೇಳಿದ್ದಾರೆ, ಆದುದರಿಂದ ಇದರ ಬಗ್ಗೆ ಯಾರೂ ಆಕ್ಷೇಪ ಮಾಡುವುದು ಬೇಡ ಎಂದು ಹೇಳುತ್ತೇನೆ.

ಇನ್ನು ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಹೇಳುವುದಾದರೆ ಕೆಲವು ರಾಜ್ಯದಲ್ಲಿ ಯಾವರೀತಿ ಇತ್ತು ಎನ್ನುವುದು ಸ್ವಲ್ಪ ನೆನಪು ಬರುತ್ತದೆ. ಸ್ಟ್ಯಾಂಪು ಡ್ಯೂಟಿಯನ್ನು ಯಾರಾದರೂ ಎವೇಡ್ ಮಾಡಿದರೆ ಆ ಬಗ್ಗೆ ಒಂದು ಅಧಿಕಾರ ರಿಜಿಸ್ಟ್ರಾರ್ ಜನರಲ್‌ರವರಿಗೆ ಇತ್ತು. ಅವರು ಏನು ಮಾಡುತ್ತಿದ್ದರು ಎಂದರೆ ಅವರಿಗೆ ನೋಟೀಸ್ ಕೊಟ್ಟು ನ್ಯಾಯ ಬೆಲೆಯಲ್ಲಿ ಅದು ಎಷ್ಟು ವಾಲ್ಯೂ ಬರುತ್ತಿತ್ತೋ ಅದರ ಮೇಲೆ ಒಂದಿಷ್ಟು ಹಾಕಿ ಅವರಿಂದ ವಸೂಲ್ಮಾಡುತ್ತಿದ್ದರು. ಈ ಬಗ್ಗೆ ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಒಂದು ಕಾನೂನು ಬರುತ್ತದೆ ಎಂದು ಅವರು ಹೇಳುತ್ತಾರೆ. ಅದು ಅಗತ್ಯವಾಗಿ ಬರಬೇಕು ಎಂದು ಹೇಳುತ್ತೇನೆ.

ಇನ್ನು ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಬಗ್ಗೆ ಈ ಭಾಷಣದಲ್ಲಿ ಏನು ಹೇಳಿದ್ದಾರೋ ಅದಕ್ಕೆ ಹೆಚ್ಚು ಆಕ್ಷೇಪ ಮಾಡಬಾರದು ಎಂದು ಹೇಳುತ್ತೇನೆ. ಮಾನ್ಯ

ದೇವೇಗೌಡರು ಎಲ್ಲವನ್ನೂ ಹಳ್ಳಿಯ ರೈತರ ಮೇಲೆ ಹಾಕುತ್ತೀರಿ ಅನ್ನುವುದನ್ನು ಹೇಳಿದರು, ಅರ್ಬನ್ ಲ್ಯಾಂಡ್‌ನಲ್ಲೂ ಕೂಡ ಈಗ ಈ ಭಾಷಣದಲ್ಲಿ ಏನೊಂದು ಸ್ವಲ್ಪ ತೆರಿಗೆ ಹಾಕಿದ್ದೀರೋ ಅದಕ್ಕೆ ಆಕ್ಷೇಪ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಈ ಟ್ಯಾಕ್ಸ್ ಮಟ್ಟಿಗೆ ಹೇಳುವುದಾದರೆ ನಾವು ಬರೀ ಪುಸ್ತಕವನ್ನು ಓದಿ ಸಮಾಜವಾದ ಹೇಳುವುದು ಬೇಡ. ಆದಷ್ಟು ಮಟ್ಟಿಗೆ ಸಮಾಜವಾದವನ್ನು ಜಾರಿಗೆ ತರಬೇಕು ನಮ್ಮ ನಿಮ್ಮ ಪ್ರಕಾರ ಹೇಳುವುದಾದರೆ ಸ್ವಲ್ಪ ಮಟ್ಟಿಗೆ ಹೆಚ್ಚಿನ ಟ್ಯಾಕ್ಸ್ ಕೊಡಬೇಕು. ಮತ್ತು ದೊಡ್ಡವರು ಏನು ಇದ್ದಾರೆ ಅವರಿಗೆ ಸ್ವಲ್ಪ ಟ್ಯಾಕ್ಸ್ ಬೀಳುತ್ತದೇ ವಿನಾ ಬಡವರಿಗೆ ಬೀಳುವುದಿಲ್ಲ. ಆದಷ್ಟು ಮಟ್ಟಿಗೆ ಬಡವರು ಟ್ಯಾಕ್ಸ್ ಕೊಡುವುದನ್ನು ಕಡಿಮೆ ಮಾಡುವುದು ಅಗತ್ಯ.

ಶ್ರೀ ಕೋಣಂದೂರು ಲಿಂಗಪ್ಪ :—ಹಾಗಾದರೆ ಟ್ಯಾಕ್ಸ್ ಕೊಡುವುದನ್ನು ನಿಮ್ಮ ಊರಿಗೆ ಹಾಕೋಣವೇ?

ಶ್ರೀ ಎ. ಶಂಕರ ಆಳ್ವ :—ಅತಿ ಅಗತ್ಯವಾಗಿ ಹಾಕಬಹುದು. ಸಾಮಾನ್ಯವಾಗಿ ವರ್ಷಕ್ಕೆ 10 ಲಕ್ಷ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು 50 ಲಕ್ಷ ರೂಪಾಯಿ ವಹಿವಾಟು ಮಾಡುವ ವ್ಯಾಪಾರಿಗಳ ಮೇಲೆ ಸ್ವಲ್ಪ ಹೆಚ್ಚಿನ ತೆರಿಗೆ ಬಿದ್ದರೆ ಅವನು ಕೊಡಲೇ ಬೇಕು. ಅದೇ ರೀತಿ ಸೇಲ್ಸ್ ಟ್ಯಾಕ್ಸ್ ಆಫೀಸರ್ ಕೂಡ ಯಾತ ಒತ್ತಡಕ್ಕೂ ಬೀಳದೆ ಕಲೆಕ್ಷನ್ ಮಾಡುವುದಕ್ಕೆ ನಿಗಾ ಕೊಡಬೇಕು. ಕೆಲವು ಸಂದರ್ಭದಲ್ಲಿ ಒತ್ತಡ ಹೇರಿಬಿಡುತ್ತಾರೆ. ಇವನು ನಮಗೆ ಬೇಕಾದವ, ಇವನ್ನು ನಮ್ಮ ಪಕ್ಷದವ ಸ್ವಲ್ಪ ನೋಡಿಕೊಳ್ಳಿ ಎಂದು ಅವರಿಗೆ ಹೇಳಿದರೆ ಅದರಲ್ಲಿ ಬರುವ ವರಮಾನ ಲ್ಯಾಪ್ಸ್ ಆದರೆ ಹೋಯಿತು. ಅವಾಗ ಅಡ್ಮಿನಿಸ್ಟ್ರೇಟರ್‌ಗೂ ಕೂಡ ಸ್ವಲ್ಪ ಜಿಗುಪ್ಸೆ ಉಂಟಾಗುತ್ತದೆ. ಯಾವನಾದರೂ ಒಬ್ಬ ಆಫೀಸರು ನ್ಯಾಯ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಾ ಇದ್ದರೆ ಯಾವನಾದರೂ ಒಬ್ಬ ಅವರಿಗೆ ಒತ್ತಡ ಹಾಕಿದರೆ ಆ ಆಫೀಸರು ದಾಕ್ಷಿಣ್ಯದಿಂದ ಕೆಲಸ ಮಾಡಿದರೆ ಅವರು ಇನ್ನೊಬ್ಬನಿಗೂ ಇವನು ಬಡವ ಎಂದು ದಾಕ್ಷಿಣ್ಯ ತೋರಿಸಬೇಕಾಗುತ್ತದೆ. ಈ ರೀತಿ ಆಗಬಾರದು. ಆದುದರಿಂದ ಟ್ಯಾಕ್ಸ್ ವಸೂಲ್ಮಾಡುವುದರಲ್ಲಿ ಅಂಥಾ ದಾಕ್ಷಿಣ್ಯಗಳಿಗೆ ಒಳಗಾಗದೆ ವಸೂಲ್ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಹರಿಜನ ಮತ್ತು ಗಿರಿಜನರ ಬಗ್ಗೆ ಹೇಳುವುದಾದರೆ ಅವರ ಬಗ್ಗೆ ಈಗ ಏನು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರೋ ಅದಕ್ಕೆ ನಿಗಾ ಕೊಟ್ಟು ಕೆಲಸ ಮಾಡುವುದು ಅಗತ್ಯ ಎಂದು ಹೇಳುತ್ತೇನೆ. ಏತಕ್ಕೆಂದರೆ ಈಗ ಹರಿಜನ ಕಾಲೋನಿ ಎಂದು ಅವರಿಗೆ ಪ್ರತ್ಯೇಕ ಬಾವಿಗಳು ಉಂಟು. ಈಗ ನಾವು ಅಷ್ಟು

(ಶ್ರೀ ಎ. ಶಂಕರ ಆಳ್ವ)

ಕೆಳಮಟ್ಟದ ಕೆಲಸಕ್ಕೆ ಹೋಗಬಾರದು. ಇದಕ್ಕೆ ಒಂದು ಉದಾಹರಣೆ ಹೇಳುವು ದಾದರೆ ಹಿಂದೆ ನಮ್ಮ ಊರಿನಲ್ಲಿ ಒಂದು ಫುಲ್‌ಮೂನ್‌ಡೇ ಅಂತ ಇಟ್ಟುಕೊಂಡು ಅಲ್ಲಿ ಡಿನ್ನರ್ ಮಾಡುತ್ತಿದ್ದರು. ಒಂದು ದಿವಸ ನಾನೂ ಕೂಡ ಅದನ್ನು ನೋಡಿದೆ. ಆವಾಗ ಏನಾಯಿತು ಎಂದರೆ ಪಾಪ ಹರಿಜನರನ್ನು ಏನು ಮಾಡಿದರು ಎಂದರೆ ಒಂದು ಕಡೆಯಲ್ಲಿ ಕೂರಿಸಿದರು, ಬಾಕಿಯವರನ್ನು ಒಂದು ಕಡೆ ಕೂರಿಸಿದರು. ಅವಾಗ ನಾನು ಹೇಳಿದೆ ಎಲ್ಲರನ್ನೂ ಮಧ್ಯದಲ್ಲಿ ಕೂರಿಸಬೇಕು ಎಂದು. ಈ ಮನೆಯಲ್ಲಿ ಯಾರಾದರೂ ಬ್ರಾಹ್ಮಣರು ಇದ್ದರೆ ಈ ಮಾತನ್ನು ಹೇಳಿದರೆ ಕ್ಷಮಿಸಬೇಕು. ಅದರಂತೆ ಎಲ್ಲರನ್ನೂ ಕೂರಿಸಿದರು. ಎಲ್ಲರೂ ಒಟ್ಟಿಗೆ ಕೂತುಕೊಂಡು ಡಿನ್ನರ್ ಮುಗಿಸಿದೆವು. ನಂತರ ಪುನಃ ಆ ಡಿನ್ನರ್ ಏರ್ಪಾಡಾ ಗಲಿಲ್ಲ. ಈ ಮಾತನ್ನು ನಾನು ಏತಕ್ಕೆ ಹೇಳಿದೆ ಎಂದರೆ ಹರಿಜನರಿಗಾಗಿ, ಅವರ ರಕ್ಷಣೆಗಾಗಿ ಏನು ಒಂದು ಸೆಲ್ ಮಾಡಿದ್ದಾರೆ, ಮತ್ತು ಅನ್‌ಟಚ್‌ಬಿಲಿಟ್ ಬಗ್ಗೆ ಏನು ಒಂದು ಸೆಲ್ ಸರ್ಕಾರದವರು ಮಾಡಿದ್ದಾರೆ ಅದರ ಮೇಲೆ ಸರಿಯಾದ ಆಕ್ಷನ್ ತೆಗೆದುಕೊಳ್ಳುವುದು ಅತಿ ಅಗತ್ಯ ಎಂದು ಹೇಳುತ್ತೇನೆ. ಹಿಂದೆ ಮಹಾತ್ಮಾ ಗಾಂಧಿಯವರು ಹೇಳಿದ್ದರು. 10–20 ಜನ ಸವರ್ಣ ಹಿಂದೂಗಳನ್ನು ಕೊಂದರೂ ಪರವಾಯಿಲ್ಲಾ ಏತಕ್ಕೆಂದರೆ ಇವರು ಅವರಿಗೆ ಅಷ್ಟು ಅನ್ಯಾಯ ಮಾಡಿದ್ದಾರೆ ಎಂದು. ಆದುದರಿಂದ ಈಗಲಾದರೂ ಅವರ ಬಗ್ಗೆ ಹಾಕಿಕೊಂಡಿರತಕ್ಕಂಥ ಅಸ್ಪೃಶ್ಯತಾ ಕಾರ್ಯಕ್ರಮಗಳು ಏನು ಇವೆ ಅದು ಎಷ್ಟು ಬೇಗ ಹೋಗುತ್ತದೋ ಅಷ್ಟರ ಮಟ್ಟಿಗೆ ಇವರು ಸುಖವಾಗಿರಬಹುದು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತು ಹೇಳುವುದಾದರೆ ಮಾನ್ಯ ಸಚಿವರು ಹೇಳಿದ ಹಾಗೆ ಈ ವರ್ಷ ಚಿಲ್ಡ್ರನ್ಸ್ ಯಿಯರ್ ಎಂದು ಏನು ಹೇಳಿದರು ಅದಕ್ಕೆ ನಾವು ಅವರಿಗೆ ಬೆಂಬಲ ಕೊಡಬೇಕು, ನಮ್ಮ ದೇಶ ಒಳ್ಳೆಯದಾಗಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಕೆ. ಪುಟ್ಟಸ್ವಾಮಿ, (ಚಾಮುಂಡೇಶ್ವರಿ) :—ಮಾನ್ಯ ಅಧ್ಯಕ್ಷರೇ, 1975—76ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ನಾನು ಕೆಲವು ಮಾತುಗಳನ್ನು ಆಡಲು ತಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ.

ಆಯವ್ಯಯ ಪಟ್ಟಿಯ ಮೇಲೆ ಚರ್ಚೆಯಾಗುವಾಗ ಸಾಧ್ಯವಾದಷ್ಟು ಹೊತ್ತಿಗೂ ಮಂತ್ರಿಮಂಡಲದ ಎಲ್ಲ ಸಚಿವರೂ ಈ ಸಭೆಯಲ್ಲಿರುವುದು ಅಪೇಕ್ಷಣೀಯ. ಆಯವ್ಯಯ ಪಟ್ಟಿಯನ್ನು ಮಂಡಿಸುವವರು ಹಣಕಾಸಿನ ಸಚಿ

ವರು ಆದರೂ ರಾಜ್ಯದ ಆಡಳಿತದ ವಿಚಾರದಲ್ಲಿ ಎಲ್ಲ ಭಾಗಗಳಿಂದ ಬರುವ ಸದಸ್ಯರುಗಳ ಟೀಕೆಗಳು ಹಾಗೂ ಸಲಹೆಗಳು ಕೂಡ ಬರುತ್ತವೆ. ಈ ಸಂದರ್ಭದಲ್ಲಿ ಎಲ್ಲ ಸಚಿವರೂ ಹಾಜರಿದ್ದು ತಿಳಿಯಬೇಕೇ ಹೊರತು ಇಲ್ಲಿ ಶೀಘ್ರ ಲಿಪಿಕಾರರು ಬರೆದುಕೊಂಡು ಕೊಡುವ ವರದಿಗಳನ್ನು ನೋಡಿಕೊಂಡರೆ ಅವರ ಮನಸ್ಸಿನ ಮೇಲೆ ಇಲ್ಲಿ ಹಾಜರಿದ್ದಷ್ಟು ಪರಿಣಾಮವಾಗುವುದಿಲ್ಲ. ಅದೇಕೋ ಏನೋ ಇಂತಹ ಒಂದು ಚರ್ಚೆ ಇಲ್ಲಿ ನಡೆಯುವಾಗ ಇದಕ್ಕೆ ಎಷ್ಟು ಮಟ್ಟಿನ ಆದ್ಯತೆ ಮತ್ತು ಗೌರವ ಕೊಡಬೇಕೋ ಅಷ್ಟು ಕೊಡುತ್ತಿಲ್ಲ ಎಂದು ನಾನು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ನಾನು ಇಲ್ಲಿ ಮೂರು ನಾಲ್ಕು ದಿನಗಳಿಂದಲೂ ನೋಡುತ್ತಿದ್ದೇನೆ. ಈ ಸಭೆಯಲ್ಲಿ ಸಚಿವರುಗಳು ಹಾಜರಿರುವುದಿಲ್ಲ. ಇಂತಹ ಚರ್ಚೆಯಾಗುತ್ತಿರುವಾಗ ಹಾಜರಿಲ್ಲದಿದ್ದರೆ ನಾವು ಈ ಚರ್ಚೆಯಲ್ಲಿ ಭಾಗ ವಹಿಸುವುದು ಅಷ್ಟು ಉಪಯೋಗವಾಗುವುದಿಲ್ಲ. ಇದನ್ನು ತಾವು ಅವರ ಗಮನಕ್ಕೆ ತರಬೇಕೆಂದು ಹೇಳುತ್ತೇನೆ. ಇಲ್ಲಿರುವ ಸಚಿವರೂ ಅವರ ಗಮನಕ್ಕೆ ಇದನ್ನು ತರುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ಈ ಸಭೆಯಲ್ಲಿ ನಿನ್ನೆಯಿಂದ ಪ್ರಾಮುಖ್ಯವಾಗಿ ವಿರೋಧ ಪಕ್ಷದ ನಾಯಕರು ಹಾಗೂ ಇತರ ಪ್ರಮುಖ ಸದಸ್ಯರು ಇಲ್ಲಿ ಮಾತನಾಡಿದ್ದಾರೆ. ನಾನೂ ಕೂಡ ಬಹಳ ಕಾಲದಿಂದ ಈ ಸಭೆಯ ಸದಸ್ಯನಾಗಿ ಇಲ್ಲಿ ಮಾಡುವ ಭಾಷಣಗಳನ್ನು ಕೇಳಿಕೊಂಡು ಬರುತ್ತಿದ್ದೇನೆ. ಅದರಲ್ಲೂ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರುಗಳು ಸ್ವಲ್ಪ ಯೋಗ್ಯವಾದ ಹಾಗೂ ತಿರುಳಿಂದ ಕೂಡಿದ ಮಾತುಗಳನ್ನು ಹೇಳಿದ್ದಾರೆ. ಆದರೆ ಅದರ ತಿರುಳು ಒಂದೇ ಎಂದು ನನಗೆ ಗೊತ್ತಾಗುತ್ತದೆ. ಪ್ರಾಮುಖ್ಯವಾಗಿ ಅವರು ಹೇಳುತ್ತಿರುವುದು ಕೇಂದ್ರ ಸರಕಾರದಲ್ಲಿ ಈ ರಾಜ್ಯ ಸರಕಾರಕ್ಕೆ ಪ್ರಭಾವ ಇಲ್ಲ ಅಥವಾ ಪ್ರಭಾವ ಇದ್ದರೂ ಅವರ ಹತ್ತಿರ ಹೇಳಿಕೊಳ್ಳುವಷ್ಟು ಶಕ್ತಿ ಇಲ್ಲ ಮತ್ತು ನಿಮಗೆ ಅವರು ಕೇಳುವಷ್ಟು ಸಹಾಯವನ್ನು ಕೊಡುವುದಿಲ್ಲ, ಅವರೊಡನೆ ಹೋರಾಟ ಮಾಡಲು ನಿಮಗೆ ಶಕ್ತಿ ಇಲ್ಲ ಇದಕ್ಕಾಗಿ ಕೇಂದ್ರ ಸರಕಾರವನ್ನು ಇನ್ನೂ ಒತ್ತಾಯದಿಂದ ಆಗ್ರಹ ಮಾಡಬೇಕಾಗಿತ್ತು ಎಂದು ಆ ಕಡೆ ಇರುವ ಸದಸ್ಯರುಗಳು ಈ ವರ್ಷವೇ ಅಲ್ಲ ಕಳೆದ ವರ್ಷದಲ್ಲೇ ಅಲ್ಲ ರಾಜ್ಯಾಂಗ ಶಾಸನ ಜಾರಿಗೆ ಬಂದ ಕಾಲದಿಂದಲೂ ಇದೇ ರೀತಿ ಗೂಢದ ಚರ್ಚೆ ಇಲ್ಲಿ ಆಗುತ್ತಿದೆ ಮತ್ತು ರಾಜ್ಯಕ್ಕೆ ಸಾಕಷ್ಟು ಹಣ ಸಹಾಯ ನಮ್ಮ ಯೋಜನೆಗಳಿಗಾಗಿ ಕೊಡುತ್ತಿಲ್ಲ ಎಂದು ಆ ಕಡೆ ಇರುವ ಸದಸ್ಯರೂ ಹೇಳಿದ್ದಾರೆ. ಅಲ್ಲದೆ ಈ ಕಡೆಯಲ್ಲಿರುವ ಸದಸ್ಯರೂ ಇದೇ ಮಾತುಗಳನ್ನು ಕುರಿತು ಇಲ್ಲಿ ಮಾತನಾಡುತ್ತಿದ್ದಾರೆ. ಇದು ನಿಜವೇ ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕು. ಸಾಮಾನ್ಯವಾಗಿ ಪದೇ ಪದೇ ಇದೇ ಮಾತನ್ನೇ ಇಲ್ಲಿ ಹೇಳುತ್ತಿದ್ದಾರೆ. ಇದರಲ್ಲೆ ಏನಾದರೂ ಹುರುಳಿದೆಯೋ ಇಲ್ಲವೇ ? ನಿಜಾಂಶವಿದೆಯೇ ? ರಾಜ್ಯಕ್ಕೆ ನ್ಯಾಯವಾಗಿ ಸಲ್ಲಬೇಕಾದ ನೆರವು ದೊರೆಯದೇ ಇರಲು ಯಾವುದಾದರೂ ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆಯೇ?

(ಶ್ರೀ ಕೆ. ಪುಟ್ಟಸ್ವಾಮಿ)

ಇದರಿಂದಾಗಿ ನಮ್ಮ ಸರಕಾರದವರ ನೆರವನ್ನು ಬಿಟ್ಟು ಬಿಟ್ಟಿದ್ದಾರೆಯೇ ಎನ್ನುವುದನ್ನು ನಾವು ಹಾಗೂ ನೀವು ಎಲ್ಲರೂ ಪರಿಶೀಲನೆ ಮಾಡುವುದು ಅತ್ಯಗತ್ಯ ವೆಂದು ಇಲ್ಲಿ ಹೇಳುತ್ತೇನೆ.

ಅಧ್ಯಕ್ಷರೇ, ತಮಗೇ ಗೊತ್ತಿದೆ, ಐದನೇ ಹಣಕಾಸಿನ ಆಯೋಗದವರು ಕೊಟ್ಟ ತೀರ್ಪಿನ ಪ್ರಕಾರ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ ಮತ್ತು ಬಹಳ ತೊಂದರೆಯೂ ಆಗಿದೆ ಎಂದು ಆ ಭಾಗದ ಸದಸ್ಯರು ಹಾಗೂ ನಮ್ಮ ಆಡಳಿತ ಪಕ್ಷದವರೂ ಕೂಡ ಮಾತನಾಡುತ್ತ ಹೇಳಿದರು. ಆ ರೀತಿ ಆಗಿದ್ದು ನಿಜ. ಆದರೆ ಅದನ್ನು ಉದ್ದೇಶಪೂರ್ವಕವಾಗಿ ಮಾಡಿರಲಿಕ್ಕಿಲ್ಲ. ಯಾವುದನ್ನು ನಾವು ನಿರೀಕ್ಷೆ ಮಾಡಿದ್ದೇವೋ ಅವರಂತೆ ನಮ್ಮ ರಾಜ್ಯಕ್ಕೆ ಸಹಾಯ ದೊರೆಯದೇ ಇದ್ದುದರಿಂದ ಸ್ವಲ್ಪ ಇದರ ಪರಿಣಾಮದಿಂದ ತೊಂದರೆಗಳಾದವು. ಐದನೇ ಹಣಕಾಸಿನ ಆಯೋಗದಿಂದ ನಮಗೆ ಸುಮಾರು 250 ಕೋಟಿಯಷ್ಟು ಬಂದಿದೆ. ಇದರಿಂದ ನಮ್ಮ ಆಡಳಿತದ ಕಾರ್ಯಗಳಿಗೆ ಅಡ್ಡಿ ಆತಂಕಗಳಾದವು ಹಾಗೂ ತೊಂದರೆಗಳೂ ಆದವು. ಬೇರೆ ರೀತಿಯಿಂದ ಇಂಡಿಯಾ ಸರಕಾರದವರು ಪ್ಲಾನು ಅಸಿಸ್ಟೆನ್ಸ್ ಅಲ್ಲದೆ ಬೇರೆ ರೀತಿಯಲ್ಲಿ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದರು, ಆದರೂ ಎಷ್ಟು ನಿರೀಕ್ಷೆ ಮಾಡಿದ್ದೇವೋ ಅಷ್ಟು ಬರಲಿಲ್ಲ. ಆದರೆ ಆರನೇ ಹಣಕಾಸಿನ ಆಯೋಗದಲ್ಲಿ ರಾಜ್ಯಗಳ ಆಡಳಿತದಲ್ಲಿ ನುರಿತವರು ಹಾಗೂ ರಾಜ್ಯದ ಆಡಳಿತದಲ್ಲಿ ಅನುಭವ ಇದ್ದವರೂ ಹಾಗೂ ಈಗ ಕೇಂದ್ರ ಸರಕಾರದಲ್ಲಿ ಗೃಹ ಸಚಿವರಾಗಿರುವ ಶ್ರೀಮಾನ್ ಬ್ರಹ್ಮಾನಂದ ರೆಡ್ಡಿಯವರು ಅಧ್ಯಕ್ಷರಾದುದು ಬಹಳ ಸಂತೋಷಕರವಾದ ಹಾಗೂ ಅಭಿಮಾನದ ಮಾತು. ಈ ಆರನೇ ಹಣಕಾಸಿನ ಆಯೋಗದಿಂದ ಇದೂ ಕೂಡ ಕಾನ್ಸ್‌ಟಿಟ್ಯೂಷನ್‌ಗೆ ಅನುಸಾರವಾಗಿ ನೇಮಕವಾದದ್ದು, ಇದರಿಂದ ನ್ಯಾಯ ದೊರೆತಿದೆ ಎಂದು ಹೇಳಬಹುದು. ಆದರೆ ನಮಗೆ ಇನ್ನೂ ಹೆಚ್ಚು ಬರಬೇಕು ಎಂದು ಆಸೆ ಇದೆ. ಆದರೂ ಇಷ್ಟು ಸಾಲದು ಇನ್ನೂ ಬೇಕು ಮತ್ತು ನಮ್ಮ ಆವಶ್ಯಕತೆ ಇನ್ನೂ ಹೆಚ್ಚಾಗಿರುವಾಗ ನಮಗೆ ಸಲ್ಲಬೇಕಾದ ಸಹಾಯವನ್ನು ಇಂಡಿಯಾ ಸರಕಾರದವರು ತೋರಿಸಬೇಕಾದ್ದು ಅವರ ಆದ್ಯ ಕರ್ತವ್ಯ. ಇದಕ್ಕೆ ಅವರು ಕೃಪೆ ತೋರಿಸಬೇಕಾಗಿತ್ತು ಎನ್ನುವುದಿಲ್ಲ. ಇದು ನಮ್ಮ ಹಕ್ಕು. ಆರನೇ ಹಣಕಾಸಿನ ಆಯೋಗದಿಂದ ಬಂದಿರುವ ಪ್ರತಿಫಲ ಸುಮಾರು 510 ಕೋಟಿಯಷ್ಟು ಬಂದಿದೆ. ನಮಗೇನೋ ನೂರಕ್ಕೆ ನೂರರಷ್ಟು ಸಹಾಯ ಸಿಗಬೇಕು. ಇಲ್ಲ ಎಂದು ಯಾರೂ ಹೇಳುವುದಿಲ್ಲ. ನಾವು ಸಹಾಯ ಕೇಳಬೇಕು ಇದು ನಮ್ಮ ಹಕ್ಕು. ಆದರೆ ರಾಜ್ಯಾಂಗ ಬದ್ಧವಾಗಿ ನೇಮಕವಾಗಿರುವ ಆಯೋಗ ಇತರ ಎಲ್ಲ ರಾಜ್ಯಗಳಿಗೂ ಅನುಕೂಲವಾಗಲೆಂದು ಒಂದು ಫೈನಾನ್ಸ್ ಕಮಿಷನ್ ಎಂದು ನೇಮಕ ಮಾಡಿದರು. ಇದು ಇಂಡಿಯಾ

ಸರಕಾರದ ನಿಯಮಗಳ ಚೌಕಟ್ಟಿನಲ್ಲೇ ಹಾಗೂ ಕಾನೂನು ರೀತಿಯಾಗಿ ಮಾಡಿರುವದು. ಜನರಿಂದ ಬರುವ ತೆರಿಗೆಗಳನ್ನು ನೋಡಿ ಆಯಾ ರಾಜ್ಯಗಳಿಗೆ ಇಂತಿಷ್ಟು ಸಹಾಯ ಎಂದು ಇವರು ನಿರ್ಧಾರ ಮಾಡುತ್ತಾರೆ. ಹಾಗೆ ನಿರ್ಧಾರ ಮಾಡುವಾಗ ನಮ್ಮ ರಾಜ್ಯಕ್ಕೆ ಸುಮಾರು 510 ಕೋಟಿಯಷ್ಟು ಎಂದು ನಮಗೆ ಬಂದಿದೆ. ನಿನ್ನೆ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾ ಎಕ್ಸೈಜು ರೆವಿನ್ಯೂನಲ್ಲಿ ಇಂತಿಷ್ಟು ಪರ್ಸೆಂಟು ಬರಬೇಕಾಗಿತ್ತು ಎಂದು ಹೇಳುತ್ತ ಅನೇಕ ವಿವರಗಳನ್ನೂ ಇಲ್ಲಿ ಹೇಳಿದರು. ನಾನು ಅವರಿಗೆ ಇಲ್ಲಿ ಒಂದು ಮಾತು ಹೇಳಬಯಸುತ್ತೇನೆ. ಅವರೂ ಹೇಳುವುದೂ ಸರಿಯಾಗುವುದಿಲ್ಲ ಪರ್ಸೆಂಟೇಜನ್ನು ವರ್ಕ್ ಔಟು ಮಾಡಬೇಕಾಗುತ್ತದೆ. ಹಾಗೆ ಮಾಡುವಾಗ ನಮ್ಮ ದೇಶದ ಬಗ್ಗೆ ತಾರತಮ್ಯ ಮಾಡಿದ್ದಾರೆಯೇ ? ನಮಗೆ ನ್ಯಾಯವಾಗಿ ಸಲ್ಲಬೇಕಾದ ಹಣ ಕೊಟ್ಟಿಲ್ಲವೇ ? ಮತ್ತು ಕೇಂದ್ರ ಸರಕಾರದಿಂದ ನಮಗೆ ಬರತಕ್ಕ ಹಣ ಕಾನೂನು ರೀತಿಯಾಗಿ ರಾಜ್ಯಾಂಗ ಬದ್ಧವಾಗಿಯೇ ಇರಬೇಕು. ಆಯೋಗ ಕೆಲಸ ಮಾಡುವಾಗ ಕೆಲವು ತತ್ವಗಳನ್ನು ಅನುಸರಿಸಿ ಮಾಡಬೇಕಾಗುತ್ತದೆ. ಈ ಅಯೋಗದವರು ಕೇಂದ್ರ ಸರಕಾರಕ್ಕೆ ಏನು ಶಿಫಾರಸುಗಳನ್ನು ಮಾಡುತ್ತಾರೋ ಅದನ್ನು ಕೇಂದ್ರ ಸರಕಾರದವರು ಒಪ್ಪಿಕೊಳ್ಳುತ್ತಾರೆ. ಹಾಗೆ ಕೇಂದ್ರ ಸರಕಾರ ಐದನೇ ಹಾಗೂ ಆರನೇ ಹಣಕಾಸಿನ ಆಯೋಗದ ಶಿಫಾರಸುಗಳನ್ನು ಒಪ್ಪಿಕೊಂಡಿದ್ದಾರೆ. ಇದರಲ್ಲಿ ಯಾವ ರೀತಿಯ ಹೆಚ್ಚು ಕಡಿಮೆಯನ್ನೂ ಮಾಡಲಿಲ್ಲ. ಇದಕ್ಕಾಗಿ ಕೇಂದ್ರ ಸರಕಾರ ಮಲತಾಯಿ ಧೋರಣೆ ಅನುಸರಿಸುತ್ತದೆ ಎಂದು ಹೇಳುವುದರಲ್ಲಿ ಯಾವ ನ್ಯಾಯವೂ ಇಲ್ಲ. ಇದನ್ನು ನಾವು ತಿಳಿದುಕೊಳ್ಳಬೇಕು. ಕೇಂದ್ರ ಸರಕಾರ ನಮಗೇನೂ ದೂರವಾದ ಸರಕಾರವಲ್ಲ. ರಾಜ್ಯಾಂಗದಲ್ಲಿ ಇರುವಂತೆ ಶಾಸನಬದ್ಧವಾಗಿ ಜನರಿಂದ ಆರಿಸಲ್ಪಟ್ಟ ಆಡಳಿತವೇ ಅಲ್ಲೂ ಇರುವುದು. ಜನರು ಎಲ್ಲ ರಾಜ್ಯಗಳಲ್ಲೂ ತೆರಿಗೆ ಕೊಡುತ್ತಿರುವಂತೆ ಇಲ್ಲೂ ಕೊಡುತ್ತಿದ್ದಾರೆ. ನಮಗೆ ಸಮಾನವಾಗಿ ಹಂಚುವಾಗ ಒಂದು ಕಡೆ ಹತ್ತು ಅರವತ್ತು ಕೋಟಿ ಹೆಚ್ಚು ಬರಬಹುದು. ಇನ್ನು ಒಂದು ಕಡೆ ಸ್ವಲ್ಪ ಕಡಿಮೆ ಬರಬಹುದು. ಬೇರೆ ಸರಕಾರಗಳ ಬಗ್ಗೆ ಯಾವ ರೀತಿ ಮಮತೆ ಇರುತ್ತದೋ ಅದರಂತೆ ನಮ್ಮ ರಾಜ್ಯದ ಮೇಲೂ ಕೇಂದ್ರ ಸರಕಾರದ ಮಮತೆ ಇದೆ. ಹಾಗೆ ಮಲತಾಯಿ ಧೋರಣೆ ಇಲ್ಲಿ ಅನುಸರಿಸುತ್ತಿದ್ದಾರೆ ಎನ್ನತಕ್ಕದ್ದು ಇಲ್ಲಿ ನ್ಯಾಯವಲ್ಲ. ಕೇಂದ್ರ ಸರಕಾರದಿಂದ ನಮ್ಮ ಜನರ ಮೂಲಕ ವಸೂಲಾಗುವ ತೆರಿಗೆಯ ಪ್ರಮಾಣದಲ್ಲಿ ನಮಗೆ ನ್ಯಾಯವಾಗಿ ಬರಬೇಕಾದ ಪ್ರಮಾಣ ಬರುತ್ತಿಲ್ಲ ಎಂದು ಪದೇ ಪದೇ ಹೇಳುತ್ತಾ ಹೋದರೆ ಇದರಿಂದ ಜನರ ಮೇಲೆ ಏನು ಪರಿಣಾಮವಾಗುತ್ತದೆ ? ಇದರಲ್ಲಿ ಏನೋ ಒಂದು ರೀತಿಯ ಅನುಮಾನ ಬರಬಹುದು ಇದರಿಂದ ಯಾವ ಪ್ರಯೋಜನವನ್ನೂ ಸಾಧಿಸಿದಂತೆ ಆಗುವುದಿಲ್ಲ.

(ಶ್ರೀ ಕೆ. ಪುಟ್ಟಸ್ವಾಮಿ)

ಇನ್ನೊಂದು. ನಮ್ಮಲ್ಲಿ ಈಗ ಯೋಜನೆಗಳು, ನಮ್ಮ ಅಭಿವೃದ್ಧಿ ಕಾರ್ಯಗಳು ಎಲ್ಲಾ ಯೋಜನಾ ಬದ್ಧವಾಗಿ ನಡೆಯತಕ್ಕದ್ದು ಇದೆ. ಅದು ಪ್ರತಿಯೊಂದೂ ಕೂಡ ಯೋಜನೆಯಲ್ಲಿ ಸೇರಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಹೇಗೆ ಗುರಿ ಮುಟ್ಟಬೇಕು ಎನ್ನುವುದು ನಿರ್ಧಾರವಾಗುತ್ತದೆ. ಅದಕೆ ಇಂಡಿಯಾ ಸರ್ಕಾರದವರು ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭದಲ್ಲಿಯೇ ಎಷ್ಟು ಭಾಗ ಕೊಡುತ್ತೇವೆ ಎಂಬುದನ್ನು ಹೇಳುತ್ತಾರೆ. ಅದೂ ಕೂಡ ಕೆಲವು ತತ್ವಗಳಿಗೆ ಒಳಪಟ್ಟು ಅವರು ನಮಗೆ ಹಣ ಸಹಾಯ ಮಾಡುತ್ತಾರೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಗಾಡ್ಗಿಲ್ ಅವರ ನೀತಿಯನ್ನು ಅನುಸರಿಸಿ ನಮ್ಮ ರಾಜ್ಯಕ್ಕೆ ಏನು ಕೊಡಬೇಕು ಎಂಬುದು ನಿರ್ಧಾರವಾಗಿದೆ. ಅದರ ಪ್ರಕಾರ ಅವರು ಕೊಟ್ಟುಕೊಂಡು ಬಂದಿದ್ದಾರೆ. 5ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅನುಸರಿಸಬೇಕಾದ ತತ್ವ ನಿರ್ಧಾರವಾಗಿಲ್ಲ 4ನೇ ಪಂಚವಾರ್ಷಿಕ ಯೋಜನೆಯ 5ನೇ ವರ್ಷದಲ್ಲಿ ಎಂದರೆ ಕೊನೆಯ ವರ್ಷದಲ್ಲಿ ಎಷ್ಟು ಹಣ ಸಹಾಯ ಕೊಟ್ಟಿರೋ ಅಷ್ಟುವನ್ನು ಎಂದರೆ 35.46 ಕೋಟಿ ರೂಪಾಯಿಗಳನ್ನು 5ನೇ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದಲ್ಲಿ ಕೊಟ್ಟಿದ್ದಾರೆ. ಎರಡನೇ ವರ್ಷವೂ ಅಷ್ಟೇ ಕೊಟ್ಟಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಹೇಳಿದ ಹಾಗೆ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಸೇರಿದಾಗ ಇದನ್ನು ನಿರ್ಧಾರ ಮಾಡಬೇಕಾಗುತ್ತದೆ. ಆಗ ಯಾವ ತತ್ವಕ್ಕೆ ಒಳಪಟ್ಟು ಯಾವ ತತ್ವವನ್ನು ಅನ್ವಯ ಮಾಡಿ ಪ್ರತಿಯೊಂದು ರಾಜ್ಯಕ್ಕೂ ಕೇಂದ್ರ ಸರ್ಕಾರದ ನೆರವು ಕೊಡಬೇಕು ಎಂಬುದು ನಿರ್ಧಾರವಾಗಬೇಕು. ನಮ್ಮ ಹಣಕಾಸಿನ ಸಚಿವರು ಆ ಕಡೆಗೆ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ನಾನು ಆಶೆ ಮಾಡುತ್ತೇನೆ. ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಸೇರಿ ಆ ವಿಷಯವನ್ನು ನಿರ್ಣಯ ಮಾಡುತ್ತಾರೆ ಎಂದು. ಈ ನಿರ್ಣಯವನ್ನು ಮಾಡುವ ಕಾಲದಲ್ಲಿ ನನಗೆ ಆಶೆ ಇದೆ ನಮ್ಮ ದೇಶದಲ್ಲಿರತಕ್ಕ ರಾಷ್ಟ್ರೀಯ ದೃಷ್ಟಿಯಿಂದ ಪ್ರಾಮುಖ್ಯವಾಗಿರತಕ್ಕ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿ ಹೆಚ್ಚಿನ ಪ್ರಮಾಣದಲ್ಲಿ ನೆರವು ದೊರೆಯುತ್ತದೆ ಎಂದು ನಿರೀಕ್ಷೆ ಮಾಡುತ್ತೇನೆ. ರಾಷ್ಟ್ರೀಯ ದೃಷ್ಟಿಯಿಂದ ಗಣ್ಯವಾದ ಪ್ರಾಮುಖ್ಯವಾದ ಕಾರ್ಯಗಳನ್ನು ಕೈಗೊಂಡಿರತಕ್ಕದ್ದು ಈ ಮಾನ್ಯ ಸಭೆಯವರಿಗೆ ಗೊತ್ತಿರತಕ್ಕ ವಿಷಯ. ಈಗ ನಮ್ಮ ರಾಜ್ಯ ಅಷ್ಟೇ ಅಲ್ಲ ರಾಷ್ಟ್ರಾದ್ಯಂತ ವಿದ್ಯುಚ್ಛಕ್ತಿ ಕೊರತೆ ನಮ್ಮನ್ನು ಕಾಡಿಸುತ್ತಿದೆ. ನಮ್ಮ ಅಭಿವೃದ್ಧಿಗೆ ಕುಂಠಿತವಾಗಿರತಕ್ಕದ್ದು, ಅಡಚಣೆಯನ್ನು ಒಡ್ಡಿರತಕ್ಕದ್ದು ಎಲ್ಲರ ಗಮನವನ್ನು ಸೆಳೆಯತಕ್ಕದ್ದು ವಿದ್ಯುಚ್ಛಕ್ತಿ ಅಭಾವ. ವಿದ್ಯುಚ್ಛಕ್ತಿ ತಯಾರಾಗುವುದು ಯಾವ ಯಾವ ಮೂಲದಿಂದ ಎಂಬುದು ಗೊತ್ತಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ನೈಸರ್ಗಿಕ ಮೂಲದಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ವಿಪುಲವಾದಂತಹ ಅವಕಾಶ ಇದೆ. ಇದನ್ನು ವಿವರಣೆ ಮಾಡಬೇಕಾದ ಅಗತ್ಯ

ವಿಲ್ಲ. ದೆಹಲಿಯಲ್ಲಿ ಕುಳಿತುಕೊಂಡಿರುವ ವರಿಷ್ಠರು ನಮಗೆ ನೈಸರ್ಗಿಕ ಮೂಲ ವನ್ನು ಉಪಯೋಗಿಸಿಕೊಳ್ಳಲು ಆದ್ಯತೆ ಕೊಡುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಥರ್ಮಲ್ ಎಲೆಕ್ಟ್ರಿಸಿಟಿ, ಅಥವಾ ಅಣು ಶಕ್ತಿಯನ್ನು ಉಪಯೋಗಿಸಿಕೊಂಡು ವಿದ್ಯುಚ್ಛಕ್ತಿ ತಯಾರು ಮಾಡುವುದಕ್ಕೆ ಎಷ್ಟು ಖರ್ಚು ವೆಚ್ಚ ಬರುತ್ತದೆ ಎಂಬುದು ಗೊತ್ತಿದೆ. ಆದ್ದರಿಂದ ಇದಕ್ಕೆ ಮೊದಲು ಪ್ರಾಶಸ್ತ್ಯ ಸಿಕ್ಕುತ್ತದೆ. ಈಗ ದೇಶ ದಲ್ಲಿ ಒದಗಿರತಕ್ಕ ವಿದ್ಯುಚ್ಛಕ್ತಿ ಅಭಾವದ ದೆಶೆಯಿಂದ ನಮ್ಮ ರಾಜ್ಯದಲ್ಲಿರತಕ್ಕ ನೈಸರ್ಗಿಕ ಮೂಲದಿಂದ ವಿದ್ಯುಚ್ಛಕ್ತಿ ಉತ್ಪನ್ನ ಮಾಡುವುದಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೆರವು ಕೊಡುತ್ತಾರೆಂದು ನಿರೀಕ್ಷಣೆ ಮಾಡಿದರೆ ತಪ್ಪಾಗಲಾರದು. ಇವೊತ್ತು ಆಹಾರಾಭಾವದಿಂದ ಹೊರದೇಶಗಳಿಂದ ಮತ್ತು ಪರದೇಶಗಳಿಂದ ಆಹಾರವನ್ನು ತರಿಸುವಂಥಾ ಪರಿಸ್ಥಿತಿ ಪದೇ ಪದೇ ಒದಗುತ್ತಿದೆ. ದೇಶದಲ್ಲಿರತಕ್ಕ ಆಹಾರಾಭಾವ ವಿಷಯ ನಮಗೆಲ್ಲರಿಗೂ ಗೊತ್ತಿದೆ. ನಮಗೆ ಕೃಷ್ಣಾ ನದಿಯ ನೀರನ್ನು ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಬಹುಷಃ ನಮ್ಮ ರಾಜ್ಯ ಒಂದೇ ಅಲ್ಲ, ನಾನು ನಿರೀಕ್ಷಣೆ ಮಾಡುತ್ತೇನೆ ಕೃಷ್ಣಾ ನದಿಯಲ್ಲಿ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲು ಸರಿಯಾದ ರೀತಿ ಯಲ್ಲಿ ವ್ಯವಸ್ಥೆ ಮಾಡಿದರೆ ಇಡೀ ದಕ್ಷಿಣ ಇಂಡಿಯಾ ದೇಶದಲ್ಲೇ ಆಹಾರ ಅಭಾವ ಇರುವುದಿಲ್ಲ ಎಂದು ನಿಸ್ಸಂದೇಹದಿಂದ ಹೇಳಬಹುದು. ನಾಲ್ಕು ರಾಜ್ಯಗಳಲ್ಲಿ ಎಂದರೆ ಆಂಧ್ರ, ಮದ್ರಾಸ್, ಕೇರಳ ಮತ್ತು ಕರ್ನಾಟಕ ಈ ನಾಲ್ಕು ರಾಜ್ಯ ಗಳಲ್ಲಿಯೂ ಕೂಡ ಆಹಾರದ ಅಭಾವ ಇರುವುದಿಲ್ಲ. ಅಷ್ಟೇ ಅಲ್ಲ. ಅನೇಕ ಬೇರೆ ಬೆಳೆಗಳನ್ನೂ ಕೂಡ ಬೆಳೆಯಬಹುದು. ಹತ್ತಿ, ಎಣ್ಣೆ ಬೀಜ ಇವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಯಬಹುದು. ರಾಷ್ಟ್ರದ ಉತ್ಪನ್ನವನ್ನು ಬಹುಮುಖವಾಗಿ ಹೆಚ್ಚಿಸಬಹುದು. ಇದು ಎಲ್ಲರಿಗೂ ಗೊತ್ತಿದೆ. ನಮಗೆ ಆತಂಕ ಇರತಕ್ಕದ್ದು ಹಣಕಾಸಿನ ಅಭಾವ. ಅದಕ್ಕಾಗಿ ಕೃಷ್ಣಾ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ ಎನ್ನುವುದನ್ನು ಕಿವಿಯಲ್ಲಿ ಕೇಳಿದ್ದರೂ ಕೂಡ ರಾಷ್ಟ್ರದ ನಾಯಕರು ಆ ಕಡೆ ಗಮನ ಕೊಡಲಿಲ್ಲ, ಪಕ್ಷಪಾತ ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ತಾಯಿ ಮಗುವಿಗೆ ಹಾಲು ಕೊಡುವುದಿಲ್ಲ ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕರ್ನಾಟಕ ಜನತೆ ಆಶೆಯಲ್ಲಿಯೇ ಮುಕ್ತ ರಾಗಬೇಕು ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಆಶೆಯನ್ನು ಇಟ್ಟುಕೊಳ್ಳಬೇಕು. ಮನುಷ್ಯ ಆಶಾವಾದಿಯಾಗಿರಬೇಕು. ಇಂಥಾ ಪ್ರಾಮುಖ್ಯವಾದ ಯೋಜನೆಗಳು ಇರು ವಾಗ ಈ ಯೋಜನೆಗೆ ಕೇಂದ್ರ ಸರ್ಕಾರ ಯಾವ ನೀತಿಯನ್ನು ಅನುಸರಿಸಿ ಕೊಡ ಬೇಕು ? ನಮಗೆ ಹೆಚ್ಚಿನ ಗಮನ ಕೊಡಬೇಕು. ಅದರಲ್ಲಿ ಸಂದೇಹವಿಲ್ಲ

(ಶ್ರೀ ಕೆ. ಪುಟ್ಟಸ್ವಾಮಿ)

ಎಂದು ನಾನು ಮತ್ತೊಮ್ಮೆ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇದುವರೆಗೂ ಕಳೆದ ಎರಡು ವರ್ಷಗಳಿಂದ ನಮ್ಮ ವಿಚಾರದಲ್ಲಿ ಕೇಂದ್ರ ಸರ್ಕಾರ ಯಾವರೀತಿ ನಡೆದುಕೊಂಡಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಅದನ್ನು ಪರಿಶೀಲನೆ ಮಾಡೋಣ. ಅಥವಾ ಬೇರೆ ರಾಜ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿನ ಸಹಾಯ ವನ್ನು ಮಾಡಿ ನಮ್ಮನ್ನಾದರೂ ಅಲಕ್ಷ್ಯ ಮಾಡಿದ್ದಾರೆ ಅದನ್ನು ಪರಿಶೀಲನೆ ಮಾಡ ಬೇಕಾದ್ದು ಅಗತ್ಯ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮಗೆ ಬರಗಾಲದಲ್ಲಿ ಬಂದದ್ದೇ ಸಾಕ್ಷಿ ಯಾಗಿ ಉಳಿದಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಪುಟ್ಟಸ್ವಾಮಯ್ಯನವರು ಮಧ್ಯ ಮಧ್ಯ ಎದ್ದು ಮಾತನಾಡದೇ ಹೋದರೆ ಶೋಭಾಯಮಾನವಾಗಿರುವುದಿಲ್ಲ. 1973—74ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು ನಮಗೆ 35.46 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸ್ಪೆಷಲ್ ಅಸಿಸ್ಟೆನ್ಸ್ 9 ಕೋಟಿ 46 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕಾಳಿನದಿ ಪ್ರಾಜೆಕ್ಟಿಗೆ 14 ಕೋಟಿ 59 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಹೀಗೆ ಒಟ್ಟು 59 ಕೋಟಿ 81 ಲಕ್ಷ ರೂಪಾಯಿ ಗಳನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ —5ನೇ ಫೈನಾನ್ಸ್ ಕಮಿಷನ್‌ನಲ್ಲಿ ನಮ್ಮ ರಾಜ್ಯಕ್ಕೆ ಹೊಡೆತ ಬಿದ್ದಿತ್ತು. ಅದನ್ನು ಇದರಲ್ಲಿ ಎಷ್ಟು ತುಂಬಿಕೊಟ್ಟಿದ್ದಾರೆ ಎಂಬುದನ್ನು ಅವರು ಹೇಳಿದ್ದಾರೆ. ಆದರೆ 5ನೇ ಫೈನಾನ್ಸ್ ಕಮಿಷನ್ನಿನಲ್ಲಿ ನಮಗೆ ಪೆಟ್ಟು ಬಿದ್ದದ್ದರಿಂದ ಕೇಂದ್ರ ಸರ್ಕಾರದವರು ನಮಗೆ ಎಷ್ಟು ಹಣವನ್ನು ಕೊಡು ತ್ತೇವೆ ಎಂದು ಹೇಳಿದ್ದರೋ ಅಷ್ಟು ಹಣವನ್ನು ಕೊಟ್ಟಿದ್ದಾರೆಯೇ ? ಈ 14 ಕೋಟಿ ರೂಪಾಯಿಗಳು ಮತ್ತು 9 ಕೋಟಿ ರೂಪಾಯಿಗಳನ್ನು ಇಲ್ಲಿ ಸೇರಿಸಿ ದ್ದಾರೆಯೇ ಇಲ್ಲವೇ ಎಂಬುದನ್ನು ಕೇಳಿ.

ಶ್ರೀ ಕೆ. ಪುಟ್ಟಸ್ವಾಮಿ.—ಹರಿಶ್ಚಂದ್ರ ಕಾವ್ಯದಲ್ಲಿ ಒಂದು ಉಕ್ತಿ ಇದೆ. ಅದು ಏನೆಂದರೆ ಬಂದ ಕಾಲ ಗುಣವೋ ನಿಂತ ನೆಲದ ಗುಣವೋ ಎಂದು.

ಮಾನ್ಯ ಸದಸ್ಯರು ಹೇಳಿದ್ದು ಖಂಡಿತವಾಗಿ ಸರಿಯಾಗಿದೆ. ನಾನು ಮುಂಚೆ ಅದರ ಬಗ್ಗೆ ಮಾತನಾಡಿದಾಗ ಸಾಕಷ್ಟು ವಿವರವಾಗಿ ಹೇಳಿದ್ದೇನೆ. ಆ ಸ್ಥಳಕ್ಕೆ ಬಂದಾಗ ಎಲ್ಲರದೂ ಹಾಗೆಯೇ. ಆ ಸ್ಥಳದಿಂದ ಈ ಸ್ಥಳಕ್ಕೆ ಬಂದಾಗ ಹಾಗೆಯೇ.

ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಯಾರೋ ಇಬ್ಬರು ಅಣ್ಣತಮ್ಮಂದಿರು ಕುರುಕ್ಷೇತ್ರಕ್ಕೆ ಹೋದರಂತೆ. ಅಣ್ಣತಮ್ಮಂದಿರಲ್ಲಿ ಇಬ್ಬರೂ ಬಹಳ ವಿಶ್ವಾಸಿಯಾಗಿದ್ದರು. ಅದರೆ ಕುರುಕ್ಷೇತ್ರಕ್ಕೆ ಇಳಿದು ಆ ನೆಲಕ್ಕೆ ಕಾಲಿಟ್ಟಾಗ ಇಬ್ಬರೂ ಜಗಳವಾಡಿದರಂತೆ. ಆ ರೀತಿಯಲ್ಲಿ ನಮ್ಮ ನಿಮ್ಮ ಪರಿಸ್ಥಿತಿ ಆಗುವುದು ಸ್ವಾಭಾವಿಕ, ನಾನು ಈ ಸಂದರ್ಭದಲ್ಲಿ ಏನು ಹೇಳುತ್ತೇನೆಂದರೆ, 5ನೇ ಹಣಕಾಸಿನ ಆಯೋಗದಿಂದ ನಮಗೆ ತೊಂದರೆಯಾದುದು ಉಂಟು. ನಮ್ಮ ದೃಷ್ಟಿಯಿಂದ ಅನ್ಯಾಯವಾದುದೂ ಉಂಟು. ಕಂಡೂಕಂಡೂ ಇಂಡಿಯಾ ಸರಕಾರ ನಮಗೆ ಅನ್ಯಾಯ ಮಾಡಿದ್ದಾರೆಯೇ ಎಂಬುದು ಈಗಿರತಕ್ಕ ಪ್ರಶ್ನೆ. ಯಾವ್ಯಾವ ರಾಜ್ಯಗಳಿಗೆ ಎಷ್ಟೆಷ್ಟು ಹಣ ಸಂದಾಯ ಮಾಡಬೇಕೆಂಬ ಬಗ್ಗೆ ಏನಾದರೂ ಒಂದು ನೀತಿಯನ್ನು ಕೇಂದ್ರ ಸರಕಾರದವರು ಅನುಸರಿಸಿದ್ದಾರೆಯೇ ಇಲ್ಲವೇ ಎಂಬುದು ಈಗಿರತಕ್ಕ ಪ್ರಶ್ನೆ. ಕೆಲವರಿಗೆ ಹೆಚ್ಚು ಬಂದಿದೆ, ಕೆಲವರಿಗೆ ಕಡಿಮೆ ಬಂದಿದೆಯೆಂಬುದು. ಇದೇ ಹಣಕಾಸಿನಿಂದ ನಮಗೆ 250 ಕೋಟಿ ರೂಪಾಯಿಗಳ ಬದಲು 550ಕೋಟಿ ರೂಪಾಯಿಗಳವರೆಗೆ ಬಂದಿತು.

3-30 P. M.

ಶ್ರೀ ಹೆಚ್. ಡಿ. ದೇವೇಗೌಡ:—ಆ ರೀತಿಯಾಗಿ ಅನ್ಯಾಯವಾಗಿದೆಯೆಂಬ ವಿಷಯ ಕೇಂದ್ರಕ್ಕೆ ಗೊತ್ತಾದ ಮೇಲೆ, ಸ್ಪೆಷಲ್ ಅಸಿಸ್ಟೆನ್ಸ್ ಕೊಡುತ್ತೇವೆಂದು ಹೇಳಿ 72-73ರಲ್ಲಿ ಕಾಳೀ ನದಿ ಯೋಜನೆಗೆ ಎಷ್ಟು ರೊಕ್ಕ ಬಂತು ? ಅದನ್ನು ಸರಿಯಾಗಿ ಹೇಳದೆ ಕೇಂದ್ರ ಸರಕಾರದವರು ಏನೋ ಕೊಟ್ಟಿದ್ದಾರೆಂದು ಸುಮ್ಮನೆ ಹೇಳುವುದು ಸರಿಯಲ್ಲ.

ಶ್ರೀ ಕೆ. ಪುಟ್ಟಸ್ವಾಮಿ :—ನೀವು ಹೇಳುವಂಥ ವಾಸ್ತವಿಕ ವಿಚಾರವನ್ನು ನೋಡುವ ದೃಷ್ಟಿ ಬೇರೆ ಇದೆ. 4ನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ನಮಗೆ ಕೇಂದ್ರ ಸರಕಾರ ಕೊಡಬೇಕಾದಂಥ ಹಣಕ್ಕಿಂಥ ಹೆಚ್ಚಿಗೆ ಕೊಟ್ಟಿದೆ. ಅದು ಸ್ಪೆಷಲ್ ಅಸಿಸ್ಟೆನ್ಸ್. ಹೆಚ್ಚಿಗೆ ಕಾಳೀ ಯೋಜನೆಗಾಗಿ ಕೊಟ್ಟಿದ್ದಾರೆ. ಆ ರೀತಿಯಾಗಿ ಕೊಡುವ ದರ್ದು ಇರಲಿಲ್ಲ. ಅದಕ್ಕೆ ತಕ್ಕ ಒತ್ತಾಯವೂ ಸಹ ಇರಲಿಲ್ಲ. ನಮಗೇನೋ ತೊಂದರೆಯಾಗಿದೆ. ಆದರೆ ನಾನು ಅನ್ಯಾಯ ಎಂಬ ಪದವನ್ನು ಉಪಯೋಗಿಸುವುದಿಲ್ಲ, ಏಕೆಂದರೆ, ನಮಗೆ ಹಣ ಬರಲಿಲ್ಲವೆಂಬುದಾಗಿ ಹೇಳಿದ ಕಾರಣದಿಂದ ನಮಗೆ ಹಣ ಕೊಟ್ಟರು. ಮಾನ್ಯ ಶ್ರೀ ದೇವೇಗೌಡರು ಮಾತನಾಡುತ್ತಾ ಆ ರೀತಿ ಹಣ ಕೊಡುವುದಕ್ಕೆ ಇವರು ಅನ್ಯಾಯವಾಗಿದೆಯೆಂದು ಹೇಳಿದ್ದರಿಂದ, ಹಾಗೂ ಇವರು ಮೆಹರ್‌ಬಾನಿ ಮಾಡಿದ್ದರಿಂದ, ಕೊಟ್ಟಿದ್ದಾರೆಂದು ಹೇಳಿದರು. ಅವರೇನೂ ನಾವು ಮೆಹರ್‌ಬಾನಿ ಮಾಡಿದ್ದಕ್ಕೆ ಕೊಡಲಿಲ್ಲ. ಇಂಡಿಯಾ ಸರಕಾರದವರು ರಾಜ್ಯ ಸರ್ಕಾರಕ್ಕೆ ಕೊಡುವುದರಲ್ಲಿ ಹಣ ಒದಗಿಸುವುದರಲ್ಲಿ ಯಾವ ಮೆಹರ್‌ಬಾನಿಯೂ ಇಲ್ಲ. ದಾಕ್ಷಿಣ್ಯವಿಲ್ಲ.

(ಶ್ರೀ ಕೆ. ಪುಟ್ಟಸ್ವಾಮಿ)

ಅವರು ಯಾವ ಸ್ಪೆಷಲ್ ಅಸಿಸ್ಟೆನ್ಸ್ ಕೊಡಲಿ, ಸ್ಪೆಷಲ್ ಅಕಾಮಡೇಷನ್ ಕೊಡಲಿ, ಅವರು ಯಾವುದೇ ಹೆಸರಿನಲ್ಲಿ ಏನೇ ಕೊಟ್ಟರೂ ಆ ರೀತಿ ಅವರು ಕೊಡುವುದು ಅವರ ಕರ್ತವ್ಯ. ಅದನ್ನು ತೆಗೆದುಕೊಳ್ಳಲು ಪೂರ್ಣ ಹಕ್ಕು ಇದೆ. ಅದಕ್ಕಾಗಿ ನಾನು ಅವರನ್ನು ಪ್ರಶಂಸೆ ಮಾಡುವುದಾಗಲೀ, ತೆಗಳುವುದೇ ಆಗಲೀ ಮಾಡುತ್ತಾ ಇಲ್ಲ. ಇದರಲ್ಲಿ ಅವರನ್ನು ತೆಗಳುವ ಮಾತು ಏನೂ ಇಲ್ಲ.

ಶ್ರೀ ಹೆಚ್ ಡಿ. ದೇವೇಗೌಡ:- ನೀವು ಸಮಾಧಾನ ಪಟ್ಟರೆ ರಾಜ್ಯಕ್ಕೇ ಸಮಾಧಾನ. ನಿಮಗೆ ಸಮಾಧಾನ ಅಲ್ಲಿರುವವರೆಗೂ ಆಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ:-ಅದೊಂದು ನಮೂನೆಯ ಆಹ್ವಾನ. ನನಗೆ ಪಕ್ಷಾತೀತವಾಗಿ ಮಾತನಾಡಲು ಮನಸ್ಸು ಇಲ್ಲ. ನಿಮ್ಮ ನಡೆನುಡಿ, ನೀವು ಹೇಳ ತಕ್ಕ ನೀತಿಯನ್ನು ಜನರು ಒಪ್ಪಿ ನಿಮ್ಮನ್ನು ಆ ಕಡೆಯಿಂದ ಈ ಕಡೆಗೆ ಕಳುಹಿಸಿದರೆ ನಾನು ವ್ಯಥೆಪಡುವುದಿಲ್ಲ. ನಾನು ಬಹಳವಾಗಿ ಸಂತೋಷಪಡುತ್ತೇನೆ. Before you desire I want you to deserve. ಅದ್ದರಿಂದ ಇವತ್ತು ಏನು ಮಾತನಾಡಿದರೂ ....

SRI H. D. DEVE GOWDA.---So, what you deserved Government of India gave it.

SRI K. PUTTASWAMY.—No. That is not the question. It is our right to receive and they gave it. We may deserve something more according to principle of devolution of finances. ನಮ್ಮ ಹಕ್ಕು ಪ್ರಕಾರ ಅದು ಬಂದಿದೆ.

SRI H. D. DEVEGOVDA.-I would like to know whether the same principle with regard to devolution of finances was applied when they have given special assistance to U. P. and Maharashtra?

ಶ್ರೀ ಕೆ ಪುಟ್ಟಸ್ವಾಮಿ —ಕೇಂದ್ರದಿಂದ ಸ್ಪೆಷಲ್ ಅಸಿಸ್ಟೆನ್ಸ್ ಕೊಡ ಬೇಕಾದರೆ ಅವರು ಕೆಲವು ನಿಯಮಗಳಿಗೊಳಪಟ್ಟು ಕೊಡುತ್ತಾರೆ. ಅದರಲ್ಲಿ ಏನೂ ತಾರತಮ್ಯವಿರುವುದಿಲ್ಲ. ಅವರು ಸ್ಪೆಷಲ್ ಅಸಿಸ್ಟೆನ್ಸ್ ಕೊಡುವಾಗ ಅದರಲ್ಲಿ ಏನಾದರೂ ವ್ಯತ್ಯಾಸವಾಗಿದೆಯೋ ಇಲ್ಲವೇ ಎಂಬುದನ್ನು ನಾವು ಪರಿ ಶೀಲನೆ ಮಾಡಬೇಕು. ಆದರೆ ಮಾನ್ಯ ಶ್ರೀ ದೇವೇಗೌಡರು ಮಾತನಾಡುವಾಗ

ಇಂಡಿಯಾ ಸರಕಾರದವರು ವಿಶೇಷ ಹಣ ಕೊಡುವ ವಿಷಯದಲ್ಲಿ ಯಾವುದಾದರೂ ರಾಜ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟಿದ್ದರೆ, ಹಾಗೇನಾದರೂ ಇತರ ರಾಜ್ಯಗಳಿಗೆ ನ್ಯಾಯವಾಗಿ ಕೊಡಬೇಕಾದ್ದನ್ನು ಕೊಟ್ಟಿಲ್ಲವೆಂದು ಹೇಳಿದರೆ, ಅವರು ಆ ರೀತಿ ಕೊಟ್ಟಿರುವುದು ಅನ್ಯಾಯವೆಂದು ಹೇಳಿದರೆ, ನಾನೂ ಸಹ ಅವರ ಹೇಳಿಕೆಯಲ್ಲಿ ಸೇರುವುದಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಹೆಚ್ ಡಿ. ದೇವೇಗೌಡ. – ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಬಹಳ ಒಳ್ಳೆಯ ಪಾರ್ಲಿಮೆಂಟೇರಿಯನ್ ಅವರೂ ಸಹ ಮಂತ್ರಿಯಾಗಿ ಸುಮಾರು 10 ವರ್ಷಗಳ ಕಾಲ ಇದ್ದರು. ಅಂತಹವರು ಮಾನ್ಯ ಅರ್ಥಿಕ ಸಚಿವರಿಗೆ ಬೇಕಾದರೆ ಹೇಳಲಿ. ನನಗೆ ಅದರ ಬಗ್ಗೆ ಅಂಕಿಅಂಶಗಳನ್ನು ಮಾನ್ಯ ಸದಸ್ಯರು ತರಿಸಿಕೊಡಲಿ. ಯಾವ್ಯಾವ ರಾಜ್ಯಕ್ಕೆ ವಿಶೇಷ ಸವಲತ್ತುಗಳನ್ನು ಎಷ್ಟೆಷ್ಟು ಕೊಟ್ಟಿದ್ದಾರೆ. ನನಗೆ ಅಂಕಿ ಅಂಶಗಳನ್ನು ಕೊಡಲಿ. ನನಗೆ ಅವು ಸಿಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ :—ನೀವು ಪೇಪರ್‌ನಲ್ಲಿ ಬಂದುದನ್ನು ಹೇಳುತ್ತಿದ್ದೀರಿ. ಆದರೆ ನಾರ್ಮಲ್ಲಾಗಿ ಸೆಂಟ್ರಲ್ ಅಸಿಸ್ಟೆನ್ಸ್ ಎಲ್ಲಾ ರಾಜ್ಯಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ಏನು ಕೊಟ್ಟರೋ ಅಷ್ಟೇ ಈಗ ಕೊಡುತ್ತಿದ್ದಾರೆ. ಇದನ್ನು ಕೇಂದ್ರ ಸರ್ಕಾರದವರು ಬಹಿರಂಗವಾಗಿಯೇ ಹೇಳಿದ್ದಾರೆ. ಈಗಲೂ ಹೇಳುತ್ತಾ ಬಂದಿದ್ದಾರೆ. ಇದು ಕೇವಲ ಕರ್ನಾಟಕಕ್ಕೇ ಮಾತ್ರ ಅನ್ವಯಿಸುವ ಕ್ರಮವಲ್ಲ. ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಏನಾದರೂ ಒಂದು ರಾಜ್ಯಕ್ಕೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆಂದು ಅವರು ಹೇಳುವುದಾದರೆ ಅದನ್ನು ಕೇಂದ್ರ ಸರ್ಕಾರದಿಂದ ತಿಳಿದುಕೊಳ್ಳಬೇಕಾಗುತ್ತದೆ. ಪತ್ರಿಕೆಯಲ್ಲಿ ಯು. ಪಿ ಮತ್ತು ಬಿಹಾರದಲ್ಲಿ ಹೆಚ್ಚು ಹಣವನ್ನು ಕೊಟ್ಟಿದ್ದಾರೆಂಬ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಅದರ ಬಗ್ಗೆ ಕೇಂದ್ರಕ್ಕೆ ಬರೆದಿದ್ದಾರೆಂಬುದಾಗಿ ತಿಳಿದು ಬಂದಿದೆ. ಪತ್ರಿಕೆಯಲ್ಲಿ ಬಂದಿರುವ ಪ್ರಕಾರ ಅವರಿಗೆ ಏನು ಕೊಟ್ಟಿದ್ದಾರೋ ಅದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅವರಿಂದ ಉತ್ತರ ಬಂದನಂತರ ನಿಮಗೆ ಕ್ಷಿಪ್ರವಾಗಿ ತಿಳಿಸುತ್ತೇವೆಂದು ಸರ್ಕಾರದವರು ಹೇಳಿದ್ದಾರೆ.

SRI H. D. DEVEGOWDA :—As Leader of Opposition I must come to certain conclusions only on the basis of Press reports. If the information that has appeared in the Press is correct then my charge against the Government of India is also correct.

SRI M. Y. GHORPADE :—We have sought clarification in the matter. But before it is clarified it is not proper to assume things.

ಶ್ರೀ ಹೆಚ್. ಡಿ. ದೇವೇಗೌಡ :—ಈ ಸಭೆಯ ಸೀನಿಯರ್ ಮೆಂಬರ್ ಆಗಿರುವ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ತಮ್ಮ ಕಡೆಯವರನ್ನು ಬ್ರೀಫ್ ಮಾಡಿದರೆ ಸಾಕು. ಆಗ ಇಷ್ಟು ಮಾತನಾಡತಕ್ಕ ಆವಶ್ಯಕತೆ ಏನಿದೆ? ಏಕೆಂದರೆ ಫಂಡಮೆಂಟಲ್ ಸರ್ಕಾರವೇ ಅವರ ಕೈಲಿದೆ. ಎಷ್ಟೋ ವಿಷಯ ಗಳನ್ನು ನನಗೆ ಅವರು ಹೇಳುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ :—ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ವಿನಂತಿ. ನಾನು ಹೇಳತಕ್ಕ ಅಂಕಿಅಂಶಗಳನ್ನು ನಾನು ಯಾವ ಕಚೇರಿಯಿಂದಲೂ ತಂದಿಲ್ಲ. ಯಾರನ್ನೇ ಆಗಲೀ ಕೇಳಿಯೂ ತಂದಿಲ್ಲ. ನನ್ನ ಜ್ಞಾಪಕ ಶಕ್ತಿಯ ಮೇಲೂ ಹೇಳಿಲ್ಲ. ಇದುವರೆಗೂ ಯಾವ್ಯಾವ ವಿಚಾರಗಳನ್ನು ಇಲ್ಲಿ ಹೇಳಿ ದ್ದೇನೋ ಅವೆಲ್ಲವೂ ಇಲ್ಲಿಯೇ ಇರುತ್ತದೆ. 5ನೇ ಫೈನಾನ್ಸ್ ಕಮಿಷನ್ ಅವರು 250 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಈಗ 510 ಕೋಟಿ ರೂಪಾಯಿಗಳು ಅವರಿಂದ ಬರುತ್ತದೆಂಬ ವಿಚಾರ ಬಿಟ್ಟರೆ ಬಾಕೀದು ಎಲ್ಲಾ ಇಲ್ಲಿಯೇ ಇದೆ. ಈ ಪುಸ್ತಕದಲ್ಲಿಯೇ ಇದೆ. ನಾವು ಅನೇಕರು ಓದುವು ದಿಲ್ಲ. ನೀವು ಎಲ್ಲವನ್ನೂ ಓದಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ :—ಆದರೆ ನಾವು ಅದನ್ನೆಲ್ಲಾ ಜೀರ್ಣಿಸಿ ಕೊಳ್ಳುವುದಕ್ಕೆ ಶಕ್ತಿ ಇಲ್ಲ. ನೀವು ಮಾತನಾಡುವಾಗ ಮೂಗಿನ ನೇರಕ್ಕೆ ಸರಿ ಯಾಗಿ ಹೇಳುತ್ತೀರಿ.

ಶ್ರೀ ಕೆ. ಪುಟ್ಟಸ್ವಾಮಿ :—ನೀವು ಹೋಗುವ ದಾರಿಯೇ ಬೇರೆ. ನಾವು ಹೋಗುವ ದಾರಿಯೇ ಬೇರೆ.

ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೊಂದು ವಿಚಾರ ಹೇಳಿದರು. ಅದೇನೆಂದರೆ ಹಣಕಾಸಿನ ಮಂತ್ರಿಗಳ ಬಗ್ಗೆ ಕೆಲವು ಆಪಾದನೆಗಳನ್ನು ಮಾಡಿ ದ್ದಾರೆ. ಆದರೆ ಆ ಆಪಾದನೆಗಳು ಅವರು ಕೊನೆಯಲ್ಲಿ ಮಾಡಿದ್ದಾರಲ್ಲಾ ಆ ನಮೂನೆಯ ಆಪಾದನೆಗಳಲ್ಲ. ನಮಗೆ ಕೇಂದ್ರ ಸರ್ಕಾರದಿಂದ ಏನು ಸಲ್ಲ ಬೇಕೋ ಅಷ್ಟನ್ನು ಪೂರ್ಣವಾಗಿ ಪಡೆಯುವುದಕ್ಕೆ ನಮ್ಮ ಹಣಕಾಸಿನ ಮಂತ್ರಿ ಗಳು ಪ್ರಯತ್ನ ಮಾಡಿಲ್ಲ ಎಂದು ಇವರ ಮೇಲೆ ಒಂದು ಛಾರ್ಜನ್ನು ತಂದಿದ್ದಾರೆ. ಹಾಗೊಂದುವೇಳೆ ಇಲ್ಲಿ ನಮ್ಮ ಹಣಕಾಸಿನ ಮಂತ್ರಿಗಳು ಕೇಂದ್ರದ ಮೇಲೆ

ಜೋರು ಮಾಡಿದರೆ ಇವರಿಗೂ ಆ ವಿ. ಪಿ. ನಾಯ್ಕರ ಗತಿ ಅವರಿಗಾದ ಹಾಗೆ ಇವರಿಗೂ ಆಗುತ್ತದೆ ಎಂದು ಹೇಳಿದರು. ಆದರೆ ನಾನು ಇಲ್ಲಿ ಈ ಬಡ್ಜೆಟ್‌ನ ಬಗ್ಗೆ ಎಷ್ಟೇ ವ್ಯಾಖ್ಯಾನ ಮಾಡಿ ಮಾತನಾಡಿದರೂ ಈ ವರದಿಯಲ್ಲಿ ಮಾನ್ಯ ಹಣಕಾಸಿನ ಸಚಿವರು ಏನೊಂದು ಪರಿಣಾಮಕಾರಿ ರೀತಿಯಲ್ಲಿ ಹೇಳಿದ್ದಾರೆ ಅದಕ್ಕಿಂತ ಮಿಗಿಲಾಗಿ ನನಗೆ ಹೇಳುವುದಕ್ಕಾಗುವುದಿಲ್ಲ. ಅವರು ಈ ಒಂದು ಫೆಡರಲ್ ಸ್ಟ್ರಕ್ಚರಿನಲ್ಲಿ ಯಾವ ರಾಜ್ಯ ಕೇಂದ್ರಕ್ಕೆ ಎಷ್ಟರಮಟ್ಟಿಗೆ ಅಧೀನವಾಗಿರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಮಾತುಗಳನ್ನು ಅವರು ಹೇಳಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಈ ವರದಿಯ ಪುಟ 4 ಮತ್ತು 5 ರಲ್ಲಿ ತಮ್ಮ ಅಭಿಪ್ರಾಯವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದು ಈ ರೀತಿ ಇದೆ :—

"The National Development Council has not yet met to determine the quantum of Central assistance and the formula for its distribution to all States.

ಹಿಂದೆ ಆ ಗ್ಯಾಡ್ಗಿಲ್ ವರದಿ ಪ್ರಕಾರ ಮಾಡಿದ್ದರು. ಈಗ 2 ವರ್ಷಗಳು ಕಳೆದರೂ ಅದರಂತೆ ಇನ್ನೂ ಮಾಡುವುದಕ್ಕಾಗಿಲ್ಲ. ನಮಗಿಲ್ಲಿ ಸಂಸಾರದ ತೊಂದರೆಗಳಿಷ್ಟಿವೆಯೋ ಹಾಗೇ ಆ ಕೇಂದ್ರಕ್ಕೂ ತೊಂದರೆಗಳಿವೆ. ಅದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಮತ್ತು ನಾಯಕರು ಗಮನಕ್ಕೆ ತೆಗೆದುಕೊಳ್ಳಬೇಕು.

SRI H. D. DEVEGOWDA :—The draft Fith Plan has gone to cold storage!

SRI K. PUTTASWAMY :—There are many more things which are not in our hands or in the hands of Central Government. There are certain other things which take their own course.

ನಮಗೆ ಇಲ್ಲಿ ಕೇಂದ್ರದವರಿಗೆ ಆ ರಿಸೋರ್ಸಸ್‌ಗಳು ಎಲಾಸ್ಟಿಕ್ಕಾಗಿರುವಷ್ಟು ನಮಗೆ ಎಲ್ಯಾಸ್ಟಿಕ್ ಆಗಿಲ್ಲ. ಸಾಲದ್ದಕ್ಕೆ ನಮಗಿಲ್ಲಿ ಹಣದ ಒತ್ತಡ ಬಹಳ ಜಾಸ್ತಿಯಾಗಿರುತ್ತದೆ ಎಂದಿದ್ದಾರೆ

In the Finance Minister's speech it is stated as follows:—

"This should be done as soon as possible in order to end uucertainties and ensure that both the Centre and States share the burden of development

(Sri K. Puttaswamy)

> equitably. No dout the Centre has its own problems, but the fact remains that the revenues of the Centre are far more elastic than those of the States".

I would like the hon. the Leader of the Opposition to note this. That is the song of this House, this Government. Every now and then you have elastic resources ಎಂದು ಹೇಳುತ್ತಿದ್ದರೂ ಆ ಕೇಂದ್ರಕ್ಕೆ ಕೆಲವು ತೊಂದರೆಗಳಿಲ್ಲದೆ ಇಲ್ಲ. ನೆನ್ನೆ ಪತ್ರಿಕೆಯಲ್ಲಿ ಆ ಅಮೇರಿಕಾದವರು ಶಸ್ತ್ರಾಸ್ತ್ರಗಳ ಮೇಲೆ ಹಾಕಿದ್ದ ನಿರ್ಭಂಧವನ್ನು ಎತ್ತಿದ್ದಾರೆ....

SRI H. D. DEVEGOWDA :— With that we have raised our resources to Rs. 119 crores.

SRI K. PUTTASWAMY :— They have also raised their resources. But they have other commitments also. ಕೇಂದ್ರದವರು ನಮ್ಮ ಸರ್ಕಾರವನ್ನು ಅತ್ತೆ ಸೊಸೆಯನ್ನು ನೋಡತಕ್ಕ ರೀತಿಯಲ್ಲಿ ನೋಡುತ್ತಿದೆ ಎಂದು ಹೇಳುವುದು ಸರಿಯಲ್ಲ. ಆ ಪಾಕಿಸ್ಥಾನದವರು ಅಮೇರಿಕಾದವರಿಂದ ಆಧುನಿಕ ಶಸ್ತ್ರಾಸ್ತ್ರಗಳನ್ನು ಇಷ್ಟ ಬಂದ ಹಾಗೆ ಕೊಳ್ಳುವುದಕ್ಕೆ ಹೊರಟರೆ ನಮ್ಮ ರಾಷ್ಟ್ರ ಸುಮ್ಮನೆ ಇಲ್ಲಿ ಕೈಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಅಂಥ ಪ್ರಸಂಗ ಬಂದರೆ ಆ ಪಾರ್ಲಿಯಮೆಂಟ್ ಆ ಕೇಂದ್ರಕ್ಕೆ ಕೊಡತಕ್ಕ ಪ್ರೋತ್ಸಾಹಕ್ಕಿಂತ ಹೆಚ್ಚಿನ ಪ್ರೋತ್ಸಾಹವನ್ನು ಇಲ್ಲಿ ನಮ್ಮ ಈ ಸಭೆ ಕೊಡುತ್ತದೆ ಎಂಬ ವಿಶ್ವಾಸ ನನಗಿದೆ.

SRI H. D. DEVEGOWDA :— We know what the implications are.

SRI K. PUTTASWAMY :— I concede that the leader of the Opposition is more alive to these things than some of us. ಇಲ್ಲಿ ನಮಗೆ ಹೊಟ್ಟೆ ಹಸಿವು ಬಹಳ ಜಾಸ್ತಿಯಾಗಿದೆ ಎಂಬುದನ್ನು ನಮ್ಮ ಆರ್ಥಿಕ ಸಚಿವರು ಬಹಳ ಮಾರ್ಮಿಕವಾಗಿ ಇಲ್ಲಿ ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :— ನಾನು ಹಳ್ಳೀಗೌಡ ಒರಟಾಗಿ ಹೇಳಿದ್ದೇನೆ. ಅರ್ಥ ಸಚಿವರು ನವಿರಾಗಿ ಹೇಳಿದ್ದಾರೆ.

SRI K. PUTTASWAMY.—It is further stated as follows:

"and it is only right and proper that the States should get their due share in the increasing resources of the Centre".

ಅಷ್ಟೇ ಅಲ್ಲದೆ ನಮಗೆ ಬ್ಯಾಂಕಿನಿಂದಲಾದರೂ ಸಾಲ ಪಡೆಯುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ.

"Apart from this, I would urge the Central Government to give us a measure of freedom to raise more funds from Commercial Banks for viable projects like Kali which, judged by any standards are eminently bankable".

I requst the hon. the Leader of the Opposition to mark the following :—

"I am aware that while assessing the total resources for the national plan, the Planning Commission takes into account the availability of funds from the banking institutious also".

ನಮಗೆ ಬ್ಯಾಂಕಿನಿಂದ ಸಾಲ ಪಡೆಯುವುದಕ್ಕೆ ತಾವು ಏಕೆ ಅಡ್ಡಿ ಪಡಿಸುತ್ತಿದ್ದೀರಿ ಎಂದು ಕೇಳಿದ್ದಾರೆ. ಚಿಕ್ಕಪ್ಪನೂ ತಾನೂ ಕೂಡ, ಭಿಕ್ಷೆ ಮಾಡುವುದಕ್ಕೂ ಬಿಡ ಎಂದು ಹೇಳಿದ ಹಾಗಾಯಿತು. ಇದಕ್ಕಿಂತ ಇನ್ನೇನು ಹೇಳಬೇಕು? Finance Minister is aware of these facts also. He is not blind to this fact. He has already taken note of it. ಐದನೇ ಪಂಚ ವಾರ್ಷಿಕ ಯೋಜನೆಗೆ ಐದು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಹೇಳಿದ್ದಾಗ ಮಾನ್ಯ ಸಚಿವರು ಯಾವ ಯಾವ ಬ್ಯಾಂಕಿನಿಂದ ಎಷ್ಟೆಷ್ಟು ಹಣ ಬರುತ್ತೆ, ಇನ್ನೂ ಯಾವ ಯಾವ ಬಾಬಿನಿಂದ ಎಷ್ಟೆಷ್ಟು ಹಣ ಬರುತ್ತೆಂಬುದನ್ನೆಲ್ಲಾ ಗಮನದಲ್ಲಿಟ್ಟೇ ಅದನ್ನು ಹೇಳಿದ್ದಾರೆ.

"While this may be so from the macro angle, credit planning as it now obtains in the country does not adequately take note of the requirements of high priority projects" ಎಂದು ಸಾಕಷ್ಟು ತಿವಿದು ಹೇಳಿದ್ದಾರೆ. ಆ ಕೇಂದ್ರಕ್ಕೂ ಇವರು ಹೈಪ್ರಯಾರಿಟಿ ಪ್ರಾಜೆಕ್ಟ್‌ಗಳಿಗೆ ಹಣ ಬೇಕೆಂದು ಹೇಳಿದ್ದಾರೆ. This is a very powerful argument.

ಶ್ರೀ ಹೆಚ್. ಡಿ. ದೇವೇಗೌಡ :— ಹಾಗೆ ಜೋರಾಗಿ ಹೇಳಿದರೆ ಆ ವಿ. ಪಿ. ನಾಯಕರಿಗಾದ ಗತಿಯೇ ಇವರಿಗೂ ಆಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ :—ಈ ರೀತಿ ಹೇಳುವುದನ್ನು ಬಿಟ್ಟರೆ ವಿರೋಧ ಪಕ್ಷದವರಿಂದ ಇನ್ನೇನು ಹೆಚ್ಚಿಗೆ ಹೇಳುವುದಕ್ಕಾಗುತ್ತದೆ?. That is his right to say. If he do not say that much, what other arguments has he against this budget?.

Kali and Krishna Projects are definitely high priority projects according to me. There are several other high priority projects like Mangalore Harbour, Chemicals and Fertilisers. Iron Ore Project is also a High priority project. ಇವೆಲ್ಲಾ ಹೈ ಪ್ರಿಯೂರಿಟಿ ಪ್ರಾಜೆಕ್ಟುಗಳು ಇವು ರಾಷ್ಟ್ರೀಯ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾದುವು. ಆದುದರಿಂದ ಅವರಿಗೆ ಇಷ್ಟವಿಲ್ಲ ದಿದ್ದರೂ ಸಹಾಯ ಮಾಡಬೇಕಾಗುತ್ತದೆ. Reluctantly they will have to help us.

> "I do hope that the Government of India and the Planning Commission will give serious consideration to this matter. Similarly while utilising the World Bank assistance and international finances connected with oil, projects of national signifiance such as Kali, and Krishna project should be kept in view and given the attention they deserve."
> ಎಂದು ಹೇಳಿದ್ದಾರೆ.

ಇದಕ್ಕಿಂತ ಉತ್ತಮವಾಗಿ ನಾನು ಹೇಳುವುದಕಾಗುವುದಿಲ್ಲ. ಆದರೆ ವರ್ಲ್ಡ್ ಬ್ಯಾಂಕ್ ಸಾಲದ ವಿಚಾರ ಆಳ್ವರವರು ಹೇಳಿದರು, ಮಾರ್ಕೆಟ್ ಏರಿಯಾ ಡೆವಲಪ್ ಮೆಂಟಿಗೆ ವರ್ಲ್ಡ್ ಬ್ಯಾಂಕ್ ಸಾಲ ಕೊಡುವ ವಿಚಾರ ಹೇಳಿದರು. ಪ್ರಿಯಾರಿಟಿ ವಿಚಾರ ನಾವು ಮಾತನಾಡುತ್ತೇವೆ, ಹಣಕಾಸಿನ ಸಚಿವರೂ ಹೇಳುವರು. ಆದರೆ ವರ್ಲ್ಡ್ ಬ್ಯಾಂಕಿನ ಸಾಲವನ್ನು ಮಾರ್ಕೆಟ್ ಡೆವಲಪ್‌ಮೆಂಟಿಗೆ ಹಾಕಬೇಕೋ ಅಥವಾ ಕಾಳಿನದಿ ಯೋಜನೆಗೆ ಹಾಕಬೇಕೋ, ನನಗೆ ಅರ್ಥವಾಗುವುದಿಲ್ಲ. ಇಂಥ ಅವಕಾಶವಿದ್ದರೆ ಕಾಳಿನದಿ ಯೋಜನೆಗೆ, ಅಪ್ಪರ್ ಕೃಷ್ಣ ಯೋಜನೆಗೆ ಸಹಾಯ ಮಾಡಿ ಎಂದು ಹೇಳಬೇಕಾಗುತ್ತದೆ. ನನ್ನ ಹತ್ತಿರ ಸ್ವಲ್ಪ ಹಣವಿದ್ದರೆ ಮಳೆ ಬಂದು ನೀರು ಬಂದಿದ್ದರೆ ಅದನ್ನುಪಯೋಗಮಾಡಿ ವ್ಯವಸಾಯ ಮಾಡಬೇಕೇ ಅಥವಾ ಮನೆ ಕಟ್ಟಬೇಕೇ ? ಆದುದರಿಂದ ಹೈ ಪ್ರಿಯಾರಿಟಿಯನ್ನು ನಿರ್ಧರಿಸು

ವಾಗ ಸರಕಾರದವರು ಹೆಚ್ಚು ಗಮನ ಕೊಡಬೇಕು. ಪ್ರಯೊರಿಟಿ ಹೇಗೆ ನಿರ್ಧಾರವಾಗುತ್ತದೆಂದರೆ ಸಚಿವ ಸಂಪುಟದಲ್ಲಿ ಯಾರದೋ ಪ್ರಭಾವ ಹೆಚ್ಚೋ ಅವರದೇ ಹೈ ಪ್ರಿಯಾರಿಟಿ. ಇದಾಗಬಾರದು.

ಇನ್ನೊಂದು ವಿಚಾರ. ಹಣಕಾಸಿನ ವಿಚಾರ ಬಿಟ್ಟು ಮುಂದಕ್ಕೆ ಹೋಗುತ್ತೇನೆ. ಹಣಕಾಸಿನ ಸಚಿವರನ್ನು ಮತ್ತು ನಮ್ಮ ಸರಕಾರದರವನ್ನು ಪ್ರಶಂಸೆ ಮಾಡಬೇಕಾದ ವಿಚಾರ. ಈಗ ನಮ್ಮ ಸರಕಾರದವರೇನು ಮಾಡಿದ್ದಾರೆ ? ಏಕೆ ಅದನ್ನು ಮೆಚ್ಚಬೇಕು ? ಎನ್ನಬಹುದು. ನಮ್ಮ ಮಾನ್ಯ ಸ್ನೇಹಿತರಾದ ರಾಜಶೇಖರ ಮೂರ್ತಿಯವರ ವಿಚಾರದಲ್ಲಿ ಪ್ರಯತ್ನಮಾಡಿ ಮಾತನಾಡಿಸಬೇಕು, ಅವರೂ ಸಹ ಇದು ಸರಿಯೆಂದು ಒಪ್ಪುವರು. ಅವರ ಮನೋಭಾವ ನನಗೆ ಗೊತ್ತಿದೆ. ಮೂರು ವರ್ಷದಿಂದ ನಾವು ಬಹಳ ಕಷ್ಟದಲ್ಲಿದ್ದೆವು, ಬರಗಾಲವಿತ್ತು, ಕ್ಷಾಮ ಬಂದರೂ ಹೋಗಿ ನೋಡುವುದಕ್ಕಾಗಲಿಲ್ಲ. ಆದರೆ ವಿಚಾರ ಕೇಳಿ ತಿಳಿದುಕೊಂಡೆ. ಗುಲ್ಬರ್ಗ, ಬಿಜಾಪುರ ಮುಂತಾದ ಕಡೆ ಕುಡಿಯಲು ನೀರಿಲ್ಲದೆ ಲಾರಿಗಳ ಮೂಲಕ 70—80 ಮೈಲಿಗಳಿಂದ ಒದಗಿಸಬೇಕಾಯಿತು ಅಂದರೆ ಎಂಥ ಭೀಕರವಾದ ಕ್ಷಾಮ ಬಂದಿತ್ತೆಂಬುದು ಅರ್ಥವಾಗುವುದು. ಆ ಕ್ಷಾಮ ಬಂದಾಗ ನಮ್ಮ ಪ್ರಯತ್ನ ಅದರ ನಿವಾರಣೆಗೆ ಎಷ್ಟು ಮಟ್ಟಿಗೆ ಆಗಿದೆ ? ನಮ್ಮ ರಿಸೋರ್ಸಸ್ ಮೊಬಿಲೈಜೇಷನ್ ವಿಚಾರ ನೋಡಬಹುದು. ದೇವೇಗೌಡರು ಹೇಳಿದ್ದು ಅಪ್ಯಾಯಮಾನವಾಗಿದೆ. 51 ಕೋಟಿ ರೂಪಾಯಿ 73—74ರಲ್ಲಿ 74—75ರಲ್ಲಿ 99 ಕೋಟಿ, 75—76ರಲ್ಲಿ 119—120 ಕೋಟಿ ರೂಪಾಯಿ ರಿಸೋರ್ಸಸ್ ಮೊಬಿಲೈಜೇಷನ್. ಇಷ್ಟು ಹಣ ತಂದು ಏನು ಮಾಡಿದರು ? ದುರ್ವಿನಿಯೋಗವಾಯಿತು, ಸರಿಯಾಗಿ ಖರ್ಚುಮಾಡಲಿಲ್ಲ ಎಂದು ಹೇಳಿದರು. ಈ ಹಣವನ್ನು ಇಂಥ ಕಠಿಣ ಕಾಲದಲ್ಲಿ ನಮ್ಮ ಅಭಿವೃದ್ಧಿ ಕಾರ್ಯಗಳಿಗೆ, ಯೋಜನೆಯಲ್ಲಿ ಸೇರಿರುವ ಕಾರ್ಯಗಳಿಗೆ ಖರ್ಚು ಮಾಡಲು ಒದಗಿಸಿರುವುದು ಮೆಚ್ಚತಕ್ಕ ವಿಚಾರ ಹೇಳುತ್ತಿಲ್ಲ. 21 ಕೋಟಿ ರೂಪಾಯಿ ಬರುತ್ತದೆ, ಕೊಡುತ್ತಾರೆ ಎಂದಿದ್ದರು, ಕೊಡಲಿಲ್ಲ ಎನ್ನಬಹುದು. ಅನೇಕ ಸಾರಿ ಬಜೆಟ್ ಮಾಡುವಾಗ.

ಶ್ರೀ ಎಚ್. ಡಿ. ದೇವೇಗೌಡ —ಕರೆಸ್ಪಾಂಡಿಂಗ್ ಮ್ಯಾಚಿಂಗ್ ಗ್ರಾಂಟ್ ಕೇಂದ್ರ ಸರಕಾರದಿಂದ ಬರಬೇಕೇ ? ಬೇಡವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಕೊಡುವುದು ಬಿಡುವುದು ಅವರಿಗೆ ಸೇರಿದ್ದು. ಕೇಳುವುದಕ್ಕಾದರೂ ಅಧಿಕಾರ ಬೇಡವೇ ? 21 ಕೋಟಿ ನಿರೀಕ್ಷೆ ಮಾಡಿದ್ದೆವು.

(ಶ್ರೀ ಕೆ. ಪುಟ್ಟಸ್ವಾಮಿ)

ನಿರೀಕ್ಷೆ ಮಾಡಿದ್ದೆಲ್ಲಾ ನಮ್ಮ ಕೈಗೆ ಬಂದರೆ ಸ್ವರ್ಗ ಭೂಮಿಗೆ ಇಳಿಸಬಹುದು. ಇಂಡಿಯಾ ಸರಕಾರದವರು 21 ಕೋಟಿ ಕೊಡುತ್ತೇವೆಂದು ಹೇಳಿದ್ದರು, ಅವರಿಗೆ ಕಷ್ಟವಾಗಿ ಕೊಡಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಹೇಳಿದ್ದೆಲ್ಲಾ ಕೊಡುವುದು ಬೇಡ. ಬಿಹಾರ್, ಯು. ಪಿ. ಮತ್ತಿತರ ರಾಜ್ಯಗಳಿಗೆ ಮ್ಯಾಚಿಂಗ್ ಗ್ರಾಂಟ್ ಕೊಡುವಾಗ ಯಾವ ತತ್ವವನ್ನು ಅಪ್ಲೈ ಮಾಡುವರೋ ಅದನ್ನೇ ಕರ್ನಾಟಕಕ್ಕೂ ಅಪ್ಲೈ ಮಾಡಬೇಕು, ನಾವು ಅನಾಥ ಶಿಶುವಾಗಬಾರದು ಎಂದು ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದು ಸರಿ. ನಮ್ಮ ಬಂಧುಗಳೊಬ್ಬರು ಬಿಹಾರಿಗೆ ಸರಕಾರಿ ಕೆಲಸದ ಮೇಲೆ ಹೋಗಿದ್ದರು. ಅವರು ಅಲ್ಲಿನ ಪರಿಸ್ಥಿತಿ ನೋಡಿದರು, ವರ್ಲ್ಡ್ ಹೆಲ್ತ್ ಆರ್ಗನೈಜೇಷನ್ನಿನವರು ಕರೆದುಕೊಂಡು ಹೋಗಿದ್ದರು. ಅವರು ಹೇಳುವುದನ್ನು ಕೇಳಿದರೆ ನಮ್ಮ ಮಟ್ಟಕ್ಕೆ ಬರಲು ಬಹಳ ಕಾಲ ಬೇಕಾಗಬಹುದೆಂದು ಕಾಣುತ್ತದೆ. ನಮ್ಮ ಪಕ್ಷ ಸಾಕಷ್ಟು ಅಭಿನಂದನಾರ್ಹ ರೀತಿಯಲ್ಲಿ ನಡೆದಿರುವುದಕ್ಕೆ ಸಂತೋಷ ಪಡಬೇಕು. ಇದು ಹಣಕಾಸಿನ ವಿಚಾರ.

ನಾವು ನೀವು ಸಂತೋಷಪಡಬೇಕಾದ್ದು. ಇಂದಿನ ಹಣಕಾಸಿನ ವಿಚಾರ. ಕಾಳೀ ನದಿ ಯೋಜನೆ ಮುಗಿಯಬೇಕು ಎನ್ನುವುದರಲ್ಲಿ ಎಲ್ಲರದೂ ಒಂದೇ ಅಭಿಪ್ರಾಯವೆಂದು ಹೇಳಿದೆ. ಕೇಂದ್ರ ಸರ್ಕಾರದವರು ಇದಕ್ಕೆ 1973—74ರಲ್ಲಿ ಹಣ ಕೊಟ್ಟಿದ್ದಾರೆ. ಹೋದ ವರ್ಷ ಏಳೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ವರ್ಷವೂ ಕೂಡ ಅಲ್ಲಿಂದ ಹಣವನ್ನು ನಿರೀಕ್ಷಣೆ ಮಾಡುತ್ತಾ ಇದ್ದೇವೆ. ಈ ವರ್ಷ 39 ಕೋಟಿ ರೂಪಾಯಿಗಳನ್ನು ಆದರೂ ನಾವು ಈ ಯೋಜನೆಗೆ ಖರ್ಚು ಮಾಡಬೇಕಾಗುತ್ತದೆ. ನಮ್ಮ ಸರಕಾರ ಇದಕ್ಕೆ 24 ಕೋಟಿ ರೂಪಾಯಿಗಳನ್ನು ಒದಗಿಸಿಕೊಂಡಿದೆ. ಇಂಡಿಯಾ ಸರ್ಕಾರದಿಂದ 15 ಕೋಟಿ ರೂಪಾಯಿ ಬರಬಹುದು ಎಂದು ನಿರೀಕ್ಷಣೆ ಮಾಡುತ್ತಿದ್ದೇವೆ. ಇದಕ್ಕೆ ನಾವು ಪ್ರಾಶಸ್ತ್ಯ ಕೊಡದೆ ಇಲ್ಲ. 24 ಕೋಟಿ ರೂಪಾಯಿಗಳನ್ನು ಕಾಳೀ ನದಿ ಯೋಜನೆಗೆ ನಮ್ಮ ಬಡ್ಜೆಟ್ಟಿನಲ್ಲಿ ಒದಗಿಸತಕ್ಕಂಥ ಒಂದು ಶಕ್ತಿಯನ್ನು ನಮ್ಮ ರಾಜ್ಯ ಸರ್ಕಾರದವರು ಪಡೆದಿರುವುದು, ನಮ್ಮ ಹಣಕಾಸಿನ ಪರಿಸ್ಥಿತಿ ಸುಭದ್ರವಾಗಿರುವುದಕ್ಕೆ ಕಾರಣವಾಗಿದೆ.

4.00 P.M.

ಶ್ರೀ ಕೆ. ಎಚ್. ಹನುಮೇಗೌಡ.—ಅಭಿವೃದ್ಧಿ ಕಾರ್ಯಗಳನ್ನೆಲ್ಲಾ ನಿಲ್ಲಿಸಿ ಬಿಟ್ಟು. ಇನ್ನೂ 20 ಕೋಟಿ ರೂಪಾಯಿಗಳನ್ನು ಇದಕ್ಕೆ ಕೊಡಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರದ ಕೆಲಸ, ವಿದ್ಯಾವಂತ ತರುಣತರುಣಿಯರಿಗೆ ಕೆಲಸವನ್ನು ಒದಗಿಸಿಕೊಡುವುದೂ ಒಂದು ಕೆಲಸವಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದಕ್ಕೆ ಶ್ರೀಮತಿ ಮನೋರಮ ಮಧ್ವರಾಜ ಅವರನ್ನು ಮಂತ್ರಿಯಾಗಿ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಅಭಿವೃದ್ಧಿ ಕಾರ್ಯಗಳ ದೃಷ್ಟಿಯಿಂದ ಇದು ಅಭಿವೃದ್ಧಿಗೆ ಸಾಧನೆಯಾಗತಕ್ಕ ಆಯವ್ಯಯದ ಅಂದಾಜು ಎನ್ನುವುದು ನನಗೆ ಸ್ಪಷ್ಟವಾಗಿದೆ. ಅದಕ್ಕೆ ನಾನು ಇದನ್ನು ಮನಸಾರೆ ಸ್ವಾಗತ ಮಾಡುತ್ತೇನೆ. ನಾನು ಇದನ್ನು ಹೇಳಿದಾಗ, ತಾವುಗಳು ಏನೋ ಪುಟ್ಟಸ್ವಾಮಿಯವರು ಸರ್ಕಾರವನ್ನು ಮೆಚ್ಚುತ್ತಾರೆ, ಬಹಳ ಸಪೋರ್ಟ್ ಮಾಡುತ್ತಾರಲ್ಲ ಎಂದು ಹೇಳಬಹುದು. ಒಂದು ಮಾತನ್ನು ಹೇಳುತ್ತೇನೆ, ನಮ್ಮ ಪಕ್ಷದಲ್ಲಿದ್ದು, ಅಲ್ಲಿರತಕ್ಕವರೂ ಈ ವಿಚಾರವನ್ನು ಹೇಳಬೇಕಾಗಿದೆ ಎಂದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕಾಲಿಲ್ಲದವರಿಗೆ ಮರಗೋಲು ಕೊಟ್ಟು ನಡೆಸುತ್ತಿದ್ದೀರಿ.

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಪಕ್ಷದಲ್ಲಿ ನಾವು ಹೆಚ್ಚಿನ ಆದ್ಯತೆ ಕೊಡುವುದು, ನಮ್ಮ ಇಂಟರ್ನಲ್ ಡೆಮಾಕ್ರೆಸಿಗೆ. ಇಂಥ ವಿಚಾರದಲ್ಲಿ ಭಿನ್ನಾಭಿಪ್ರಾಯ ಅನೇಕರಲ್ಲಿ ಇರುತ್ತದೆ. ನಾವೆಲ್ಲರೂ ಕುಳಿತುಕೊಂಡು ಚರ್ಚೆ ಮಾಡುತ್ತೇವೆ, ಒಬ್ಬರಿಗೊಬ್ಬರು ಘರ್ಷಣೆಯಾಗುವಂಥ ಮಟ್ಟದಲ್ಲಿ ನಮ್ಮ ಚರ್ಚೆಯಾಗಬಹುದು, ಅನಂತರ ಒಂದು ತೀರ್ಮಾನಕ್ಕೆ ಬರುತ್ತೇವೆ. ಇದರಿಂದ ಒಳ್ಳೆಯ ತೀರ್ಮಾನಕ್ಕೆ ನಾವು ಬರುತ್ತೇವೆ. ನಿಮ್ಮ ಮುಂದೆ ಬರತಕ್ಕ ತೀರ್ಮಾನಗಳು, ನಮ್ಮಲ್ಲಿ ಘರ್ಷಣೆಯಾಗಿ, ಒಬ್ಬರಿಗೊಬ್ಬರಿಗೊಬ್ಬರು ವಿಚಾರ ವಿನಿಮಯ ಮಾಡಿ, ಆಮೇಲೆ ಇಲ್ಲಿ ಬರತಕ್ಕವು. ನಮ್ಮ ಘರ್ಷಣೆಗಳು ಪತ್ರಿಕೆಗಳಲ್ಲಿ ಬರುತ್ತವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ ;—ಅಲಿಂಗನಾವಸ್ಥೆಗೆ ಬಂದಿದೆ.

ಶ್ರೀ ಕೆ ಪುಟ್ಟಸಾಮಿ ;—ನಮ್ಮ ಒಳಗಡೆ ಭಿನ್ನಾಭಿಪ್ರಾಯ ಬಂದರೆ ಅದು ನಿಜವಾಗಲೀ, ಇವರಲ್ಲಿ ಬಿನ್ನಾಭಿಪ್ರಾಯ ಬೆಳೆಯಲಿ ಎನ್ನುವುದು ನಿಮ್ಮ ಆಶೆ,

(ಶ್ರೀ ಕೆ. ಪುಟ್ಟಸ್ವಾಮಿ)

ಇದು ವಾಸ್ತವ ಅದಕ್ಕೆ ನಿಮ್ಮನ್ನು ಏನೂ ಅಕ್ಷೇಪ ಮಾಡುವುದಿಲ್ಲ. ನಮ್ಮಲ್ಲಿ ಇಂಟರ್ನಲ್ ಡೆಮಾಕ್ರಸಿ ಇದೆ. ಆ ಕಾರಣದಿಂದ ಸರ್ಕಾರದ ರೀತಿನೀತಿಗಳಿಗೆ ಬದ್ಧರಾಗಿರತಕ್ಕವರು ನೀತಿಗಳನ್ನು ಒಪ್ಪಿ ಕಾಂಗ್ರೆಸ್ಸಿನಲ್ಲಿರುವುದು. ಅದಕ್ಕೇ ನಾವು ಸಂಪೂರ್ಣ ಬೆಂಬಲ ಕೊಡತಕ್ಕವರು. ಆದರೆ ಆಡಳಿತ ನಡೆಯುವಾಗ ಅಲ್ಲಿ ಇಲ್ಲಿ ದೋಷಗಳು ಇದ್ದರೆ, ಅವುಗಳನ್ನು ಎತ್ತಿ ಹೇಳಬಾರದು ಎಂದು ಯಾರೂ ನಿರೀಕ್ಷಣೆ ಮಾಡುವುದಿಲ್ಲ. ಹಾಗೆಯೇ ಆಡಳಿತದಲ್ಲಿರತಕ್ಕ ದೋಷಗಳನ್ನು ನೀವು ಹೊರಗೆ ಹಾಕದಿದ್ದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :— ಪಕ್ಷದ ಸದಸ್ಯರಲ್ಲದವರಾದ. ಷೇಕ್ ಅಬ್ದುಲ್ಲಾ ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದೀರಿ.

ಶ್ರೀ ಪುಟ್ಟಸ್ವಾಮಿ :— ಇನ್ನೂ ಹತ್ತು ವರ್ಷಗಳಾದ ಮೇಲೆ ನಮ್ಮ ಪಕ್ಷದ ನೀತಿಯನ್ನು ನೀವು ತಿಳಿದುಕೊಳ್ಳಬಹುದು. ಇನ್ನು ನಮ್ಮ ವಿರೋಧಪಕ್ಷದ ನಾಯಕರು ಹೇಳಿದ ಇನ್ನೊಂದು ವಿಚಾರಕ್ಕೆ ಬರುತ್ತೇನೆ. ವಿರೋಧಪಕ್ಷದ ನಾಯಕರು ಅವರ ಭಾಷಣವನ್ನು ಸಮಾಪ್ತಿ ಮಾಡುವಾಗ ಮುಖ್ಯಮಂತ್ರಿಗಳ ಮೇಲೆ ನೇರವಾದಂಥ ಅಪಾದನೆಗಳನ್ನು ಮಾಡಿದ್ದಾರೆ. ಅಪಾದನೆಗಳನ್ನು ಮಾಡುವುದಕ್ಕೆ ಅವರು ಸ್ವತಂತ್ರರು. ಅವರು ಹತ್ತಿರ ಅಂಕಿಅಂಶಗಳು ಇರುವಾಗ ಅವರು ಆ ರೀತಿಯ ಆರೋಪಗಳನ್ನು ಹೊರಿಸದೇ ಹೋದರೆ ಅವರು ತಪ್ಪಿತಸ್ಥರಾಗುತ್ತಾರೆ, ಅದರ ಮೇಲೆ ನನ್ನ ಆಕ್ಷೇಪಣೆ ಏನೂ ಇಲ್ಲ. ಅವರು ಯಾವ ರೀತಿಯಲ್ಲಿ ಮಾಡಿದರು? ಅವರು ಈ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ, ಇದು ನನಗೂ ಮುಖ್ಯಮಂತ್ರಿಗಳಿಗೂ ನೇರವಾಗಿ ಸಂಬಂಧಪಟ್ಟಿದ್ದು ಎಂದು ಹೇಳಿದರು. ಅವರು ಸವಾಲು ಹಾಕಿದ್ದನ್ನು ನಾನು ಒಪ್ಪಿಕೊಂಡಿದ್ದೇನೆ. ನಾನು ಅವರಲ್ಲಿ ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇವೆ. ಇದು ಅವರಿಬ್ಬರಿಗೆ ನೇರವಾಗಿ ಸಂಬಂಧಪಟ್ಟಿದ್ದಲ್ಲ, ಅವರು ವಿರೋಧ ಪಕ್ಷದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ, ಆಡಳಿತ ಪಕ್ಷದ ರೀತಿ ನೀತಿಗಳನ್ನು ಮುಖ್ಯಮಂತ್ರಿಗಳು ಪ್ರತಿವಾದಿಸುತ್ತಾರೆ. ಇದು ಏನೇ ಇದ್ದರೂ ನಾವೂ ಪ್ರತಿನಿಧಿಗಳೇ ವಿನಹ ಸ್ವತಂತ್ರರಲ್ಲ. ನಾವು ಪ್ರತಿನಿಧಿಗಳು ಎಂದು ಒಪ್ಪಿಕೊಂಡಮೇಲೆ ನಿಮ್ಮಲ್ಲಿರತಕ್ಕ ಅಂಕಿಅಂಶಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವುದಕ್ಕೆ ತಾವು ಅವಕಾಶ ಕೊಡಬೇಕು. ನಿಮ್ಮನ್ನು ನಾವು ಕಡ್ಡಾಯ ಮಾಡುವುದಕ್ಕಾಗುವುದಿಲ್ಲ. ಇದು ನಿಮ್ಮಿಬ್ಬರ ಸ್ವಾತಂತ್ರ್ಯಕ್ಕೆ ಸೀಮಿತವಾದುದಲ್ಲ. ಸಭೆಯವರಿಗು ಎಲ್ಲಾ ವಿಚಾರವನ್ನು ತಿಳಿದುಕೊಳ್ಳುವುದಕ್ಕೆ ಹಕ್ಕು ಇದೆ. ಒಂದು

ವೇಳೆ ತಾವು ಅದನ್ನು ನಿರಾಕರಿಸಿದರೆ, I pressume that you have no evidence. That is my pressumption. ಆದ್ದರಿಂದ ಇದು ನಿಬ್ಬರಿಗೂ ಸೀಮಿತವಾದುದಲ್ಲ. ಈ ವಿಜಾರವನ್ನು ಇಲ್ಲಿಗೆ ಬಿಡತಕ್ಕದ್ದೂ ಸರಿಯಲ್ಲ. ನಾವು ಆಡಳಿತ ನಡೆಸತಕ್ಕವರು. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ, ನಮ್ಮ ಸ್ನೇಹಿತರೊಬ್ಬರು ಒಂದು ಸಾರಿ ಒಂದು ಮಾತನ್ನು ಹೇಳಿದರು. ಯಾರೋ ಕಕ್ಷಿಗಾರರು ಬಂದು ಒಂದು ಲಾಯರಂ ನೋಟೀಸ್ ಕೊಡಿಸಿದರು, ನೋಟೀಸ್ ನೋಡಿದರೆ, ಉದ್ದಕ್ಕೆ ಮೂರು ಪೇಜು ಇದೆ ಆದರಲ್ಲಿ ಯಾವವಿಚಾರವೂ ಸ್ಪಷ್ಟವಾಗಿರಲಿಲ್ಲ. ಎಲ್ಲಾ ಮುಗುಂ ಆಗಿತ್ತು. ಇದಕ್ಕೆ ಒಂದು ರಿಪ್ಲೈ ನೋಟೀಸ್ ಕೊಡಿ ಎಂದರು, ಆಗ ಲಾಯರ್ ಆವರು ಓದಿನೋಡಿ, ಬೆಳಿಗ್ಗೆ ಬನ್ನಿ ನೋಟೀಸ್ ಕೊಡತ್ತೇನೆಂದು ಹೇಳಿದರು, ಆಮೇಲೆ ಅವರು ಒಂದೇ ಒಂದು ಸೆಂಟೆನ್ಸ್‌ನಲ್ಲಿ ಉತ್ತರ ಕೊಟ್ಟರು, ಏಕೆಂದರೆ, ನಿಮ್ಮ ಮುಗುಂ ನೋಟೀಸ್‌ಗ ನನ್ನ ತಗುಂ ಜವಾಬು ಎಂದು. ಅದಕ್ಕೆ ನಾನು ಹೇಳಿದ್ದು ನಿಮಗೆ ತಗುಂ ಉತ್ತರ ಎಂದು ಆದರಿಂದ ತಾವು ನಿಮ್ಮ ಬತ್ತಳಿಕೆಯಲ್ಲಿ ಎಲ್ಲಾ ಇಟ್ಟುಕೊಳ್ಳುವುದು ಅಲ್ಲ, ನಿಮ್ಮಲ್ಲಿ ಏನು ರಿಕಾರ್ಡ್ಸ್ ಏನು ಇವೆ, ಅವನ್ನು ಇಡಿ. ಪ್ಲೀಸ್ ಯುವರ್ ರಿಕಾರ್ಡ್ಸ್?

ನಾನು ಹೇಳುತ್ತೇನೆ ನಮ್ಮ ಪಕ್ಷದವರು ಜವಾಬ್ದಾರರು ಎಂದು ಯಾವುದು ಆಪಾದನೆ ಮಾಡಿದ್ದಾರೆ, ಆ ರೀತಿ ಆಪಾದನೆ ಮಾಡಿದಾಗ ನಮ್ಮಲ್ಲಿ ಕೆಲವು ನಿರ್ದಿಷ್ಟವಾದ ವಿಚಾರಗಳು ಪ್ರತಿಯೊಬ್ಬ ಜೇಬಿನಲ್ಲಿರತಕ್ಕಂಥ ವಿಚಾರಗಳೇನು ಅಲ್ಲ. ಪ್ರತಿಯೊಬ್ಬರ ತಲೆಯಲ್ಲೂ ಉಳಿದಿರತಕ್ಕಂಥ ವಿಚಾರಗಳೇನೂ ಅಲ್ಲ. ಪ್ರತಿಯೊಬ್ಬರಿಗೂ ಆ ವಿಷಯ ಜ್ಞಾಪಕಕ್ಕೆ ಬರುತ್ತದೆ ಎನ್ನತಕ್ಕಂಥದ್ದಲ್ಲ. ಅದು ಎಲ್ಲಾ ರಿಕಾರ್ಡ್‌ನಲ್ಲಿ ಇರುತ್ತದೆ. ರಿಕಾರ್ಡ್ ನಮಗೇನೂ ಸುಳ್ಳು ಹೇಳುವುದಕ್ಕೆ ಆಗುವುದಿಲ್ಲ. Records will never lie. You take it from me. ಅದರ ಮೂಲಕ ನಿಮಗೆ ಸೂಕ್ತವಾದಂಥ ಸಮಯದಲ್ಲಿ ಕೊಡುತ್ತಾರೆ. ಅದರಲ್ಲಿ ನೀವು ಏನೂ ಆಲೋಚನೆ ಮಾಡಬೇಕಾದ್ದು ಇಲ್ಲ. ಸೂಕ್ತವಾದಂಥ ಜವಾಬು, ಸೂಕ್ತವಾದಂಥ ಸಮಯ ಎಂದರೆ ನನಗೆ ಒಬ್ಬ ಮಂತ್ರಿಗಳು ಜ್ಞಾಪಕಕ್ಕೆ ಬರುತ್ತಾರೆ. ಅವರು ಯಾರೆಂದರೆ ಶ್ರೀಮಾನ್ ಚನ್ನಬಸಪ್ಪನವರು. ಅವರಿಗೆ ನಾವು ಮಿನಿಸ್ಟರ್ ಫಾರ್ ಪಿ. ಡಬ್ಲ್ಯು. ಡಿ. ಎನ್ನುವ ಬದಲು, "Minister for appropriate action at appropriate time" ಅಂತ ಹೇಳಬಹುದು. ಏತಕ್ಕೆಂದರೆ ಅವರು ಸುಮ್ಮನೇ ತಮಾಷೆಗೆ ಹೇಳುತ್ತಾರೆಂದು ಅಲ್ಲ. ಅವರು ಈ ಸಭೆಯಲ್ಲಿ ಅನೇಕ ಗುರುತರವಾದಂಥ ಹೇಳಿಕೆಯನ್ನು ಮಾಡಿ, ಆ ಹೇಳಿಕೆಗಳ ಆಧಾರದ ಮೇಲೆ ಮುಂದಿನ ಕಾರ್ಯಕ್ರಮವನ್ನು ಅವರು ತೆಗೆದುಕೊಂಡಿಲ್ಲ. ಜಡ್ಜ್‌ಮೆಂಟ್‌ನ್ನು ಬೇಕಾದಷ್ಟು ಬರೆದರು, ಆದರೆ operative

(ಶ್ರೀ ಕೆ. ಪುಟ್ಟಸ್ವಾಮಿ)

portion— — ಇಲ್ಲ ಶರಾವತಿ ಬಗ್ಗೆ ಪತ್ರಿಕೆಯಲ್ಲಿ ಓದಿ ನೋಡಿದಾಗ ದಂಗು ಬಡಿದು ಹೋಗಿತ್ತು. 136 ಕೋಟಿ ರೂಪಾಯಿಗಳು ಶರಾವತಿಯಲ್ಲಿ ಕೊಟ್ಟ ಹೋಯಿತೇನೋ ಎಂದು ಅನ್ನಿಸಿಬಿಟ್ಟಿತು. ಆ ಮೇಲೆ He is fond of placing white papers. — — — ಆದರೆ ಅವು ಬ್ಲಾಕ್‌ನಲ್ಲಿಯೇ ಪ್ರಿಂಟ್ ಆಗಿರುತ್ತವೆ. He calls them white. But he never took any action. ಅವಕಾಶಗಳನ್ನು ನಾವು ಆ ರೀತಿ ಉಪಯೋಗಿಸ ಬಾರದು ಅವರು ಆ ರೀತಿ ಹೇಳುವುದರಿಂದ ನಾವು ಅವರಿಗೆ "appropriate action at appropriate time" ಎಂದು ಹೇಳಿ ಗ್ಲಬ್ಬಿಸಬಹುದು. ನೀವು ಒಬ್ಬರ ಮೇಲೆ ಆಪಾದನೆ ಮಾಡುವಾಗ, ಆ ಆಪಾದನೆ ನನ್ನ ಮೇಲೆ ಬಂದರೆ ಏನು ಎನ್ನುವುದನ್ನು ನೀವು ಆಲೋಚನೆ ಮಾಡಬೇಕು. ಆದುದರಿಂದ ಈ ಪ್ರಶ್ನೆ ಯನ್ನು ಪದೇ ಪದೇ ಅವರಿಗೆ ಅನೇಕ ಸಭೆಗಳಲ್ಲಿ, ಎಲ್ಲಾ ಕಡೆಯಲ್ಲೂ ಹಾಕಿದ್ದಾರೆ. I don't know whether the appropriate time would come within a reasonable time at all.

ಶ್ರೀ ಎಚ್. ಡಿ. ದೇವೇಗೌಡ.—ಒಂದೇ ಒಂದು ಕ್ಲಾರಿಫಿಕೇಷನ್‌ನ್ನು ಕೇಳಿಬಿಡುತ್ತೇನೆ. ತಮ್ಮ ಆರ್ಗ್ಯುಮೆಂಟ್‌ನ್ನು ಕೇಳಿದೆ. ಮಗುಂ ಜವಾಬಿಗೆ ತಗುಂ ಜವಾಬು ಎಂದು ತಾವು ಹೇಳಿದಿರಿ ನಮ್ಮದು ಇಂಟರನಲ್ ಡೆಮಾಕ್ರಸಿ ಎಂದು ಹೇಳಿ ಹೊಡೆದಾಡಿಕೊಂಡು ಓಪನ್ ಡೆಮಾಕ್ರಸಿಯಲ್ಲಿ ಬರುತ್ತೀರಿ ಬಂದಾಗ ಕಿಸ್ ಮಾಡಬೇಕಾಗುತ್ತದೆ. ನಿಮ್ಮ ಆರ್ಗ್ಯುಮೆಂಟ್‌ನ್ನು ನಿಮಗೇ ತಿರುಗಿಸಿ ಬಿಡುತ್ತೇನೆ. ಇವತ್ತು ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ತಮ್ಮ ಮೂಲಕ ಒಂದು ಪ್ರಶ್ನೆ ಕೇಳುತ್ತೇನೆ ದಯಮಾಡಿ ಅದಕ್ಕೆ ಅವರ ಉತ್ತರ ಕೊಟ್ಟರೆ ಸಾಕು ಮಾನ್ಯ ಭಾಸ್ಕರ ಸೇಮಿತ ಬಗ್ಗೆ ಸ್ಪೀಕರ್‌ರವರು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ನಿಲುವಳಿ ಸೂಚನೆಯಾಗಿ ಕೊಟ್ಟಿದ್ದು ನಮ್ಮ ನಿಮ್ಮ ಅನುಭವದ ಇತಿಹಾಸದಲ್ಲಿಯೇ ಇಲ್ಲ. ಆದರೆ ಅಂತಿಮವಾಗಿ ಈ ಸಭೆಯಲ್ಲಿ ಹೇಗೆ ತೀರ್ಮಾನವಾಯಿತು ಎಂಬುದು ಇಡೀ ಸಭೆಗೇ ಗೊತ್ತಿದೆ. ಈಗ ತಾವು ಹೇಳುತ್ತೀರಿ, ನಾನು ಬಡ್ಜೆಟ್‌ನ ಬಗ್ಗೆ ಮಾತನಾಡುವಾಗ ನೋಡಿದಂಥ ದೃಷ್ಟಿಕೋನವೇ ಬೇರೆ ಎಂದು ಹೇಳಿದಾಗ ನೀವು ಈ ವಿಷಯದ ಬಗ್ಗೆ ಆರ್ಗ್ಯುಮೆಂಟ್ ಮಾಡುವ ದೃಷ್ಟಿಕೋನ ಸರಿಯೋ ತಪ್ಪೋ ಎಂದು ಹೇಳುವುದಕ್ಕೆ ಒಬ್ಬರು ಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ :—The anolagy stops somewhere, ಇವತ್ತು ಬಹುಶಃ ಭಾಸ್ಕರ ಸೇಮಿತ ವಿಚಾರದಲ್ಲಿ The Speaker was kind

enough to give an opportunity to speak. ನಾನು ಈಗ ಹೇಳುವುದೇನು ಇಲ್ಲ. ಇನ್ನು ಹಾಸನ ಕೇಸ್‌ನಲ್ಲಿ ಆಗಲೀ ಅಥವಾ I do not want to repeat. I am not repeating. ಹಾಸನ ಅಥವಾ ಸೊಂಡೂರಿನ ಕೇಸಿನ ವಿಚಾರದಲ್ಲಿಯಾಗಲೀ there was no opportunity for that matter to go before a judicial person. ಆದುದರಿಂದ ಇದಕ್ಕೂ ಅದಕ್ಕೂ ವ್ಯತ್ಯಾಸವಿದೆ.

ಶ್ರೀ ಕಾಗೋಡು ತಿಮ್ಮಪ್ಪ :....ಮಾನ್ಯ ಚನ್ನಬಸಪ್ಪನವರ ವಿಷಯ ಹೇಳಿ.

ಶ್ರೀ ಕೆ. ಪುಟ್ಟಸ್ವಾಮಿ ;....ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ನಾನು ಇದನ್ನು ಇಲ್ಲಿ ಹೇಳುವುದಲ್ಲ ನಮ್ಮ power house Congress Organisation— — — — ಇದೆಯಲ್ಲ ಅವರೇ ಹೇಳಿದ್ದಾರೆ. ಇದನ್ನು ನಾನು ಹೇಳುವುದೇನು ಬಂತು ಅವರೇ ಹೇಳಿದ್ದಾರೆ. They will have to come to a decision.

ಶ್ರೀ ಬಿ. ಪುಟ್ಟಸ್ವಾಮಯ್ಯ :....ನಿಮ್ಮ ಪವರ್ ಹೌಸ್‌ನಲ್ಲಿ ಕನ್‌ಡೆನ್ಸ್‌ರ್‌ರೇ ಇಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ :....ಇನ್ನು ಪಿ. ಡಬ್ಲು. ಡಿ. ಆಫೀಸರ್ಸ್ ಬಗ್ಗೆ ಶ್ರೀಮಾನ್ ಚನ್ನಬಸಪ್ಪನವರಿಗೆ ಏನೊಂದು ವ್ಯಾಮೋಹ, ಯಾವುದಾದರೊಂದು ಮಾತನ್ನು ಎತ್ತಿದರೆ ಉಗ್ರವಾದ ಶಿಕ್ಷೆಯನ್ನು ಮಾಡುತ್ತೇನೆ ಎಂದು ಹೇಳುತ್ತಾರೆ. ಅದು ಯಾವಾಗಲೂ ಉಗ್ರವಾದಂಥ ಶಿಕ್ಷೆಯನ್ನು ಎಲ್ಲಾ ಕಾರ್ಯಗಳಿಗೂ ಮಾಡುವುದಕ್ಕೆ ಆಗುವುದಿಲ್ಲ, ಮಾಡಲೂ ಬಾರದೆಂದು ಹೇಳುತ್ತೇನೆ. ತಪ್ಪಿಗೆ ತಕ್ಕಂತೆ ಶಿಕ್ಷೆಯೇ ಹೊರತು ಉಗ್ರವಾದ ಶಿಕ್ಷೆ ಇದು ಸರಿಯಲ್ಲ.

ಇನ್ನು ಮಾನ್ಯ ದೇವೇಗೌಡರು ಹೇಳಿದಂಥ ಚಾರ್ಜಸ್ ಬಗ್ಗೆ ಮಾತನಾಡುತ್ತೇನೆ. ಈ ವಿಷಯದಲ್ಲಿ ಅವರಿಗೊಂದು ಸಲಹೆಯನ್ನು ಮಾಡುತ್ತಿದ್ದೇನೆ. ಅವರು ಏನು ವಿಚಾರಗಳನ್ನು ಹೇಳಿದರೋ ಅದನ್ನೆಲ್ಲಾ ಪರಿಶೀಲನೆ ಮಾಡಿ, ಏನೊಂದು ಅಂಕಿಅಂಶಗಳು ಇದೆ ಅದನ್ನು ನಮ್ಮ ಈ ಸಭೆಗೆ ಒದಗಿಸಿಕೊಡಬೇಕು. ಆ ವಿಚಾರವನ್ನೆಲ್ಲಾ ಈ ಸಭೆಗೆ ಒದಗಿಸಿಕೊಡಬೇಕು ಎನ್ನುವುದರಲ್ಲಿ ನಾನು ಶ್ರೀಮಾನ್ ದೇವೇಗೌಡರವರಿಗೆ ಒಂದು ಮಾತನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಸಭೆಯಲ್ಲಿ ಹೇಳತಕ್ಕಂಥ ವಿಚಾರದ ಮೇಲೆ ಆಗತಕ್ಕಂಥ ತೀರ್ಮಾನದಲ್ಲಿ ನಿಮಗೆ ವಿಶ್ವಾಸವಿಲ್ಲವೆಂದು ಅನೇಕ ಸಾರಿ ಹೇಳುತ್ತಿದ್ದೀರಿ. ಆದರೆ ನಮ್ಮ ತೀರ್ಮಾನದಲ್ಲಿ ನಿಮಗೆ ವಿಶ್ವಾಸ ಇರಲಿ ಇಲ್ಲದೇ ಇರಲಿ...........

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮಲ್ಲಿ ವಿಶ್ವಾಸವಿಲ್ಲವೆಂದು ಹೇಳಲಿಲ್ಲ. ಅದು ನಮ್ಮಲ್ಲಿರತಕ್ಕಂಥ ಇನ್‌ಹರೆಂಟ್ ಡಿಫೆಕ್ಟ್.

ಶ್ರೀ ಕೆ. ಪುಟ್ಟಸ್ವಾಮಿ :—ಇನ್‌ಹರೆಂಟ್ ಡಿಫೆಕ್ಟ್ಸ್ ಇರುವುದರಿಂದ ನಮ್ಮಲ್ಲಿ ವಿಶ್ವಾಸವಿಲ್ಲ ಎಂದು ಹೇಳುತ್ತೀರಿ. ಒಂದು ಸಲಹೆಯನ್ನು, ಒಂದು ಹಿತವಚನವನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಅದು ಏನೆಂದರೆ ನೀವು ಹೇಳಿದಂಥ ಮಾತು ಇಲ್ಲಿಗೇ ಮುಗಿಯುವುದಿಲ್ಲ. ನೀವು ಹೇಳಿದ್ದನ್ನೆಲ್ಲಾ ರಾಜ್ಯದಾದ್ಯಂತ ಜನ ಕೇಳುತ್ತಿರುತ್ತಾರೆ. ನೀವು ಹೇಳಿದಂಥ ಮಾತು ಸರಿಯಾಗಿದ್ದರೆ ನೀವು ತಾಳಿದಂಥ ನಿಲವು ಜನ ಮೆಚ್ಚಿದರೆ ಅದಕ್ಕೆ ನಿಮಗೆ ಡಿವಿಡೆಂಡ್ 1977ಕ್ಕೆ ಬರುತ್ತದೆ. ನಿಮ್ಮ ನಿಲವು ಸರಿಯಾಗಿಲ್ಲದಿದ್ದರೆ, ನೀವು ತಾಳಿದಂಥ ಧೋರಣೆಯನ್ನು ಜನ ಮೆಚ್ಚದೇ ಇದ್ದರೆ ಡಿವಿಡೆಂಟ್ ಸಿಕ್ಕುವುದಿಲ್ಲ. ಆದುದರಿಂದ ನೀವು ಹೇಳುವಂಥದ್ದನ್ನು ನಾವು ಒಪ್ಪುತ್ತೇವೆಯೋ ಬಿಡುತ್ತೇವೆಯೋ ಅದನ್ನು ಅಷ್ಟಾಗಿ ನೀವು ಮನಸ್ಸಿಗೆ ಹಚ್ಚಿಕೊಂಡು ಕೆಡಿಸಿಕೊಳ್ಳಬೇಡಿ. ನಾನು ಹೇಳುವಂಥ ಮಾತನ್ನು ಕೇಳಿ. ಅಖೈರಾಗಿ ತೀರ್ಮಾನ ಮಾಡುವವರು ಹೊರಗೆ ಇರುವುದರಿಂದ ನೀವು ಯಾವುದೊಂದು ವಿಚಾರವನ್ನು ಇಲ್ಲಿ ಹೇಳುವುದಿಲ್ಲವೆಂದರೆ, ಈ ಸಭೆಗೆ ವಂಚನೆ ಮಾಡಿದಷ್ಟೇ ಅಲ್ಲ ಜನತೆಗೇ ವಂಚನೆ ಮಾಡಿದಂತಾಗುತ್ತದೆ. ಆದುದರಿಂದ ನಿಮ್ಮಲ್ಲಿ ಕೆಲವು ಅಂಕಿಅಂಶಗಳು ಇದ್ದರೆ ಬಚ್ಚಿಡದೇ ಇಲ್ಲಿ ಎಲ್ಲವನ್ನೂ ಹೇಳಿಬಿಡಿ. ನಿಮಗೆ ಗೊತ್ತಿರತಕ್ಕಂಥದ್ದನ್ನು ಇಲ್ಲಿ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ :....ಇಲ್ಲಿ ಹೇಳತಕ್ಕಂಥ ವಿಚಾರಗಳು ಜನರ ಮಟ್ಟದಲ್ಲಿ ತೀರ್ಮಾನವಾಗುವುದಾದರೆ, ಇಲ್ಲಿ ತೀರ್ಮಾನವಾಗುವುದಕ್ಕೆ ಅವಕಾಶ ವಿಲ್ಲವೆನ್ನುವ ಅಭಿಪ್ರಾಯವೋ ತಮ್ಮದು ?

ಶ್ರೀ ಕೆ. ಪುಟ್ಟಸ್ವಾಮಿ : ಮಾನ್ಯ ಕಾಗೋಡು ತಿಮ್ಮಪ್ಪನವರಿಗೇನೂ ನಾನು ರಾಜ್ಯಾಂಗ ಶಾಸನವನ್ನು ಹೇಳಿಕೊಡಬೇಕಾದ್ದು ಇಲ್ಲ. ಇವತ್ತು ಯಾವುದೇ ಒಂದು ವಿಷಯವನ್ನು ಸರ್ಕಾರ ತೀರ್ಮಾನ ಮಾಡಿದರೂ ಕೂಡಾ ಅದನ್ನು ತೂಕ ಮಾಡುವವರು ಹೊರಗಡೆ ಇದ್ದಾರೆ. ನಮ್ಮ ನಿಮ್ಮ ನಿಲುವನ್ನು ತೂಕ ಮಾಡುವವರು ಹೊರಗಡೆ ಇದ್ದಾರೆ.

ಇನ್ನು ಕೆಲವು ರಿಸೋರ್ಸ್ ಮೊಬಲೈಜೇಷನ್‌ನೊಳಗೆ ಸರ್ಕಾರ ಸಾಕಷ್ಟು ಪ್ರಯತ್ನ ಮಾಡಿದೆ ಎನ್ನುವುದನ್ನು ಅಂಕಿಅಂಶಗಳ ಮೂಲಕ ಹೇಳಿದ್ದಾರೆ.

ಇನ್ನು ಕೆಲವರಿಗೆ ಶ್ರೀಮಾನ್ ಕೋಣಂದೂರು ಲಿಂಗಪ್ಪನವರಿಗೆ ನಮ್ಮ ಹಳ್ಳಿಯ ಭಾಷಣದಲ್ಲಿ ಹೇಳುವುದಾದರೆ ಹೊಟ್ಟೆ ಬಟ್ಟೆ ಕೇಳಬೇಡ ನಿನ್ನ ಗಿಣಿ

ಹಾಗೆ ಸಾಕುತ್ತೇನೆ ಅಂತ ಅವರು ಯಾವುದೇ ವಿಚಾರ ಬರಲಿ ಆ ಕೆಲಸ ಮಾಡ ಲಿಲ್ಲಾ, ಈ ಕೆಲಸ ಮಾಡಲಿಲ್ಲಾ, ಇದಕ್ಕೆ ಬಡ್ಜೆಟ್ ಪ್ರಾವಿಷನ್ ಮಾಡಿದರು ಆ ಕೆಲಸ ಆಗಲಿಲ್ಲಾ, ಇದರ ಕೆಲಸ ಪ್ರೋಗ್ರೆಸೀವ್ ಆಗಿಲ್ಲಾ, ಇದು ಕುಂಠಿತವಾ ಗುತ್ತಾ ಇದೆ, ಮತ್ತು ಕಾಳೀನದಿ ಕೆಲಸ ಹಾಗೆ ಆಗುತ್ತಾ ಇದೆ, ಹೀಗೆ ಆಗುತ್ತಾ ಇದೆ. ಹೀಗಿದ್ದರೆ ಇನ್ನು 10 ವರ್ಷವಾದರೂ ಕೆಲಸವಾಗುವುದಿಲ್ಲಾ, ಅದರ ಪ್ರೋಗ್ರೆಸ್ ಕಡೆ ಏನೂ ಗಮನ ಕೊಡಲಿಲ್ಲಾ, ಇನ್ನು ಕಾವೇರಿ ಬಗ್ಗೆ ನಮಗೆ ಏನೂ ಫಲಿಸಲಿಲ್ಲಾ. ಈ ರೀತಿಯಾಗಿ ಒಂದೊಂದಾಗಿ ಆಪಾದನೆಗಳು ಮಾಡುವುದು ಸರಿಯೇ ಎಂದು ನಾನು ಅವರನ್ನು ಕೇಳುತ್ತೇನೆ. ಆದರೆ ಇದನ್ನು ಸಾಧಿಸು ವುದು ಹೇಗೆ? ಅದಕ್ಕೆ ಕಂದಾಯ ಹಾಕಲೇ ಬೇಕು, ಅದಕ್ಕೆ ತೆರಿಗೆ ಹಾಕಲೇ ಬೇಕು. ಯಾವ ತೆರಿಗೆಗೂ ವಿರೋಧ ಪಕ್ಷದವರು ಬೆಂಬಲ ಕೊಡುವರು ಎನ್ನುವ ಭ್ರಮೆಯಿಂದ ಹೇಳುತ್ತಾ ಇಲ್ಲ. ಆದರೆ ಈ ರೀತಿ ಅವರು ಆಕ್ಷೇಪಣೆ ಮಾಡು ವಾಗ ಅದಕ್ಕೆ ಬದಲಾಗಿ ಇನ್ನೂ ಯಾವುದಾದರೂ ತೆರಿಗೆ ಹಾಕುವುದಕ್ಕೆ ಮಾರ್ಗ ಇದೆಯೇ ಎನ್ನುವುದನ್ನು ಅವರು ಹೇಳುವುದಕ್ಕಾಗುವುದಿಲ್ಲವೇ? ಅದು ಇಲ್ಲವೇ ಇಲ್ಲ. ಯಾವ ತೆರಿಗೆ ಬಂದರೂ ಅದಕ್ಕೆ ವಿರೋಧ ಮಾಡುವುದು ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಮಾತು ಹೇಳಿದರು. ನಾನು ಸೋಷಲಿಸಂ ಮೇಲೆ ಪುಸ್ತಕ ಓದಿಲ್ಲ. ನನಗೆ ಪುಸ್ತಕದ ಜ್ಞಾನ ಅಷ್ಟು ಹೆಚ್ಚಾಗಿ ಇಲ್ಲ. ನಾನು ಅಲ್ಲಿ ಇಲ್ಲಿ ಕೇಳಿ ತಿಳಿದದ್ದು ಅವರು ಇವರು ಹೇಳಿದ್ದನ್ನು ಕಟ್ಟಿಕೊಂಡ ಬುತ್ತಿಯಲ್ಲಿ ಹೋಗತಕ್ಕಂಥಾದ್ದು. ನಾನು ಈ ಮಾತನ್ನು ಹೇಳಿದರೆ ತಾವು ಯಾರೂ ಕುಪಿತ ರಾಗಬೇಕಾಗಿಲ್ಲ. ಸಮಾಜವಾದದಲ್ಲಿರುವಂಥ ಸರ್ಕಾರ ಪರೋಕ್ಷವಾದ ತೆರಿಗೆ ಯನ್ನು ಹೆಚ್ಚು ಹೆಚ್ಚು ಹಾಕುವುದಕ್ಕೆ ಪ್ರಾಮುಖ್ಯತೆ ಕೊಡಬಾರದು ಎಂದು ಅವರು ಹೇಳಿದರು. ನನಗೆ ಬಹಳ ಆಶ್ಚರ್ಯವಾಯಿತು. ಪರೋಕ್ಷವಾದ ತೆರಿ ಗೆಯನ್ನು ಕೊಡತಕ್ಕಂಥಾವರು ಯಾರು ಎಂದರೆ ಇದನ್ನು ಕೊಡತಕ್ಕಂಥ ಶಕ್ತಿ ಯಾರು ಯಾರಿಗೆ ಇದೆಯೋ ಅವರವರ ಶಕ್ತ್ಯಾನುಸಾರವಾಗಿ ಬೀಳತಕ್ಕಂಥ ತೆರಿಗೆ ಯಾಗುತ್ತದೆ. ಉದಾಹರಣೆಗೆ ನಾನು ಒಂದು ಕಾರನ್ನು ಇಟ್ಟಿದ್ದೇನೆ. ಕಾರು ಕೊಂಡುಕೊಳ್ಳಬೇಕಾದರೆ ಅದಕ್ಕೆ 30 ಸಾವಿರ ರೂಪಾಯಿ ಆಗುತ್ತದೆ ಅದರ ಮೇಲೆ 8 ಪರ್ಸೆಂಟ್ ಅಥವಾ 12 ಪರ್ಸೆಂಟ್ ತೆರಿಗೆ ಇದೆ. $3\frac{1}{2}$-4 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಬೀಳುತ್ತದೆ. ಅದರ ಮೇಲೆ ಇನ್ನು ಬೇರೆ ಬೇರೆ ತೆರಿಗೆ ಬೀಳು ತ್ತದೆ. ಮತ್ತು ಕಾರಿನಲ್ಲ ಏನಾದರೂ ಒರಗಿಕೊಳ್ಳಬೇಕಾದರೆ ಬೇಕಾದಂಥ ಆರ್ಟಿ ಕಲ್ ಏನು ಇದೆಯೋ ಅದನ್ನು ತೆಗೆದುಕೊಂಡರೆ ಅದರ ಮೇಲೆ ತೆರಿಗೆ ಬೀಳು ತ್ತದೆ. ಮತ್ತು ಕಾರಿಗೆ ಬೇಕಾದ ಪೆಟ್ರೋಲನ್ನು ಕೊಂಡುಕೊಂಡರೆ ಅದರ ಮೇಲೆ ತೆರಿಗೆ ಬೀಳುತ್ತದೆ. ಇನ್ನು ಏನಾದರೂ ಅದಕ್ಕೆ ಬೇಕಾದರೆ ಎಲೆಕ್ಟ್ರಿಕಲ್ ಗೂಡ್ಸ್, ಲಕ್ಸುರಿ ಆರ್ಟಿಕಲ್ ತೆಗೆದುಕೊಂಡರೆ ಅದರ ಮೇಲೆ 7-8 ಪರ್ಸೆಂಟ್ ತೆರಿಗೆ ಬೀಳುತ್ತದೆ. ಈ ರೀತಿಯಾಗಿ ಯಾರು ಲಕ್ಸುರಿ ಆರ್ಟಿಕಲ್ಸನ್ನು ಕೊಂಡು

(ಶ್ರೀ ಕೆ. ಪುಟ್ಟಸ್ವಾಮಿ)

ಕೊಳ್ಳುತ್ತಾರೋ ಅವರ ಮೇಲೆ ಹೆಚ್ಚು ಹೆಚ್ಚು ತೆರಿಗೆ ಬೀಳುತ್ತದೆ. ಒಬ್ಬ ಮನುಷ್ಯ ಒಂದು ಸಾವಿರ ರೂಪಾಯಿ ಸಂಪಾದನೆ ಮಾಡಿದರೆ ಅದಕ್ಕೆ ತಕ್ಕಂತೆ ಪ್ರಮಾಣ ದಲ್ಲಿ ಅವನಿಗೆ ತೆರಿಗೆ ಬೀಳುತ್ತದೆ. ಒಬ್ಬ ಮನುಷ್ಯ 100 ರೂಪಾಯಿ ಸಂಪಾದನೆ ಮಾಡಿದರೆ ಅದಕ್ಕೆ ತಕ್ಕಂಥ ಪ್ರಮಾಣದಲ್ಲಿ ತೆರಿಗೆ ಬೀಳುತ್ತದೆ ಎಂದು ನಾನು ತಿಳಿದಿದ್ದೇನೆ. ಈ ಪ್ರತ್ಯಕ್ಷವಾದಂಥ ತೆರಿಗೆಗೂ ಸೋಷಲಿಸ್ಟ್ ಸರ್ಕಾರಕ್ಕೂ ಏನೂ ನೆಂಟು ಇಲ್ಲ. ಪ್ರತ್ಯಕ್ಷವಾದ ತೆರಿಗೆ ಎಂದರೆ ನೇರವಾದ ತೆರಿಗೆಯನ್ನು ಹಾಕತಕ್ಕಂಥಾದ್ದು. ಎಲ್ಲೆಲ್ಲಿ ಅವಶ್ಯಕವಾಗಿ ಇದೆಯೋ ಅಲ್ಲಲ್ಲಿ ಹಾಕುವುದು. ಇದು ಸರಿಯಲ್ಲವೇ ?.

ಶ್ರೀ ಕಾಗೋಡು ತಿಮ್ಮಪ್ಪ :—ನಾನು ಹೇಳಿದ ಅಭಿಪ್ರಾಯ ಏನೆಂದರೆ ಪ್ರತ್ಯಕ್ಷವಾದ ತೆರಿಗೆಗೂ ಮತ್ತು ಪರೋಕ್ಷವಾದ ತೆರಿಗೆಗೂ ಇರತಕ್ಕಂಥ ಪ್ರಮಾಣ ಗಳು ಇವೆಯಲ್ಲಾ ಅದರಲ್ಲಿ ನೀವು ಸಮಾಜವಾದೀ ಕಲ್ಪನೆ ಇಟ್ಟುಕೊಂಡಿದ್ದೀವೆ. ಅಂತ ಹೇಳುವುದನ್ನು ನಾನು ಹೇಳುತ್ತೇನೆ. ಪ್ರತ್ಯಕ್ಷವಾದ ತೆರಿಗೆಯಾಗಲಿ, ಪರೋಕ್ಷವಾದ ತೆರಿಗೆಯಾಗಲಿ ಇರಬಾರದು ಎಂದು ನಾನು ಹೇಳಲಿಲ್ಲ ಪ್ರತ್ಯಕ್ಷ ವಾದ ತೆರಿಗೆ ಯಾವ ಪ್ರಮಾಣದಲ್ಲಿ ಇರಬೇಕು, ಪರೋಕ್ಷವಾದ ತೆರಿಗೆ ಯಾವ ಪ್ರಮಾಣದಲ್ಲಿ ಇರಬೇಕು ಎಂದು ನಾನು ಹೇಳುತ್ತಾ ಇರುವುದು.

SRI K. PUTTASWAMY: --I have absolutely no quarrel with that principle. ನೇರವಾಗಿ ಡೈರಕ್ಟ್ ಟ್ಯಾಕ್ಸೇಷನ್ ಹಾಕತಕ್ಕಂಥಾ ತೆರಿಗೆ ಯನ್ನು ಯಾವುದು ಬಿಟ್ಟಿದ್ದಾರೆ. ಬಹುಶಃ ನನಗೆ ತಿಳಿದ ಮಟ್ಟಿಗೆ ಎಲ್ಲಾ ಕಡೆಯೂ ಸಾಕಷ್ಟು ತೆರಿಗೆ ಹಾಕಿದ್ದಾರೆ ಸಾಮಾನ್ಯವಾಗಿ ಈ ಸಭೆಯಿಂದ ಹೊರಗಡೆ ಹೋದರೂ ಸಹ ಜನ ಗೊಣಗುತ್ತಾರೆ. ಒಂದು ಕಲ್ಯಾಣಕರವಾದ ಒಂದು ಸಮಾಜವನ್ನು ಸೃಷ್ಟಿಸಬೇಕಾದರೆ, ಅದನ್ನು ಕಟ್ಟಬೇಕಾದರೆ ಒಂದು ವೆಲ್‌ಫೇರ್ ಸ್ಟೇಟ್ ಮಾಡಬೇಕಾದರೆ ಕಂದಾಯ ಹಾಕದೇ ಬೇರೆ ಮಾರ್ಗವೇ ಇಲ್ಲ. ಕಂದಾಯ ಸಾಕಷ್ಟು ಪ್ರಮಾಣದಲ್ಲಿ ಹಾಕಲೇಬೇಕು. ಆದರೆ ಹೊಸ ಹೊಸ ಕಂದಾಯವನ್ನು ಹಾಕುವುದಕ್ಕೆ ಮುಂಚೆ ಸರ್ಕಾರ ತನ್ನದೂ ಒಂದು ಕರ್ತವ್ಯ ಇದೆ; ಎಂದು ತಿಳಿದುಕೊಳ್ಳಬೇಕು. ಅದು ಏನೆಂದರೆ ಏನು ತೆರಿಗೆಯನ್ನು ವಸೂಲ್ಮಾಡುತ್ತಾರೋ ಆ ಹಣ ಸದುಪಯೋಗ ಮಾಡುತ್ತಿದ್ದೇವೆಯೋ ಅನ್ನು ವುದನ್ನು ಸಾರ್ವಜನಿಕರಿಗೆ ಮನದಟ್ಟು ಮಾಡುವುದು ನಮ್ಮ ಕರ್ತವ್ಯ ಎಂದು ಅವರು ತಿಳಿದುಕೊಳ್ಳಬೇಕು ಮತ್ತು ಆ ಬಗ್ಗೆ ಯಾವುದೇ ವಿಧವಾದಂಥ ಹಣ ಪೋಲು ಮಾಡಿದರೂ ಕೂಡ ನಮಗೆ ತೆರಿಗೆ ಹಾಕತಕ್ಕಂಥ ಅಧಿಕಾರ ಕಳೆದು ಹೋಗಿದೆ ಅನ್ನುವುದನ್ನು ತಿಳಿದುಕೊಳ್ಳಬೇಕು. There lies your duty.

ಈ ಹಣ ಎಲ್ಲಾದರೂ ಅಪವ್ಯಯವಾಗುತ್ತಿದ್ದರೆ ಅದನ್ನು ಹೇಳಬೇಕಾದ್ದು ನಿಮ್ಮ ಕರ್ತವ್ಯ. ನಿಮ್ಮ ಪ್ರಶ್ನೆಗೆ ಉತ್ತರವಾಗಿ ಸರ್ಕಾರ ನಿಮಗೂ ಮತ್ತು ಸಾರ್ವಜನಿಕರಿಗೂ ಸಮಾಧಾನವಾಗುವ ರೀತಿಯಲ್ಲಿ ಈ ಹಣ ಯಾವುದೇ ರೀತಿಯಲ್ಲಿ ಪೋಲಾಗುತ್ತಾ ಇಲ್ಲ ಅಂತ ಹೇಳಬೇಕಾದ್ದು ಸರ್ಕಾರದ ಕರ್ತವ್ಯ. ಆದುದರಿಂದ ಈ ತೆರಿಗೆಗಳನ್ನು ಹಾಕುವುದಕ್ಕಿಂತ ಮುಂಚಿತವಾಗಿ ಸರ್ಕಾರದ ಹಣ ಯಾವುದೇ ರೀತಿಯಲ್ಲಿ ಪೋಲಾಗದಂತೆ ನೋಡಿಕೊಳ್ಳುವುದು ಅಗತ್ಯ ಎಂದು ಹೇಳುತ್ತೇನೆ.

ಸ್ವಾಮಿ, ನಮ್ಮ ಸರ್ಕಾರ ಎಷ್ಟೋ ಕಾರ್ಪೋರೇಷನ್‌ಗಳನ್ನು ಮಾಡುತ್ತಿದ್ದಾರೆ. ಸ್ವಯಂ ಆಡಳಿತ ಸಂಸ್ಥೆಗಳನ್ನು ಮಾಡುತ್ತಿದ್ದಾರೆ. ಇದರಲ್ಲಿ ನಾನು ಹೇಳುವುದೂ ಇಷ್ಟೆ. ಈ ಸ್ವಯಂ ಆಡಳಿತ ಸಂಸ್ಥೆಗಳು ಎಲ್ಲಾ ಅವಶ್ಯಕತೆ ಇದೆಯೇ ? ಮತ್ತು ಈ ಸ್ವಯಂ ಆಡಳಿತ ಸಂಸ್ಥೆಗಳನ್ನು ತಾವು ಮಾಡುವಾಗ ತಮ್ಮ ಮನಸ್ಸಿನಲ್ಲಿ ಒಂದು ಸ್ಪಷ್ಟ ಇರಬೇಕು. ಈ ಸಭೆಯ ಅಧಿಕಾರವ್ಯಾಪ್ತಿಯನ್ನು ತಾವು ಮೊಟಕು ಮಾಡುತ್ತಿದ್ದೀರಿ. ಯಾವ ಕೆಲಸಕಾರ್ಯಗಳು ನಿಮ್ಮ ಮುಂದೆ ಬರಬೇಕೋ ನೀವು ಕಾರ್ಪೋರೇಷನ್ ಮಾಡುವುದರ ಮೂಲಕ ಅವನ್ನು ಈ ಸಭೆಯ ವ್ಯಾಪ್ತಿಯಿಂದ ಹೊರಗಡೆ ಇಡುವುದಕ್ಕೆ ಪ್ರಯತ್ನ ಮಾಡುತ್ತೀರಿ. ಈ ಕಾರ್ಪೋರೇಷನ್ನಿಗೆ ಎಷ್ಟು ಹಣ ಖರ್ಚು ಮಾಡಿದೆ, ಏನು ಪ್ರಗತಿ ಸಾಧಿಸಿದೆ ಅದನ್ನು ನೀವೇ ನೇರವಾಗಿ ಮಾಡುವುದಕ್ಕಾಗುವುದಿಲ್ಲವೇ ? ಈ ಸ್ವಯಂ ಆಡಳಿತ ಸಂಸ್ಥೆಗಳಿಂದ ಏನು ಒಂದು ಕಾರ್ಯ ಆಗಬೇಕಾಗಿತ್ತೋ ಆ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಮತ್ತು ಅದರ ಬಗ್ಗೆ ಒಂದು ತೀರ್ಮಾನ ಕೈಗೊಳ್ಳುವುದಕ್ಕೆ ಅವಕಾಶ ಕೊಡಬೇಕು. ನಾನು ಈಗಾಗಲೇ ಹೆಚ್ಚು ಕಾಲ ತೆಗೆದುಕೊಂಡಿದ್ದೇನೆ. ಈ ಬಗ್ಗೆ ಹೆಚ್ಚು ಹೇಳುವುದಕ್ಕೆ ನನ್ನ ಹತ್ತಿರ ಅಂಕಿಅಂಶ ಇಲ್ಲ. ಅನೇಕ ಸ್ವಯಂ ಆಡಳಿತ ಸಂಸ್ಥೆಗಳು ಫಲಪ್ರದವಾಗಿ ಕೆಲಸ ಮಾಡುವುದಕ್ಕೆ ಆಗಿಲ್ಲ. ಹಣ ಮಾತ್ರ ಯಥೇಚ್ಛವಾಗಿ ಖರ್ಚಾಗಿದೆ. ಆ ಖರ್ಚು ಸಭೆಯ ಮುಂದೆ ಬಂದಿದ್ದರೆ ಈ ಸಭೆ ಒಪ್ಪಿಗೆ ದೊರಕುತ್ತಾ ಇರಲಿಲ್ಲ. ಆದುದರಿಂದ ಈ ಒಂದು ಅವಧಿಯಲ್ಲಿ ಬಜೆಟ್ ಆಯವ್ಯಯದ ಮೇಲೆ ಚರ್ಚೆ ಆಗುವಾಗ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಪ್ರತಿಯೊಬ್ಬರೂ ಕೂಡ ಅವರವರ ಅಧಿಕಾರ ವ್ಯಾಪ್ತಿಯೊಳಗಾಗಿದ್ದಾರೆ. ಆದ್ದರಿಂದ ಈ ಸ್ವಯಂ ಆಡಳಿತ ಸಂಸ್ಥೆಗಳ ಕೆಲಸಕಾರ್ಯಗಳ ವಿಚಾರವಾಗಿ ಅವು ಏನು ಪ್ರಗತಿಯನ್ನು ಸಾಧಿಸಿವೆ ಎನ್ನುವ ವಿಚಾರದಲ್ಲಿ ನಮಗೆ ಸ್ಪಷ್ಟವಾದಂಥ ತಿಳುವಳಿಕೆ ಕೊಡಬೇಕು. ಇತ್ತೀಚೆಗೆ ಬೆಳೆದುಬಂದಂಥ ಸಂಪ್ರದಾಯ ನನ್ನ ಮನಸ್ಸಿಗೆ ನೋವನ್ನುಂಟು ಮಾಡಿದೆ. ನಾನು ಅನೇಕ ಮಿತ್ರರಲ್ಲಿ ತಿಳಿಸಿದ್ದೇನೆ. ಮತ್ತು ಮಂತ್ರಿಗಳಲ್ಲೂ ಕೂಡ ತಿಳಿಸಿದ್ದೇನೆ. ರಾಜ್ಯಪಾಲರ ಭಾಷಣದ ಮೇಲೆ ಆದಂಥ ಚರ್ಚೆಯಾಗಲಿ ಮತ್ತು ಬಜೆಟ್ ಭಾಷಣದ ಮೇಲೆ ಆದಂಥ ಚರ್ಚೆಯಾಗಲಿ ಪ್ರತಿಯೊಬ್ಬ ಸದಸ್ಯನೂ ಯಾವಯಾವ ಆಕ್ಷೇಪಗಳನ್ನು ಎತ್ತಿದ್ದಾನೋ

(ಶ್ರೀ ಕೆ. ಪುಟ್ಟಸ್ವಾಮಿ)

ಮತ್ತು ಯಾವಯಾವ ಸಲಹೆಗಳನ್ನು ಮಾಡಿದ್ದಾನೋ ಅದಕ್ಕೆ ಆಯಾಯ ಸಚಿವರು ತಮ್ಮ ಪ್ರತಿಕ್ರಿಯೆಯನ್ನು ತಿಳಿಸಬೇಕಾದ್ದು ಅತ್ಯಂತ ಅಗತ್ಯ ಎಂದು ಹೇಳುತ್ತೇನೆ.

4-30 P. M.

ಇಲ್ಲದಿದ್ದರೆ ಈ ಸಭೆಯು ಕಾರ್ಯಕಲಾಪಗಳಲ್ಲಿ ನಾವು ಏತಕ್ಕೆ ಚರ್ಚೆ ಮಾಡಬೇಕು ? ಮತ್ತು ನಾವು ಏಕೆ ಇಲ್ಲಿ ಭಾಗವಹಿಸಬೇಕು ? ನನ್ನ ಮನಸ್ಸಿನಲ್ಲಿ ಒಂದು ತಪ್ಪು ಕಲ್ಪನೆ ಇರಬಹುದು. ಇದನ್ನು ನಾನು ಸಭೆಯ ಮುಂದೆ ಇಟ್ಟಿರಬಹುದು. ಅದಕ್ಕೆ ನೀವೇನೂ ಸರಿಯಾದ ಉತ್ತರ ಕೊಡುವುದಿಲ್ಲ. ರಾಜ್ಯಪಾಲರ ಭಾಷಣದ ಬಗ್ಗೆ ಇಲ್ಲಿ ನಡೆದಿರುವ ಚರ್ಚೆಗೆ ಮುಖ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುತ್ತಾರೆ. ಅದೇ ರೀತಿ ಬಡ್ಜೆಟ್ಟಿನ ಬಗ್ಗೆ ನಡೆದ ಚರ್ಚೆಗೆ ಫೈನಾನ್ಸ್ ಮಿನಿಸ್ಟರು ಮಾತ್ರ ಉತ್ತರ ಹೇಳಬಹುದು ಇಲ್ಲವೇ ಮುಖ್ಯ ಮಂತ್ರಿಗಳೇ ಹೇಳಬಹುದು. ಇದರಿಂದ ನಮಗೆ ಅಷ್ಟು ಸಮಾಧಾನವಾಗುವುದಿಲ್ಲ. ಇಲ್ಲಿ ಮಂತ್ರಿಗಳು ಹಾಜರಿದ್ದರೆ ಎಷ್ಟೊ ವಿಚಾರಗಳು ಇಲ್ಲಿ ಬರುತ್ತವೆ. ಆಗ ಅವರ ಮನಸ್ಸಿನಲ್ಲೂ ಬರುತ್ತವೆ. ಇದರ ಬಗ್ಗೆ ಅವರೂ ವಿವರಣೆಗಳನ್ನು ಕೊಡಬೇಕು ಮತ್ತು ಈ ಸಭೆಯ ಕಾರ್ಯಕಲಾಪಗಳನ್ನು ಇನ್ನೂ ಆಕರ್ಷಣೀಯವಾಗಿ ಮಾಡಬೇಕಾದರೆ ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಎಲ್ಲ ಮಂತ್ರಿಗಳೂ ಇಲ್ಲಿ ಇರಬೇಕಾದುದು ಅಗತ್ಯ. ಕೊನೆಯ ಪಕ್ಷ 14-15 ಮಂತ್ರಿಗಳಾದರೂ ಇಲ್ಲಿರಬೇಕು. ಇಲ್ಲಿ ಅನೇಕ ವಿಚಾರಗಳು ಗುರುತರವಾದ ಹಾಗೂ ಗಹನವಾದ ಆಕ್ಷೇಪಣೆಗಳು ಆಗಿಂದಾಗ್ಗೆ ಬರುತ್ತಲೇ ಇರುತ್ತವೆ. ಆಗ ಮಂತ್ರಿಗಳಿಗಲ್ಲ ಎಂದು ಹೇಳಬಹುದು ಆ ರೀತಿಯಾಗಬಾರದು. ಕೆಲವು ಮಂತ್ರಿಗಳಾದರೂ ಇದ್ದು ಇಲ್ಲಿ ಉತ್ತರ ಕೊಡಬೇಕು. ಇದು ನಮ್ಮ ಪಕ್ಷದ ದೃಷ್ಟಿಯಿಂದಲೂ ಕೂಡ ಅತ್ಯಾವಶ್ಯಕ ಎಂದು ನಾನು ಭಾವಿಸುತ್ತೇನೆ. ನಿನ್ನೆ ದಿನ ಇಲ್ಲಿ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡಿದರು ಮತ್ತು ಅವರು ಇಲ್ಲಿ ಎಷ್ಟೋ ಗುರುತರವಾದ ಆಕ್ಷೇಪಣೆಗಳನ್ನು ಮಾಡಿರಬಹುದು. ಇವುಗಳ ಬಗ್ಗೆ ಇಂದು ಪತ್ರಿಕೆಯಲ್ಲಿ ಬಂದಿದೆ. ಆದರೆ ಇದಕ್ಕೆ ಉತ್ತರವಾಗಿ ಸರಕಾರದ ಮಂತ್ರಿಗಳು ಇನ್ನು ಮೂರು ನಾಲ್ಕು ದಿನಗಳಾದ ಮೇಲೆ ಹೇಳಿದರೆ ಅದರಿಂದ ಜನರ ಮನಸ್ಸಿನಲ್ಲಿ ಒಂದು ರೀತಿಯಾದ ತಪ್ಪು ಭಾವನೆ ನಿಂತು ಹೋಗುತ್ತದೆ. ಇದಕ್ಕಾಗಿ ಈ ಸಭೆಯ ಕಾರ್ಯಕಲಾಪಗಳು ಪ್ರಯೋಜನವಾಗಬೇಕಾದರೆ ನಮ್ಮ ಮಂತ್ರಿಗಳು ಇಲ್ಲಿ ಹಾಜರಿರಬೇಕು ಮತ್ತು ಈ ಸಮಯದಲ್ಲಿ ಇದ್ದರೆ ಅವರು ಇನ್ನೂ ಹೆಚ್ಚು ಆಸಕ್ತಿ ವಹಿಸಬಹುದು. ಅದೂ ಅಲ್ಲದೆ ಆಗಾಗ್ಗೆ ನಮ್ಮ ವಿರೋಧ ಪಕ್ಷದವರೂ ಕೂಡ ಇಲ್ಲಿ ಸಭೆಯಲ್ಲಿ ಮಂತ್ರಿಗಳೇ ಇಲ್ಲ ಎಂದು ಹೇಳುವ ಆಕ್ಷೇಪಣೆಗಳೂ ಬರುವು

ದಿಲ್ಲ. ಸದಸ್ಯರು ಹೇಳುವ ಮಾತುಗಳಿಗೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ ಎನ್ನುವ ಮಾತುಗಳು ಬರುವುದು ಬೇಡ. ಆದಷ್ಟು ಸರಕಾರಕ್ಕೆ ಸಲಹೆಗಳು ಬಂದಿರುವಾಗ ಇದರ ಬಗ್ಗೆ ಉತ್ತರ ಕೊಡುವಾಗ ಎಲ್ಲ ಮಂತ್ರಿಗಳೂ ತಮಗೆ ಸಂಬಂಧಪಟ್ಟಂತೆ ಇಲ್ಲಿ ಹೇಳಿಕೆಗಳನ್ನು ಕೊಡುವುದು ಒಳ್ಳೆಯದು. ಇದಕ್ಕೆ ಬರಲು ಮಾನ್ಯ ಮಂತ್ರಿಗಳು ಅವರ ಡಿಮ್ಯಾಂಡುಗಳು ಬಂದಾಗ ನಾವು ಉತ್ತರ ಕೊಡುತ್ತೇವೆಂದು ಹೇಳಬಹುದು. ಆದರೆ ಆಗ ಇದರ ಬಗ್ಗೆ ಹೇಳುವ ಮಾತು ಗಳು ಪತ್ರಿಕೆಯಲ್ಲಿ ಬರುವುದಿಲ್ಲ. ಜನರಲ್ಲಿ ಕೂಡ ಸರಿಯಾದ ತಿಳುವಳಿಕೆ ಬರುವುದಿಲ್ಲ. ಇದನ್ನು ಎಲ್ಲ ಮಂತ್ರಿಗಳೂ ಗಮನಿಸಬೇಕು. ಇದನ್ನು ತಾವು ತೀರ್ಮಾನ ಮಾಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ :....ಮಾನ್ಯ ಸದಸ್ಯರು ಹಿರಿಯರು ಮತ್ತು ನಮಗೆ ಪಿತೃ ಸಮಾನವಾದವರು. ಆದುದರಿಂದ ನಾನು ಸದ್ಭಾವನೆಯಿಂದ ಒಂದು ಮಾತನ್ನು ಅವರಲ್ಲಿ ಕೇಳಬೇಕಾಗಿದೆ. ಪದೇ ಪದೇ ತಮ್ಮ ಮಂತ್ರಿ ಮಂಡಲ ಬದಲಾವಣೆಯಾಗುತ್ತಿದ್ದರೆ ರಾಜ್ಯದಲ್ಲಿ ಸುಭದ್ರವಾದ ಸರಕಾರ ಇರಲು ಸಾಧ್ಯವೇ ?

ಶ್ರೀ ಕೆ. ಪುಟ್ಟಸ್ವಾಮಿ :....ಹಾಗೇನಿಲ್ಲ. ನಮ್ಮ ಮಂತ್ರಿಮಂಡಲ ಸಾಕಷ್ಟು ಭದ್ರವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ :....ಮಾನ್ಯ ಸದಸ್ಯರು ಹೇಳುವ ಮಾತು ಗಳನ್ನು ನೋಡಿದರೆ ನಮ್ಮ ಮಂತ್ರಿಮಂಡಲದಲ್ಲಿ ಮೈಸೂರು ಕಡೆಯಿಂದ ಬಂದಿ ರುವವರು ಒಬ್ಬರು ನಿರ್ಗಮಿಸುತ್ತಾರೆಂದು ಭಾಸವಾಗುತ್ತದೆ

ಶ್ರೀ ಕೆ. ಪುಟ್ಟಸ್ವಾಮಿ :....ಮಾನ್ಯ ಅಧ್ಯಕ್ಷರು ಇದಕ್ಕಾಗಿ ಒಂದು ನಿಮಿಷ ಅವಕಾಶ ಕೊಡಬೇಕು. ಮಾನ್ಯ ಶ್ರೀ ದೇವೇಗೌಡರವರ ಮನಸ್ಸಿನಲ್ಲಿ ತಪ್ಪು ಕಲ್ಪನೆ ಬಂದಿರಬಹುದು. ತಾವೇನಾದರೂ ಮೈಸೂರು ಜಿಲ್ಲೆಯಿಂದ ಬಂದಿರುವ ಮಂತ್ರಿಗಳು ಮಂತ್ರಿಮಂಡಲದಿಂದ ನಿರ್ಗಮಿಸುತ್ತಾರೆಂದು ತಿಳಿಯುವುದು ಬರೀ ಭ್ರಮೆ.

ಒಬ್ಬರು ಸದಸ್ಯರು :....ಶ್ರೀ ಚನ್ನಬಸಪ್ಪನವರು ಹೊರಕ್ಕೆ ಬಂದು ಶ್ರೀ ಪುಟ್ಟಸ್ವಾಮಿಗಳು ಮಂತ್ರಿಮಂಡಲಕ್ಕೆ ಹೋಗುತ್ತಾರೆಂದು ಹೇಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ :—ಮಂತ್ರಿಮಂಡಲದ ಪುನರ್‌ರಚನೆ ವಿಚಾರ ಮಾನ್ಯ ಮುಖ್ಯಮಂತ್ರಿಗಳಿಗೆ ಸೇರಿದುದು. ನಿಮಗೆ ಇಷ್ಟು ಭರವಸೆ ಮಾತ್ರ

(ಶ್ರೀ ಕೆ. ಪುಟ್ಟಸ್ವಾಮಿ)

ಕೊಡಬಲ್ಲೆ. ಎಷ್ಟು ಸಾರಿ ಮಂತ್ರಿಮಂಡಲ ಬದಲಾವಣೆಯಾದರೂ ಮೈಸೂರು ಜಿಲ್ಲೆಯಿಂದ ಮಂತ್ರಿಗಳಾಗಿ ಬಂದಿರುವವರು ಯಾರೂ ಹೊರಕ್ಕೆ ಬರುವುದಿಲ್ಲ ಮತ್ತು ಯಾರೂ ಒಳಕ್ಕೆ ಹೋಗುವುದಿಲ್ಲ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಅನಿವಾಳದ ನಂಜಪ್ಪ (ಅರಸೀಕೆರೆ):— ಮಾನ್ಯ ಅಧ್ಯಕ್ಷರೇ, 1975-76 ನೇ ಸಾಲಿನ ಆಯವ್ಯಯ ಪತ್ರ ಕರ್ಣಾಟಕದ ಮೂರು ಕೋಟಿ ಜನರ ಭವಿಷ್ಯವನ್ನು ನಿರ್ಧರಿಸತಕ್ಕ ಒಂದು ಚಿತ್ರವನ್ನು ನಮ್ಮ ಆರ್ಥಿಕ ಸಚಿವರು ನಮ್ಮ ಮುಂದೆ ಇಟ್ಟಿದ್ದಾರೆ. 1975-76ನೇ ಸಾಲಿನಲ್ಲಿ ನಮ್ಮ ಯೋಜನೆ ವೆಚ್ಚ ಸುಮಾರು 142 ಕೋಟಿ ರೂಪಾಯಿ ಮತ್ತು ಕೇಂದ್ರ ಸರಕಾರದಿಂದ ನಿರೀಕ್ಷೆಯಲ್ಲಿ ಸುಮಾರು 13 ಕೋಟಿ, ಹೀಗೆ ಒಟ್ಟು 155 ಕೋಟಿ ರೂಪಾಯಿಗಳ ಆಯವ್ಯಯದ ವೆಚ್ಚವನ್ನು ಇಲ್ಲಿಟ್ಟಿದ್ದಾರೆ. ಪಂಚವಾರ್ಷಿಕ ಯೋಜನೆಗಳೆನೋ ಅನೇಕ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿವೆ. ಈ ಯೋಜನೆಗಳ ಪರಿಣಾಮ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ ಸರಕಾರದವರು ಗದ್ದೆಗೆ ಹೋಗತಕ್ಕ ನೀರನ್ನು ಕೊಡುತ್ತಾರೆ. ನೀರು ಗದ್ದೆಗೆ ಪೂರ್ತಿ ಹೋದರೆ ಫಸಲು ಚೆನ್ನಾಗಿ ಬರುತ್ತದೆ. ಆದರೆ ಗದ್ದೆಗೆ ಹೋಗುವ ನೀರು ಮಧ್ಯದಲ್ಲೇ ಬತ್ತಿ ಹೋದರೆ ಯಾವ ಫಸಲೂ ಆಗವುದಿಲ್ಲ. ಆ ರೀತಿಯಾಗಿ ನಮ್ಮ ಯೋಜನೆಗಳೂ ಆಗುತ್ತಿವೆ. ನೀರಾವರಿ ಯೋಜನೆಗಳಿಂದ ಸಾಕಷ್ಟು ಪ್ರತಿಫಲ ದೊರೆಯುತ್ತಿಲ್ಲ. ಸಾಮಾನ್ಯ ಜನರಿಗೆ ಇದರಿಂದ ಪೂರ್ಣ ಫಲ ದೊರಕುತ್ತಿಲ್ಲ ಎಂದು ಬಹು ವಿಷಾದದಿಂದ ಹೇಳಬೇಕಾಗಿದೆ. ಈ ದೇಶದಲ್ಲಿ ನೀರಾವರಿ ಯೋಜನೆಗಳಿಗಾಗಿ ಸುಮಾರು 79 ಕೋಟಿ ರೂಪಾಯಿಗಳಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೆ. ಇದರಲ್ಲಿ ನೀರಾವರಿ ಯೋಜನೆಗಳಿಗಾಗಿ ಸುಮಾರು 38 ಕೋಟಿ ರೂಪಾಯಿ ಹೋದರೆ ಉಳಿಯುವುದು ಸುಮಾರು 41 ಕೋಟಿ ರೂಪಾಯಿ. ಕಾಳಿ ಯೋಜನೆಗೆ ಇದರಲ್ಲಿ 24 ಕೋಟಿ ಮತ್ತು ಉಳಿಯುವುದು 17 ಕೋಟಿ ರೂಪಾಯಿ ವಿದ್ಯುಚ್ಛಕ್ತಿಗಾಗಿ ಬರುತ್ತದೆ. ಇದರಿಂದ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಎಲ್ಲ ಭಾಗಗಳಿಗೂ ಪವರು ಕೊಡಲಾಗದೆ ಅದು ಇನ್ನೂ ಕತ್ತಲಲ್ಲೇ ಇರುವಂತಾಗಿದೆ. ಕೇವಲ 17 ಕೋಟಿ ರೂಪಾಯಿಯಲ್ಲಿ ಎಲ್ಲ ಹಳ್ಳಿಗಳಿಗೂ ಪವರನ್ನು ಕೊಡಲು ಸಾಧ್ಯವಿಲ್ಲ. ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತಾಡುವಾಗ ಹೇಳಿದ್ದೆ ನಮ್ಮ ಯೋಜನ ಕೆಲಸಗಳು ಆನೆಯಂತೆ ಇದ್ದರೂ ಆಮೆಯಂತೆ ಇದರ ಕೆಲಸಗಳಾಗುತ್ತಿವೆ ಎಂದು. ಹಾಗೆ ಇಂದು ನಮ್ಮ ನೀರಾವರಿ ಯೋಜನೆಗಳು ಆಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿರುವ

ಜನರಿಗೆ ತಕ್ಕ ಫಲ ದೊರೆಯುತ್ತಿಲ್ಲ. 12 ಕೋಟಿ ರೂಪಾಯಿಯಷ್ಟು ಹಣವನ್ನು ವಿತರಣ ಮಾಡಿದರೆ ಏನೂ ಕೆಲಸಗಳಾಗುವುದಿಲ್ಲ. ಇದು ತೀರಾ ಕಡಿಮೆ ಪ್ರಮಾಣ ಗ್ರಾಮಾಂತರ ಪ್ರದೇಶಗಳಿಗೆ ಇದರಿಂದ ಕೆಲಸ ಮಾಡಲು ತುಂಬಾ ಕಷ್ಟವಾಗುತ್ತದೆ. ಯೋಜನೆ ಕೆಲಸಗಳು ಕ್ರಮಬದ್ಧವಾಗಿ ನಡೆಯುತ್ತಿಲ್ಲ ಆದಷ್ಟು ನಮ್ಮ ಸರಕಾರ ಹಳ್ಳಿಗಾಡಿನ ಜನಕ್ಕೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ. ಇನ್ನು ಕೃಷಿ ಬಗ್ಗೆ ಹೇಳುವಾಗ ರೈತರಿಗೆ ಸಕಾಲದಲ್ಲಿ ಸಾಲ ಕೊಟ್ಟು ಸಹಾಯ ಮಾಡಿದರೆ ಬೆಳೆ ಮಾಡಬಹುದು. ಮತ್ತು ಸುಮಾರು ನಾನೂರು ಸಹಕಾರ ಸಂಘಗಳಿವೆ ಎಂದು ಹೇಳುತ್ತಾರೆ. ಸಹಕಾರ ಇಲಾಖೆಯವರು ಅಲ್ಲಲ್ಲಿ ಸರ್ವಿಸ್ ಕೋ ಅಪರೇಟೀವ್ ಸಂಘಗಳೆಂದು ಮಾಡಿ ಇದರ ಮೂಲಕ ರೈತರಿಗೆ ಅನುಕೂಲ ಮಾಡುತ್ತಾರೆಂದು ಹೇಳುತ್ತಾರೆ. ಎಷ್ಟೋ ಕಡೆ ಈ ಸಂಘಗಳು ರಿಜಿಸ್ಟರೇ ಆಗಿರುವುದಿಲ್ಲ.

ಈಗ ಸೇವಾ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕಾದರೆ ಕನಿಷ್ಟ ಪಕ್ಷ 10 ಸಾವಿರ ಷೇರು ಬಂಡವಾಳವನ್ನು ಕೂಡಿಸಬೇಕು ಎಂದು ನಿಯಮವನ್ನು ಹೇಳುತ್ತಿದ್ದಾರೆ. ಹೀಗೆ 10 ಸಾವಿರ ರೂಪಾಯಿಗಳನ್ನು ಶೇಖರಣೆ ಮಾಡಬೇಕು ಎಂದು ಕಡ್ಡಾಯವನ್ನು ಹಾಕುವುದಾದರೆ ಗ್ರಾಮಾಂತರ ಪ್ರದೇಶದಲ್ಲಿ ಸೇವಾ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಈಗ ಬೆಳೆಗೆ ಹಣವನ್ನು ಕೊಡತಕ್ಕ 400 ಸೇವಾ ಕೃಷಿ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕು ಎಂದು ಏನು ಹೇಳುತ್ತಾರೆ ಅದು ಆಗುವುದಿಲ್ಲ. ನನಗೆ ಗೊತ್ತಿರುವ ಪ್ರಕಾರ ಹೇಳುವುದಾದರೆ ಹಳ್ಳಿಯಲ್ಲಿ ಎಲ್ಲೆಲ್ಲಿ ಯಾವ ಯಾವ ಪಂಚಾಯಿತಿ ಕೇಂದ್ರದಲ್ಲಿ ಸೇವಾ ಸಹಕಾರ ಸಂಘಗಳು ಇಲ್ಲವೋ ಅಲ್ಲಿ ಸ್ವಲ್ಪ ಮಟ್ಟಿಗೆ ರಿಯಾಯಿತಿಯನ್ನು ತೋರಿಸುವುದಾದರೆ 5 ಸಾವಿರ ರೂಪಾಯಿಗಳ ಷೇರು ಹಣವನ್ನು ಶೇಖರಣೆ ಮಾಡಿ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಬಾಕಿ ರೈತರಿಗೂ ಸಹಾಯ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ

ಕೃಷಿಗೆ ಬಹಳ ಮುಖ್ಯವಾಗಿ ಗೊಬ್ಬರವನ್ನು ಸಕಾಲದಲ್ಲಿ ಒದಗಿಸಬೇಕು. ಈಗ ಗೊಬ್ಬರ ಸಾಕಷ್ಟು ದಾಸ್ತಾನು ಇದೆ ಎಂದು ವಿವರಣೆ ಕೊಡುತ್ತಾರೆ. ಆದರೆ ಸಕಾಲಕ್ಕೆ ಯಾವಾಗ ಬೇಕೋ ಆಗ ಸಿಕ್ಕುವುದಿಲ್ಲ. ಗೊಬ್ಬರ ಬೇಡದೆ ಇದ್ದಾಗ ಸಾಕಷ್ಟು ದಾಸ್ತಾನು ಇರುತ್ತದೆ ಇದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಸರಿಯಾಗಿ ರೈತನಿಗೆ ಸಕಾಲಕ್ಕೆ ಗೊಬ್ಬರವನ್ನು ಸಾಕಷ್ಟು ಒದಗಿಸುವಂತಹ ವ್ಯವಸ್ಥೆ ಮಾಡಬೇಕು. ಆ ರೀತಿ ರೈತನಿಗೆ ಸಕಾಲಕ್ಕೆ ಸಾಕಷ್ಟು ಗೊಬ್ಬರವನ್ನು ವಿತರಣೆ ಮಾಡದಿದ್ದರೆ ವ್ಯವಸಾಯ ಅಷ್ಟೊಂದು ಉತ್ತಮ ಮಟ್ಟಕ್ಕೆ ಬರುವುದಿಲ್ಲ. ಇದರ ಜೊತೆಗೆ ಬೆಳೆ ಸಾಲಕ್ಕೆ ಕೊಡತಕ್ಕ ಬಡ್ಡಿಯು

(ಶ್ರೀ ಅನಿಯೂಳದ ನಂಜಪ್ಪ)

ದರವನ್ನು ಕಳೆದ ವರ್ಷ ಜಾಸ್ತಿ ಮಾಡಿದ್ದಾರೆ. ಹಿಂದೆ ಖಾಸಗೀ ಲೇವಾದೇವಿಗಳವರು ಎಷ್ಟು ಬಡ್ಡಿಯನ್ನು ವಿಧಿಸುತ್ತಿದ್ದರೋ ಆ ಮಟ್ಟಕ್ಕೆ ಸಹಕಾರಿ ಸಂಘಗಳ ಬಡ್ಡಿ ದರವನ್ನು ಒಂದು ಹೆಚ್ಚಿನ ಬಡ್ಡಿದರವನ್ನು ನಿಗದಿ ಮಾಡಿದ್ದಾರೆ. ನಿಜವಾಗಿಯೂ ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಬೇರೆ ಯೋಜನೆಗಳಿಗೆ ಬೇರೆ ಕ್ಷೇತ್ರದಲ್ಲಿ ಯಾವರೀತಿ ಸಬ್ಸಿಡಿ ಕೊಡುತ್ತಾರೆಯೋ ಅದೇ ರೀತಿ ರೈತನಿಗೂ ಸರ್ಕಾರದವರು ಸಬ್ಸಿಡಿ ಕೊಟ್ಟು ರೈತನಿಗೆ ಬಡ್ಡಿ ದರವನ್ನು ಕಡಿಮೆ ಮಾಡುವುದರ ಮುಖಾಂತರ ರೈತರಿಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಕೃಷಿ ಮಾರುಕಟ್ಟೆಗಳ ವ್ಯವಸ್ಥೆ ಉತ್ತಮವಾಗಿಲ್ಲ. ವರ್ಲ್ಡ್ ಬ್ಯಾಂಕಿನವರು ಹಣಸಹಾಯವನ್ನು ಕೊಡುತ್ತಾರೆ. ಕೃಷಿ ಮಾರುಕಟ್ಟೆಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ 1952ನೇ ಇಸವಿಯಿಂದ ಕರ್ನಾಟಕ ರಾಜ್ಯದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಯೋಜನೆ ಜಾರಿಗೆ ಬಂತು. ಈಗಲೂ ಕೂಡ ಅನೇಕ ಮಾರುಕಟ್ಟೆಗಳಲ್ಲಿ ಷೆಲ್ಟರುಗಳು ಇಲ್ಲ. ರೈತರು ಬೆಳೆದಂಥ ವ್ಯವಸಾಯ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದರೂ ಕೂಡ ಅವುಗಳನ್ನು ಇಡುವುದಕ್ಕೆ ಸ್ಥಳವಿಲ್ಲ. ಅವುಗಳನ್ನು ಬಯಲಿನಲ್ಲಿ ಹಾಕುವುದರಿಂದ ಮಳೆ ಬಂದು ಬಿಸಿಲಿನಲ್ಲಿ ಒಣಗಿ ಹೋಗಿ ತೊಂದರೆಯಾಗುತ್ತದೆ. ಆದ್ದರಿಂದ ಮಾರುಕಟ್ಟೆಗಳಲ್ಲಿ ಕನಿಷ್ಟಪಕ್ಷ ಷೆಲ್ಟರುಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅರಿಸೀಕೆರೆಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಎರಡು ಪ್ಲಾಟ್‌ಫಾರಂ ಗಳು ಇವೆ. ಸ್ಥಳ ಸಾಕಾಗುವುದಿಲ್ಲ. ರೈತರು ಮಾರುಕಟ್ಟೆಗೆ ತಂದಂತಹ ವ್ಯವಸಾಯೋತ್ಪನ್ನಗಳನ್ನು ಇಡುವುದಕ್ಕೆ ಷೆಲ್ಟರು ಇಲ್ಲದೆ ಅದೆಲ್ಲವೂ ಮಳೆಯಲ್ಲಿ ನೆನೆದು ಹೋಗುತ್ತದೆ ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತದೆ. ರೈತ ಕಷ್ಟಪಟ್ಟು ಬೆಳೆದು ಮಾರುಕಟ್ಟೆಗೆ ತಂದಂತಹ ಫಸಲು, ಪದಾರ್ಥಗಳು ಮಳೆಯಲ್ಲಿ ನೆನೆದು ಅವರಿಗೆ ನಷ್ಟವಾಗದ ರೀತಿಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಏನು ಮಾಡದಿದ್ದರೂ ಕೂಡ ಷೆಲ್ಟರನ್ನು ಕಟ್ಟಿಸಿ ಕೊಟ್ಟು ರೈತನು ಮಾರ್ಕೆಟ್ಟಿಗೆ ತಂದಂತಹ ಮಾಲಿಗೆ ರಕ್ಷಣೆಯನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ತೋಟಗಾರಿಕೆ ಬಹಳ ಮುಖ್ಯವಾದ ಯೋಜನೆ. ಸಾಮಾನ್ಯವಾಗಿ ತೋಟಗಾರಿಕೆಯನ್ನು ಆರಿಸಿದ ಕ್ಷೇತ್ರಗಳಲ್ಲಿ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಇದನ್ನು ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿಯೂ ತೋಟಗಾರಿಕೆಯನ್ನು ಮಾಡುವುದಾದರೆ 500 ಎಕರೆ ಜಮೀನನ್ನು ತೋಟಗಾರಿಕೆ ಇಲಾಖೆ ವಹಿಸಿಕೊಳ್ಳುವುದರ

ಮೂಲಕ ವಿವಿಧೋದ್ದೇಶದ ಬೆಳೆಯನ್ನು ತೆಗೆಯುವುದಾದರೆ ಅದನ್ನು ರೈತರು ಅನುಸರಿಸುವುದಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಸರ್ಕಾರದವರು ತೋಟ ಗಾರಿಕೆ ಕಡೆಗೆ ಹೆಚ್ಚಿನ ಗಮನವನ್ನು ಹರಿಸಬೇಕು.

ಬರಗಾಲ ಪೀಡಿತ ಪ್ರದೇಶಗಳ ಬಗ್ಗೆ ಸರ್ಕಾರದವರು ಪ್ರಸ್ತಾಪ ಮಾಡಿದ್ದಾರೆ. ಸಾಮಾನ್ಯವಾಗಿ ಬರಗಾಲ ಕರ್ನಾಟಕದಲ್ಲಿ ಆಗಿಂದಾಗ್ಗೆ ಪ್ರತಿವರ್ಷ ಬರುತ್ತದೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ ಎಲ್ಲಿ 20-24 ಇಂಚು ಮಳೆ ಸರಾಸರಿ ಬರುತ್ತದೆ, ಆ ಪ್ರದೇಶದಲ್ಲಿ ಬರಗಾಲ ಬಂದೇ ಬರುತ್ತದೆ. ಈ ದೃಷ್ಟಿಯಿಂದ ಅವೆಲ್ಲ ವನ್ನೂ ಸರ್ವೆ ಮಾಡಿಸಿ ಆ ಪ್ರದೇಶಗಳಿಗೆ ಒಂದು ವಿಶಿಷ್ಟವಾದ ಗಮನ ಕೊಡು ವುದರ ಮೂಲಕ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿ ಆ ಪ್ರದೇಶಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯದ ಹೊರತು ಬರಗಾಲ ಬಂದಾಗ 4 ಕೋಟಿ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆಗಳನ್ನು ಮಾಡಿಸಿ, ರಸ್ತೆಗಳಿಗೆ ಮಣ್ಣು ಹಾಕಿಸುವುದರ ಮುಖಾಂತರ ಪರಿಹಾರವನ್ನು ಒದಗಿಸುವಂತಹ ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದರಿಂದ ಹಣ ವ್ಯಯವಾಗುತ್ತದೆ. ಅದರಿಂದ ಆ ಪ್ರದೇಶದ ಜನಗಳಿಗೆ ಹೆಚ್ಚಿನ ಪ್ರತಿಫಲ ದೊರೆಯುವುದಿಲ್ಲ. ಆದ್ದರಿಂದ ಆ ಪ್ರದೇಶಗಳಿಗೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿದು ಒಂದು ಯೋಜನೆಯನ್ನು ಕೈಗೊಂಡು ಆ ಜನಗಳಿಗೆ ಅನುಕೂಲ ಮಾಡಿ ಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಭೂಸುಧಾರಣೆಯ ಬಗ್ಗೆ ಹೇಳುವುದಾದರೆ ಈ ಭೂಸುಧಾರಣೆ ನಿಜ ವಾಗಿಯೂ ಕೂಡ ಕೆಲವು ವರ್ಗಕ್ಕೆ ಒಂದು ಶಾಪವಾಗಿ ಪರಿಣಮಿಸಿದೆ. ವಿಧವೆ ಯವರು, ಮೈನರ್ ಮಕ್ಕಳು ಮತ್ತು ಅಂಗವಿಕಲರು ಭೂಮಿಯನ್ನು ಗೇಣಿಗೆ ಕೊಡುವುದಕ್ಕೆ ಅವಕಾಶ ಮಾಡುವ ದೃಷ್ಟಿಯಿಂದ ಇದನ್ನು ಪುನರ್‌ವಿಮರ್ಶೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ, ನಗರ ಪ್ರದೇಶದಲ್ಲಿ 4-5 ಎಕರೆ ಇಟ್ಟುಕೊಂಡಿರತಕ್ಕ ಸಂಸಾರಗಳು ಇರುತ್ತವೆ. ದುರ್ದೈವದಿಂದ ಗಂಡ ತೀರಿ ಹೋದರೆ, ಮನೆಯಲ್ಲಿ ಸಣ್ಣ ಸಣ್ಣ ಮಕ್ಕಳು ಇರುವುದಾದರೆ ಅಂಥಾ ಭೂಮಿ ಯನ್ನು ಗೇಣಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಈ ಕಾನೂನಿನಲ್ಲಿ ಅಳವಡಿಸಿ ದ್ದಾರೆ. ಅಂಥವರ ಭೂಮಿಗೆ ಒಂದೇ ಗಂಟಿನಲ್ಲಿ ಪರಿಹಾರವನ್ನು ಕೊಟ್ಟರೆ ಅವರು ಅದನ್ನು ಬ್ಯಾಂಕಿನಲ್ಲಿ ಇಟ್ಟು ಅದರಿಂದ ಬರುವ ಬಡ್ಡಿಯಿಂದ ಜೀವನ ನಡೆಸಬಹುದು ಎನ್ನುವ ವಾದ ಇರಬಹುದು. ಅದರಿಂದ ಅವರಿಗೆ ಪ್ರತಿಫಲ ದೊರೆಯುವುದಿಲ್ಲ. ಸಾಮಾನ್ಯವಾಗಿ ಯಾರಿಗಾದರೂ ಹಣ ಸಿಕ್ಕಿದರೆ ಒಂದು ವರ್ಷದಲ್ಲೋ ಎರಡು ವರ್ಷದಲ್ಲೋ ಎಲ್ಲಾ ಹಣವನ್ನು ಖರ್ಚು ಮಾಡಿ ಹಣವೂ

(ಶ್ರೀ ಅನಿವಾಳದ ನಂಜಪ್ಪ)

ಇಲ್ಲದೆ ಭೂಮಿಯೂ ಇಲ್ಲದೆ ಅವರು ಬಿಕ್ಷೆಗೆ ಹೋಗತಕ್ಕಂಥಾ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೆಯ ಪಕ್ಷ ವಿಧವೆಯುವರು, ಅಂಗವಿಕಲರು, ಮೈನರ್ ಮಕ್ಕಳು ಇಂಥವರು ಜಮೀನನ್ನು ಗೇಣಿಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ದೃಷ್ಟಿಯಿಂದ ಭೂ ಸುಧಾರಣಾ ಕಾನೂನಿನಲ್ಲಿ ಅವರಿಗೆ ವಿನಾಯ್ತಿ ಕೊಡಬೇಕು. ಆದ ಕಾರಣ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಉದ್ಯಮಗಳ ಬಗ್ಗೆ ಹೇಳುವುದಾದರೆ ಈ ಯೋಜನೆಯೇನೋ ಬಹಳ ಶ್ರೇಷ್ಠವಾದ ಯೋಜನೆ. ಆದರೆ ಈ ಉದ್ಯಮಗಳು ವ್ಯಾಪಾರ ಮನೋಭಾವನೆ ಯಿಂದ ಕೂಡಿದೆ. ಶ್ರೀಮಂತರ ಮಕ್ಕಳಿಗೆ ಬಹಳ ಸುಲಭವಾಗಿ ಸರ್ಕಾರಿ ನೌಕರಿ ಸಿಕ್ಕುತ್ತದೆ ಆದರೆ ಬಡವರ ಮಕ್ಕಳನ್ನು ಕೇಳುವವರು ಇಲ್ಲ. ಹೀಗಿರು ವಾಗ ನಾವು ಅದನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡದಿದ್ದರೆ ಪಾಪದ ಕೆಲಸ ಮಾಡಿದಂತಾಗುತ್ತದೆ. ಇವೊತ್ತು ಅನೇಕ ಕೆಲಸಗಳನ್ನು ದುಡ್ಡಿಗೆ ಕೊಂಡು ಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಯಾವುದೇ ಒಂದು ಕೆಲಸವಾಗಲೀ ದುಡ್ಡು ಕೊಟ್ಟರೆ ಕೆಲಸವಾಗುತ್ತದೆ. ಇವೊತ್ತು 15 ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಬ್ ಇನ್ಸ್‌ಪೆಕ್ಟರ್ ಕೆಲಸವಾಗುತ್ತದೆ, 25 ಸಾವಿರ ರೂಪಾಯಿಗಳನ್ನು ಕೊಟ್ಟರೆ ಡಾಕ್ಟರ್ ಕೆಲಸ ಸಿಕ್ಕುತ್ತದೆ 50 ಸಾವಿರ ರೂಪಾಯಿಗಳನ್ನು ಕೊಟ್ಟರೆ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಆಗಬಹುದು. ಇಂಥಾ ಶಬ್ದಗಳನ್ನು ಕೇಳಿದರೆ ನಮಗೆ ಶೋಚನೀಯವಾಗುತ್ತದೆ. ಇಂಥಾ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಬಂದಿದೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ನಮ್ಮದು ರಾಮರಾಜ್ಯ ವಾಗುತ್ತದೆ. ಎಲ್ಲರಿಗೂ ಸುಖ ಸಂತೋಷ ದೊರೆಯುತ್ತದೆ ಎಂದು ನಾವು ಆಶೆಯನ್ನು ಇಟ್ಟುಕೊಂಡಿದ್ದೆವು. ಬಡವರ ಮಕ್ಕಳಿಗೆ ವಿದ್ಯಾವಂತರಿಗೆ ಕೆಲಸ ಸಿಕ್ಕುವುದಿಲ್ಲ. ಶ್ರೀಮಂತರ ಮಕ್ಕಳು ಕೆಲಸಗಳನ್ನು ಕೊಂಡುಕೊಳ್ಳುತ್ತಾರೆ. ಇಂಥಾ ಒಂದು ಪರಿಸ್ಥಿತಿ ಆಗಬಾರದು. ಪ್ರಾಮಾಣಿಕ ರೀತಿಯಲ್ಲಿ ಉದ್ಯೋಗ ಎಲ್ಲರಿಗೂ ದೊರೆಯುವ ಯೋಜನೆ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತೇನೆ.

ಗ್ರಾಮಾಂತರ ರಸ್ತೆಗಳ ಬಗ್ಗೆ ಹೇಳುವುದಾದರೆ ಗ್ರಾಮಾಂತರ ಪ್ರದೇಶದ ರಸ್ತೆಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಇದಕ್ಕೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು.

ಶಿಕ್ಷಣಕ್ಕಾಗಿ 92.76 ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಆದರೂ ಸಹ ಗ್ರಾಮಾಂತರ ಪ್ರದೇಶದ ವಿದ್ಯಾಭ್ಯಾಸದ ಸ್ಥಿತಿ ಬಹಳ ಶೋಚನೀಯವಾಗಿದೆ. ಪ್ರಾಥಮಿಕ ಪಾಠಶಾಲೆಗಳಲ್ಲಿ ನಡೆಯುತಕ್ಕ ವಿದ್ಯಾಭ್ಯಾಸ ಯೋಜನೆ ಸಮರ್ಪಕವಾಗಿ ನಡೆಯುತ್ತಿಲ್ಲ ಉಪಾಧ್ಯಾಯರು ಮತ್ತು ಪಾಠಶಾಲೆಗಳನ್ನು ನೋಡಿಕೊಳ್ಳುವವರಲ್ಲಿ ದಕ್ಷತೆ ಇಲ್ಲ ಉಪಾಧ್ಯಾಯರು ಪಾಠಶಾಲೆಗಳಿಗೆ ಸರಿಯಾಗಿ ಹೋಗುವುದಿಲ್ಲ, ಪಾಠಪ್ರವಚನಗಳು ಆಗುವುದಿಲ್ಲ. ಆದ್ದರಿಂದ ವಿದ್ಯಾಭ್ಯಾಸ ಇಲಾಖೆ ಸ್ವಲ್ಪ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡದಿದ್ದರೆ 92 ಕೋಟಿ ರೂಪಾಯಿಗಳನ್ನು ನೀರಿಗೆ ಹಾಕಿದಂತಾಗುತ್ತದೆ. ಕನಿಷ್ಠ ಪಕ್ಷ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವಿದ್ಯಾ ಸಂಸ್ಥೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ನನ್ನ ಮಾನ್ಯ ಸ್ನೇಹಿತರು ಅನೇಕರು ಈಗಾಗಲೇ ಆಸ್ಪತ್ರೆಗಳಲ್ಲಿ ಔಷಧಿಗಳ ಹಂಚಿಕೆ ವಿಷಯವಾಗಿ ಬಹಳವಾಗಿ ಹೇಳಿದ್ದಾರೆ. ಈ ವಿಚಾರವನ್ನು ನಾನು ಹಿಂದೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಮಾಡುವಾಗ ತಿಳಿಸಿದ್ದೇನೆ ಅದರೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಪರಿಣತರಾದ ವೈದ್ಯರು ದೊರೆಯುವುದು ದುರ್ಲಭವಾಗಿದೆ. ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಕ್ಕೆ ಅನೇಕ ಡಾಕ್ಟರುಗಳು ಹೋಗುವುದಕ್ಕೆ ಇಷ್ಟಪಡುತ್ತಾ ಇಲ್ಲ. ಆದ್ದರಿಂದ ಪರಿಣತರಾದ ವೈದ್ಯರುಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿಯೇ ನೆಲೆಸುವುದಕ್ಕೆ ಸೂಕ್ತವಾದ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಅಲ್ಲಿಯೂ ಉತ್ತಮವಾದಂಥ ಔಷಧಿಗಳನ್ನು ದೊರಕಿಸುವ ಪ್ರಯತ್ನ ಸರ್ಕಾರ ಮಾಡಬೇಕು. ಅಲ್ಲಿನ ಆಸ್ಪತ್ರೆಗಳಿಗೆ ಸಕಾಲದಲ್ಲಿ ಔಷಧಿಗಳನ್ನು ಸರಬರಾಜು ಮಾಡಬೇಕು. ಏಕೆಂದರೆ ಆ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ತೀವ್ರವಾದ ತೊಂದರೆ ಇದೆ. ಅದನ್ನು ಹೋಗಲಾಡಿಸಲು ಸರ್ಕಾರ ಹೆಚ್ಚು ಲಕ್ಷ್ಯ ಕೊಡಬೇಕು.

5-00 P. M.

ಶ್ರೀ ಎನ್. ರಾಚಯ್ಯ :—ಅವರು ಡಿಗ್ರಿಗಳನ್ನು ಪಡೆಯುವುದಕ್ಕೆ ಮುಂಚಿತವಾಗಿಯೇ ಡಿಗ್ರಿ ಪಡೆದಾದಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ನೆಲೆಸಿ ಅಲ್ಲಿಯೇ ಕಡ್ಡಾಯವಾಗಿ ಕೆಲಸ ಮಾಡಬೇಕೆಂಬುದಾಗಿ ವ್ಯವಸ್ಥೆ ಮಾಡಿದರೆ, ಆದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಅನಿವಾಳದ ನಂಜಪ್ಪ.—ಅದು ಬಹಳ ಒಳ್ಳೆಯದು. ಅದರ ಜೊತೆಗೆ ಅವರಿಗೆ ಆಕರ್ಷಣೀಯವಾಗುವಂತೆ ತಿಂಗಳಿಗೆ 50 ಅಥವಾ 100 ರೂಪಾಯಿಗಳನ್ನು ಇನ್‌ಸೆಂಟಿವ್ ರೂಪವಾಗಿ ಕೊಡುವ ವ್ಯವಸ್ಥೆಯನ್ನೂ ಸಹ ಮಾಡಬೇಕು.

ಇನ್ನೊಂದು ವಿಷಯ. ಎಲ್ಲಕ್ಕಿಂತಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ನೌಕರರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು. ನಗರ ಪ್ರದೇಶಗಳಲ್ಲಿ ಬಾಡಿಗೆ ಜಾಸ್ತಿ ಕೊಟ್ಟರೆ ಮನೆಗಳು ಸಿಗುತ್ತವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಹೆಚ್ಚಿಗೆ ಬಾಡಿಗೆ ಕೊಡುತ್ತೇವೆಂದರೂ ಮನೆಗಳು ಸಿಗುತ್ತಾ ಇಲ್ಲ. ಇದಕ್ಕಾಗಿ ಅನೇಕ ಡಾಕ್ಟರುಗಳು ಅಲ್ಲಿಗೆ ಹೋಗುತ್ತಾ ಇಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಸೌಕರ್ಯಗಳನ್ನು ಹೆಚ್ಚಿಗೆ ಕೊಡುವ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು.

ಇನ್ನು ಸಣ್ಣ ನೀರಾವರಿ ಯೋಜನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಲು ಹೆಚ್ಚು ನಿಗಾ ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡದೇ ಇದ್ದರೂ ಸಣ್ಣ ನೀರಾವರಿಯ ಕೃಷಿ ಯೋಜನೆಗಳನ್ನು ಕೈಗೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಕೆರೆಗಳ ನಿರ್ಮಾಣ, ಹೂಳು ತುಂಬಿಕೊಂಡಿರತಕ್ಕ ಕೆರೆಗಳ ರಿಪೇರಿ ಇತ್ಯಾದಿ ಕಾರ್ಯಗಳಿಗಾಗಿ 7.5 ಕೋಟಿ ರೂಪಾಯಿಗಳನ್ನು ಸರ್ಕಾರದವರು ಬಜೆಟ್ಟಿನಲ್ಲಿ ಈ ವರ್ಷ ಅಳವಡಿಸಿದ್ದಾರೆ. ಇದು ಏನೇನು ಸಾಕಾಗುವುದಿಲ್ಲ ಇದು ಬಹಳ ಮುಖ್ಯವಾದಂಥ ವಿಷಯ. ಗ್ರಾಮಾಂತರ ಪ್ರದೇಶಗಳಲ್ಲಿ ನೀರಾವರಿ ಕೆಲಸಗಳಿಗೆ ಹೆಚ್ಚು ಹಣವನ್ನು ಉಪಯೋಗಿಸಿ ಅಲ್ಲಿನ ಜನರಿಗೆ ಅನುಕೂಲ ಮಾಡಬೇಕು.

ಇನ್ನು ಕುಡಿಯುವ ನೀರಿನ ವಿಷಯ ತೆಗೆದುಕೊಂಡರೆ, ಈ ವಿಚಾರ ಬಹಳ ದಿವಸಗಳಿಂದಲೂ ಚರ್ಚೆಯಾಗುತ್ತಲೇ ಇದೆ. ಕುಡಿಯುವ ನೀರಿನ ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿಲ್ಲ. ಬೋರ್‌ವೆಲ್‌ಗಳನ್ನೂ ಮತ್ತು ರಿಗ್‌ಗಳನ್ನೂ ಗ್ರಾಮಾಂತರ ಪ್ರದೇಶಗಳಿಗೆ ಸರಬರಾಜುಮಾಡಿ ಬಾವಿಗಳನ್ನು ತೆಗೆಯುತ್ತೇವೆಂದು ಹೇಳಿದರು. ಈಗಾಗಲೇ ಸೇಕಡ 70ರಷ್ಟು ರಿಗ್‌ಗಳು ಫೈಲ್ಯೂರ್, ಆಗಿವೆ. ಕೇವಲ ಒಂದೆರಡು ವಾರಗಳಲ್ಲಿಯೇ ಅವು ಮುರಿದು ಹೋಗುತ್ತಿವೆ. ಹೀಗಾಗಿ ಲಕ್ಷಾಂತರ ರೂಪಾಯಿಗಳನ್ನು ಇವುಗಳಿಗಾಗಿ ಖರ್ಚು ಮಾಡಿದರೂ ಕೂಡ ಕುಡಿಯುವ ನೀರನ್ನು ಪಡೆಯಲು ಬಹಳ ತೊಂದರೆಯಾಗುತ್ತದೆ. ನೀರಿಗೆ ಸಾಕಷ್ಟು ಅನುಕೂಲವಾಗಿಲ್ಲ. ಆದ್ದರಿಂದ ರಿಗ್‌ಗಳನ್ನು ರಿಪೇರಿ ಮಾಡಿಸಿ ಅವಕ್ಕೆ ಸ್ಟ್ರಾಂಗ್ ಆಗಿರತಕ್ಕ ಮೆಷಿನ್‌ಗಳನ್ನು ಜೋಡಿಸಿ ಬಲವಾದ ಚಕ್ರ

ಗಳನ್ನು ಅವು ಮುರಿಯದೆ ಇರುವ ಹಾಗೆ ಚೆನ್ನಾಗಿ ರಿಪೇರಿ ಮಾಡಿಸಿ, ಅವುಗಳಿಂದ ಗ್ರಾಮಾಂತರ ಪ್ರದೇಶದ ಜನಗಳು ಹೆಚ್ಚಿನ ಉಪಯೋಗ ಪಡೆಯುವಂತೆ ಸರ್ಕಾರದವರು ಮಾಡಬೇಕು.

ಇನ್ನು ಹರಿಜನ ಕಲ್ಯಾಣ ವಿಷಯ. ಹರಿಜನ ಗಿರಿಜನರಿಗೆ ಸರ್ಕಾರದವರು ಏನೇ ಮಾಡಿದರೂ ಮದ್ಯಪಾನ ನಿರೋಧವನ್ನು ಎಲ್ಲಿಯವರೆಗೆ ಜಾರಿಗೆ ತರುವುದಿಲ್ಲವೋ ಅಲ್ಲಿಯವರೆಗೆ ಇವರು ಅಷ್ಟಾಗಿ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಮದ್ಯಪಾನ ಇದ್ದೇ ಇರುತ್ತದೆ. ಅವರು ಖಂಡಿತವಾಗಿ ಅಭಿವೃದ್ಧಿಗೆ ಬರುವುದಿಲ್ಲ. ನಾನು ಹೆಚ್ಚಿಗೆ ಹರಿಜನ ಗಿರಿಜನರ ವಿಷಯದಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಸರ್ಕಾರದವರು ಹೆಚ್ಚಿಗೆ ಅವರಿಗೆ ಸಹಾಯ ಮಾಡಬೇಕು. ಏಕೆಂದರೆ ಮೊದಲಿನಿಂದಲೂ ನಮ್ಮ ಸಮಾಜ ಅವರನ್ನು ತುಳಿದುಕೊಂಡೇ ಬಂದಿತ್ತು. ಅಂತಹವರನ್ನು ಮೇಲಕ್ಕೆ ಎತ್ತಲೇಬೇಕು ಸರ್ಕಾರದವರು ಆಡಂಬರವಾಗಿ ಅವರಿಗಾಗಿ ಹೆಚ್ಚಿಗೆ ಹಣವನ್ನು ಖರ್ಚು ಮಾಡದೇ ಇದ್ದರೂ ಪರವಾ ಇಲ್ಲ. ಅವರಿಗೆ ಹೆಚ್ಚಿಗೆ ಧನಸಹಾಯ ಮಾಡದೇ ಇದ್ದರೂ, ಅದರಲ್ಲಿ ಕಡಿಮೆ ಮಾಡಿ ಮದ್ಯಪಾನ ನಿರೋಧವನ್ನು ಕೂಡಲೇ ಜಾರಿಗೆ ತರಬೇಕು. ಈ ವಿಚಾರದಲ್ಲಿ ಸರ್ಕಾರದವರು ಅತಿ ಜಾಗ್ರತೆಯಾಗಿ ಮನಸ್ಸು ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ವಸತಿ ವಿಚಾರ. ನಗರ ಮತ್ತು ಸಿಟಿಗಳಲ್ಲಿ ವಸತಿ ಸೌಕರ್ಯ ನಾಗರೀಕರಿಗೆ ಎಷ್ಟು ಪ್ರಾಮುಖ್ಯವೋ ಗ್ರಾಮಾಂತರ ಪ್ರದೇಶಗಳಲ್ಲಿಯೂ ಅಷ್ಟೇ ಪ್ರಾಮುಖ್ಯವಾಗಿದೆ. ಏಕೆಂದರೆ ಅನೇಕರು ಹಳ್ಳಿಗಳಲ್ಲಿ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ಒಳ್ಳೆಯ ಮನೆಗಳು ಇಲ್ಲದಿದ್ದರೂ ಮೂರು ಅಂಕಣಗಳ ಹಂಚಿನ ಮನೆಗಳನ್ನಾದರೂ ಅವರು ಕಟ್ಟಿಕೊಳ್ಳುವುದಕ್ಕೆ ಅಶಕ್ತರಾಗಿದ್ದಾರೆ. ಬೇಸಿಗೆ ಕಾಲದಲ್ಲಂತೂ ನೂರಾರು ಗುಡಿಸಲುಗಳು ಬೆಂದು ಬಹಳ ತೊಂದರೆಯಲ್ಲಿರುವ ನಿದರ್ಶನಗಳೂ ಸಹ ತಮಗೆ ಈಗಾಗಲೇ ಗೊತ್ತಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಸೌಕರ್ಯಗಳನ್ನು ಏರ್ಪಾಡು ಮಾಡುವುದಕ್ಕೆ ಸರ್ಕಾರದವರು ಕೂಡಲೇ ಹೆಚ್ಚಿಗೆ ಹಣ ಸಹಾಯ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ವೃದ್ಧಾಪ್ಯ ವೇತನವನ್ನು 30 ರೂಪಾಯಿಗಳಿಂದ 40 ರೂಪಾಯಿಗಳವರೆಗೆ ಏರಿಸಿದ್ದೀರಿ. ಬಹಳ ಸಂತೋಷದ ವಿಚಾರ. ಆದರೆ ಈ ಯೋಜನೆ ಸರಿಯಾಗಿ ಕಾರ್ಯಗತವಾಗುತ್ತಾ ಇಲ್ಲ. ಏಕೆಂದರೆ, ತಾಲ್ಲೂಕು ಆಫೀಸ್‌ಗಳಲ್ಲಿ, ರೆವಿನ್ಯೂ ಇನ್‌ಸ್ಪೆಕ್ಟರ್ ಆಫೀಸ್‌ಗಳಲ್ಲಿ ಅನೇಕ ಅರ್ಜಿಗಳು ಇತ್ಯರ್ಥವಾಗದೇ ಇನ್ನೂ ಬೇಕಾದಷ್ಟು ಉಳಿದಿವೆ. ವೃದ್ಧರಾಗಿರುವವರು ಸತ್ತು ಹೋದ ಮೇಲೆ ಅವರಿಗೆ

(ಶ್ರೀ ಅನಿವಾಳದ ನಂಜಪ್ಪ)

ವೃದ್ಧ್ಯಾಪ್ಯ ವೇತನ ಮಂಜೂರಾಗಿರುವುದನ್ನು ನಾವು ಎಷ್ಟೋ ನೋಡುತ್ತಿದ್ದೇವೆ ಇದು ಸರಿಯಲ್ಲ. ವೃದ್ಧಾಪ್ಯ ವೇತನಕ್ಕಾಗಿ ಬರುವ ಅರ್ಜಿಗಳು ಒಂದು ತಿಂಗಳೊಳಗೇ ತೀರ್ಮಾನವಾಗಿ ಅವನಿಗೆ ಹಣ ಸಿಗುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಆ ಬಗ್ಗೆ ತೀವ್ರವಾದಂಥ ಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ವಿಷಯ. ಸರ್ಕಾರದವರು ಈಗ ಯಾವುದಾದರೂ ಪದಾರ್ಥದ ಮೇಲೆ ಮಾರಾಟ ತೆರಿಗೆಯನ್ನು ಹಾಕಿದರೆ, ಅದು ಸಾಮಾನ್ಯವಾಗಿ ಸಾಮಾನ್ಯ ಜನಗಳ ಮೇಲೆಯೇ ವಿಶೇಷವಾಗಿ ಬೀಳುತ್ತದೆ. ಇಂತಹ ತೆರಿಗೆಗಳಿಂದ ಜನಗಳ ರಕ್ತವನ್ನು ಹೀರಿದಂತಾಗುತ್ತದೆ. ಇದರಿಂದ ಮಧ್ಯಾವರ್ತಿ ಜನರಿಗೆ ಬಹಳವಾಗಿ ತೊಂದರೆಯಾಗುತ್ತದೆ. ಆದರೂ ಅನೇಕರು ವಿಧಿ ಇಲ್ಲದೆ ಕಾನ್‌ಗ ಸ್ಯಾಕ್ರಿಫೈಸ್ ಮಾಡಿ ಇಂತಹ ತೆರಿಗೆಗಳನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ಈ ಹಣವನ್ನು ವಸೂಲು ಮಾಡುವ ಬಗ್ಗೆ ಅಧಿಕಾರಿಗಳು ಜನರಿಗೆ ಕೊಡುತ್ತಿರುವ ಕಿರುಕುಳವನ್ನು ಕೂಡಲೇ ತಪ್ಪಿಸಬೇಕು. ಇಂತಹ ತೆರಿಗೆಗಳನ್ನು ಸರ್ಕಾರದವರು ಸ್ವಲ್ಪ ವಿವೇಚನೆಯಿಂದ ಹಾಕಿದ್ದರೆ ಬಹಳ ಚೆನ್ನಾಗಿತ್ತು. ಇದರಲ್ಲಿ 5 ಕೋಟಿ ರೂಪಾಯಿಗಳವರೆಗೆ ಉತ್ಪನ್ನ ಜಾಸ್ತಿ ಬರುತ್ತದೆಂದು ಹೇಳಿದ್ದಾರೆ. ಆದರೆ ಈಗಾಗಲೇ ಜನರು ಇಂತಹ ತೆರಿಗೆಗಳನ್ನು ತೆತ್ತಿ ನೊಂದಿದ್ದಾರೆ. ಅನೇಕರು ಸತ್ತು ಹೋಗಿದ್ದಾರೆ ಕೆಲವರು ಬೇಸತ್ತು ಹೋಗಿದ್ದಾರೆ. ಪದಾರ್ಥಗಳಿಗೆ ಅಗಾಗ್ಗೆ ಮಾರಾಟ ತೆರಿಗೆಯನ್ನು ಜಾಸ್ತಿ ಮಾಡುತ್ತಾ ಹೋದರೆ, ಪದಾರ್ಥಗಳ ಧಾರಣೆ ವಿಪರೀತವಾಗಿ ಜಾಸ್ತಿಯಾಗುತ್ತದೆ. ಜನಗಳಿಗೂ ತೊಂದರೆಯಾಗುತ್ತದೆ. ಆಹಾರ ಪದಾರ್ಥಗಳ ಮೇಲೆ ಇತ್ತೀಚೆಗೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಹಾಕಿದ್ದಾರೆ. ಸಾಮಾನ್ಯವಾಗಿ ಹೇಳುವುದಾದರೆ, ಒಂದು ಅಕ್ಕಿ ಚೀಲಕ್ಕೆ ಕೇವಲ 3 4 ರೂಪಾಯಿಗಳಾದರೆ ಈಗ ಒಂದು ಚೀಲಕ್ಕೆ 15 ರೂಪಾಯಿಗಳು ಎಂದು ಹೇಳುವ ಪರಿಸ್ಥಿತಿ ಬರುತ್ತಿದೆ. ನೂರು ನಾಲ್ಕೈದು ಪಟ್ಟು ಜಾಸ್ತಿಯಾಗುತ್ತಿದೆ. ಇದನ್ನು ಅಕ್ಕಿ ಪಡೆಯುವವರು ಕೊಟ್ಟೇ ಕೊಡುತ್ತಾರೆ. ಆದ್ದರಿಂದ ನಾನು ಹೇಳುವುದಿಷ್ಟೇ. ಆಹಾರ ಪದಾರ್ಥಗಳ ಮೇಲೆ ವಿಧಿಸುವ ಮಾರಾಟ ತೆರಿಗೆಯನ್ನು ಒಂದು ಮಾನವೀಯತೆಯ ದೃಷ್ಟಿಯಿಂದ ಪೂರ್ತಿಯಾಗಿ ತೆಗೆಯಬೇಕು ಬಹುಶಃ ಅದನ್ನು ತೆಗೆಯುವುದಕ್ಕೆ ಆಗದಿದ್ದರೆ, ಇದರಲ್ಲಿ ಏಕ ರೂಪವಾದ ಒಂದು ರೇಟನ್ನು ನಿಗದಿ ಮಾಡಬೇಕು. ಮಲ್ಟಿಪಾಯಿಂಟ್ ಟ್ಯಾಕ್ಸ್ ಏನಿದೆಯೋ ಅದನ್ನು ಕೂಡಲೇ ತಪ್ಪಿಸಬೇಕು. ಇಲ್ಲದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಅದೂ ಅಲ್ಲದೆ 10 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು

ವ್ಯವಹಾರ ಇರುವವರಿಗೆ, ಹೆಚ್ಚಿಗೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ 10 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ವ್ಯಾಪಾರ ಮಾಡುವವರಿಗೆ ಇಂಥಾದುನ್ನು ವಿಧಿಸ ಬೇಕು. ಆವನಿಗೆ ಶೇಕಡ ಒಂದೂವರೆಯಷ್ಟು ಕಮಿಷನ್ ಬಂದರೂ ಅದರಲ್ಲಿ ಶೇಕಡ ಒಂದರಷ್ಟು ಅವನು ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಇನ್ನುಳಿದ ಅರ್ಧಭಾಗವನ್ನು ತಾನು ಲಾಭ ಪಡೆಯಬಹುದು.

ಶ್ರೀ ಎಂ. ವೈ. ಘೋರ್ಪಡೆ :—ಈಗ ವಿಧಿಸಿರುವ ಶೇಕಡ 10ರಷ್ಟು ತೆರಿಗೆ ಏನಿದೆಯೋ ಅದನ್ನು ಯಾವಾಗ ಟರ್ನ್‌ಓವರ್ 10 ಲಕ್ಷಕ್ಕೆ ಮೇಲ್ಪಟ್ಟು ಲೆಕ್ಕ ಬರು ತ್ತದೋ ಅಂತಹ ಸಂದರ್ಭಗಳಲ್ಲಿ ಅಂತಹವರು ಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರ ಉದ್ದೇಶ ಅವನ ಲಾಭದಲ್ಲಿ ಸರ್ಕಾರಕ್ಕೆ ಕೊಂಚ ಭಾಗ ಕೊಡ ಬೇಕೆಂಬುದು ನಿಜವೇ ?

ಶ್ರೀ ಅನಿವಾಳದ ನಂಜಪ್ಪ :—ಸರ್ಕಾರದವರು ಇದರ ವರಮಾನ 5 ಕೋಟಿ ರೂಪಾಯಿಗಳೆಂದು ನಿರೀಕ್ಷಿಸುತ್ತಾರೆ ಸಾಮಾನ್ಯವಾಗಿ 5 ಸಾವಿರ ಜನಗಳ ಮೇಲೆ ಈ ತೆರಿಗೆಯನ್ನು ಹಾಕಿದರೂ ತಲಾ 10 ಸಾವಿರ ರೂಪಾಯಿಗಳಷ್ಟು ವರಮಾನ ಬರುತ್ತದೆಯಷ್ಟೇ ಆದರೆ ರೈತನಾದವನು ಅವನ ಕೈಯಿಂದ ಕೊಡುವ ಪರಿಸ್ಥಿತಿ ಯಲ್ಲಿರುವುದಿಲ್ಲ. ಯಾರು ಪದಾರ್ಥಗಳನ್ನು ಬೆಳೆದು ಮಾರ್ಕೆಟಿಗೆ ತೆಗೆದುಕೊಂಡು ಬರುತ್ತಾನೋ ಅಂತಹವನಿಗೆ ಇನ್‌ಡೈರೆಕ್ಟಾಗಿ ಈ ತೆರಿಗೆ ಬೀಳುತ್ತದೆ. ಅವನಿಗೆ ಇದು ಎಫೆಕ್ಟ್ ಆಗುತ್ತದೆ. ಆದ್ದರಿಂದ ಈ ವಿಚಾರವನ್ನು ಈಗಲೇ ಪರಿಶೀಲನೆ ಮಾಡಬೇಕು.

